ಸೋಮವಾರ, ಜುಲೈ 25, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 205 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಂಖ್ಯೆ-ಸುದ್ದಿ

ಸಂಶೋಧನೆಗೆ ನಿರ್ಲಕ್ಷ್ಯ: ನಾವೀನ್ಯ ಸೂಚ್ಯಂಕ ವರದಿಯಲ್ಲಿ ನೀತಿ ಆಯೋಗ ಕಳವಳ

ಮಳೆಯಾದರೆ ಕುಡಿಯಲು ಕೆಸರು ನೀರೇ ಗತಿ! 6

‘ಮುಂದಿನ ತಲೆಮಾರುಗಳಿಗಾಗಿ ಪ್ರಕೃತಿ ರಕ್ಷಿಸಿ’ 6

ಮಲ್ಲಿಕಾರ್ಜುನ ಖರ್ಗೆ ಭೇಟಿ ಬಳಿಕ ಡಾ.ಜಿ.ಪರಮೇಶ್ವರ್ ಹೇಳಿಕೆ

‘ಡಿಕೆಶಿ ಹೇಳಿಕೆ – ಯಾವುದೇ ತಪ್ಪಿಲ್ಲ’ 4

ಕೆಪಿಎಸ್‌ಸಿ: 3,000ಕ್ಕೂ ಹೆಚ್ಚು ಹುದ್ದೆಗಳಿಗೆ ನಡೆದ ಪರೀಕ್ಷೆ

ಬಾರದ ಫಲಿತಾಂಶ: ಆಕ್ರೋಶ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯ ಸರ್ಕಾರದ ನಾನಾ ಇಲಾಖೆಗಳಲ್ಲಿ ಖಾಲಿ ಇರುವ ವಿವಿಧ ವೃಂದಗಳ 3,000ಕ್ಕೂ ಹೆಚ್ಚು ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುತ್ತಿರುವ ಲಕ್ಷಾಂತರ ಅಭ್ಯರ್ಥಿಗಳ ಆಕ್ರೋಶ ಕಟ್ಟೆಯೊಡೆದಿದ್ದು, ಉದ್ಯೋಗಾಕಾಂಕ್ಷಿಗಳು ಕೆಪಿಎಸ್‌ಸಿ ವಿರುದ್ಧವೇ ತಿರುಗಿಬೀಳಲು ನಿರ್ಧರಿಸಿದ್ದಾರೆ.

ಗೆಜೆಟೆಡ್ ಪ್ರೊಬೇಷನರಿ (ಜಿಪಿ) 106 ಹುದ್ದೆಗಳ ನೇಮಕಾತಿಯ ಮುಖ್ಯಪರೀಕ್ಷೆ, ದ್ವಿತೀಯ ದರ್ಜೆ ಸಹಾಯಕ (ಎಸ್‌ಡಿಎ) 1,323, ಲೋಕೋಪಯೋಗಿ ಇಲಾಖೆಯ (ಪಿಡಬ್ಲ್ಯುಡಿ) ಕಿರಿಯ ಎಂಜಿನಿಯರ್ 330, ಸಹಾಯಕ ಎಂಜಿನಿಯರ್ 660, ಗ್ರೂಪ್ ‘ಸಿ’ (ತಾಂತ್ರಿಕೇತರ) 387, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಎಸಿಎಫ್) 16 ಹೀಗೆ ವಿವಿಧ ಹುದ್ದೆಗಳ ನೇಮಕಾತಿಗೆ ಪರೀಕ್ಷೆ ನಡೆದು ಹಲವು ತಿಂಗಳುಗಳೇ ಕಳೆದಿವೆ. ಆದರೆ, ಕೆಪಿಎಸ್‌ಸಿ ಮಾತ್ರ ಫಲಿತಾಂಶ ಪ್ರಕಟಿಸುವ ಲಕ್ಷಣ ಕಾಣುತ್ತಿಲ್ಲ. ಇದರಿಂದ ಅಭ್ಯರ್ಥಿಗಳು ಕಂಗೆಟ್ಟಿದ್ದಾರೆ.

ಪ್ರಜಾವಾಣಿ ವಿಶೇಷ

ಫಲಿತಾಂಶ ವಿಳಂಬದಿಂದ ಹತಾಶೆಗೊಂಡಿರುವ ಅಭ್ಯರ್ಥಿಗಳು ಸೋಮವಾರ (ಜುಲೈ 25) ‘ಉದ್ಯೋಗ ಸೌಧ’ದ (ಕೆಪಿಎಸ್‌ಸಿ ಪ್ರವೇಶ ದ್ವಾರ) ಮುಂಭಾಗದಲ್ಲಿ ಪ್ರತಿಭಟನೆ ನಡೆಸಲಿದ್ದಾರೆ. ಈಗಾಗಲೇ ನಡೆಸಿರುವ ಪರೀಕ್ಷೆಗಳ ಫಲಿತಾಂಶ ತಕ್ಷಣ ಪ್ರಕಟಿಸಬೇಕು, ಎರಡು ವರ್ಷಗಳಿಂದೀಚೆಗೆ ಸರ್ಕಾರ ವಹಿಸಿದ ಹಲವು ಹುದ್ದೆಗಳ ನೇಮಕಾತಿಗೆ ತ್ವರಿತವಾಗಿ ಅಧಿಸೂಚನೆ ಹೊರಡಿಸಬೇಕು, ಕೆಪಿಎಸ್‌ಸಿ ಸುಧಾರಣೆಗೆ ರಚಿಸಿದ್ದ ಪಿ.ಸಿ. ಹೋಟಾ ಸಮಿತಿಯ ಶಿಫಾರಸು ಅನುಷ್ಠಾನಗೊಳಿಸಬೇಕು, ಯುಪಿಎಸ್‌ಸಿ ಮಾದರಿಯಲ್ಲಿ ವಾರ್ಷಿಕ ಪರೀಕ್ಷಾ ವೇಳಾಪಟ್ಟಿ ಬಿಡುಗಡೆ ಮಾಡಬೇಕು ಎಂದು ಉದ್ಯೋಗಾಕಾಂಕ್ಷಿಗಳು ಆಗ್ರಹಿಸಿದ್ದಾರೆ.

ಗೆಜೆಟೆಡ್ ಪ್ರೊಬೇಷನರಿ 106 ಹುದ್ದೆಗಳ ನೇಮಕಾತಿಗೆ ಮುಖ್ಯ ಪರೀಕ್ಷೆ 2021ರ ಫೆಬ್ರುವರಿಯಲ್ಲಿ ನಡೆದಿದ್ದು, 17 ತಿಂಗಳು ಕಳೆದರೂ ಫಲಿತಾಂಶ ಪ್ರಕಟವಾಗಿಲ್ಲ. ಎಸ್‌ಡಿಎ ನೇಮಕಾತಿಗೆ 2021ರ ಅಕ್ಟೋಬರ್‌ನಲ್ಲಿ, ಲೋಕೋಪಯೋಗಿ ಇಲಾಖೆಯ (ಪಿಡಬ್ಲ್ಯುಡಿ) ಜೂನಿಯರ್ ಮತ್ತು ಸಹಾಯಕ ಎಂಜಿನಿಯರ್ ಹುದ್ದೆಗಳ ನೇಮಕಾತಿಗೆ ಡಿಸೆಂಬರ್‌ನಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ನಡೆದಿದೆ. ಕೆಪಿಎಸ್‌ಸಿಯ ವಿಳಂಬ ಧೋರಣೆಯಿಂದ ಪರೀಕ್ಷಾ ಅಕ್ರಮ, ನೇಮಕಾತಿಯಲ್ಲಿ ಭ್ರಷ್ಟಾಚಾರ ನಡೆಯಬಹುದೆಂಬ ಅನುಮಾನ ಸರ್ಕಾರಿ ಹುದ್ದೆಯ ನಿರೀಕ್ಷೆಯಲ್ಲಿರುವ ಆಕಾಂಕ್ಷಿಗಳನ್ನು ಕಂಗೆಡುವಂತೆ ಮಾಡಿದೆ.

6ನೇ ಪುಟ ನೋಡಿ

‘ಅತಿ ಶೀಘ್ರ ಫಲಿತಾಂಶ’



‘ನಾನು ಮೊನ್ನೆಯಷ್ಟೆ ಹುದ್ದೆ ವಹಿಸಿಕೊಂಡಿದ್ದೇನೆ. ಗೆಜೆಟೆಡ್ ಪ್ರೊಬೇಷನರಿ 106 ಹುದ್ದೆಗಳ ಫಲಿತಾಂಶ ವಿಳಂಬವನ್ನು ಗಂಭೀರವಾಗಿ ಪರಿಗಣಿಸಿದ್ದೇನೆ. ಇತರ ಹುದ್ದೆಗಳಿಗೆ ನಡೆದ ಪರೀಕ್ಷೆಗಳ ಫಲಿತಾಂಶಕ್ಕೆ ಸಂಬಂಧಿಸಿದಂತೆ ವಿಭಾಗಗಳ ಜೊತೆ ಸಭೆ ನಡೆಸಿ ಚರ್ಚಿಸಿದ್ದೇನೆ. ಕೆಲವು ಪರೀಕ್ಷೆಗಳ ಮೌಲ್ಯಮಾಪನ ಸೇರಿದಂತೆ ಪ್ರಕ್ರಿಯೆ ಪೂರ್ಣಗೊಂಡಿದೆ. ಫಲಿತಾಂಶ ಪ್ರಕಟಿಸಬೇಕು ಅಷ್ಟೆ. ಕೋವಿಡ್ ಕಾರಣಕ್ಕೆ ಪರೀಕ್ಷಾ ನಿಯಂತ್ರಕರು 15 ದಿನ ರಜೆಯಲ್ಲಿದ್ದರು. ಅತಿ ಶೀಘ್ರದಲ್ಲಿ ಫಲಿತಾಂಶ ಕೊಡುತ್ತೇನೆ’.

ವಿಕಾಸ್ ಕಿಶೋರ್ ಸುರಳ್ಕರ್, ಕಾರ್ಯದರ್ಶಿ, ಕೆಪಿಎಸ್‌ಸಿ

ರಾಷ್ಟ್ರಪತಿ ಮುರ್ಮು ಪ್ರಮಾಣ ಇಂದು



ನವದೆಹಲಿ (ಪಿಟಿಐ): ದ್ರೌಪದಿ ಮುರ್ಮು ಅವರು ಭಾರತದ 15ನೇ ರಾಷ್ಟ್ರಪತಿಯಾಗಿ ಸೋಮವಾರ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಬೆಳಿಗ್ಗೆ 10.15ಕ್ಕೆ ಪ್ರಮಾಣವಚನ ಕಾರ್ಯಕ್ರಮ ನಡೆಯಲಿದೆ. 6

ಚಿನಕುರಳಿ

ಪ್ರಕಾಶ್ ಶೆಟ್ಟಿ



ಅಥ್ಲೆಟಿಕ್ಸ್ ಆಗಸದ ‘ಬೆಳ್ಳಿ’ ಕಿರಣ ನೀರಜ್

ಅಮೆರಿಕದ ಯೂಜಿನ್‌ನಲ್ಲಿ ಭಾನುವಾರ ನಡೆದ ವಿಶ್ವ ಅಥ್ಲೆಟಿಕ್ಸ್‌ನ ಪುರುಷರ ಜಾವೆಲಿನ್ ಥ್ರೋನಲ್ಲಿ ಭಾರತದ ನೀರಜ್ ಚೋಪ್ರಾ ಬೆಳ್ಳಿ ಜಯಿಸಿದರು

ಆ್ಯಂಡರ್ಸನ್ ಪೀಟರ್ಸ್; ಚಿನ್ನ (ಗ್ರೆನಡಾ) **90.54** ಮೀ

ನೀರಜ್ ಚೋಪ್ರಾ; ಬೆಳ್ಳಿ (ಭಾರತ) **88.13** ಮೀ

ಯಾಕುಬ್ ವಾದ್ಲೆಹ್ (ಜೆಕ್ ಗಣರಾಜ್ಯ) **88.09** ಮೀ




ನೀರಜ್ ಚೋಪ್ರಾ

- ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಭಾರತಕ್ಕೊಲಿದ ಎರಡನೇ ಪದಕ
- 2003ರಲ್ಲಿ ಅಂಜು ಬಾಬಿ ಜಾರ್ಜ್‌ಗೆ ಲಾಂಗ್‌ಜಂಪ್‌ನಲ್ಲಿ ಕಂಚು
- ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಜಯಿಸಿದ್ದ ನೀರಜ್

ಚಿತ್ತೂರಿನಲ್ಲಿ ಅಪಘಾತ ಪಿಎಸ್‌ಐ ಸೇರಿ ಮೂವರ ಸಾವು

ಬೆಂಗಳೂರು: ಆಂಧ್ರಪ್ರದೇಶದ ಚಿತ್ತೂರು ಬಳಿ ಭಾನುವಾರ ಬೆಳಿಗ್ಗೆ ಅಪಘಾತ ಸಂಭವಿಸಿದ್ದು, ಬೆಂಗಳೂರಿನ ಶಿವಾಜಿನಗರ ಠಾಣೆ ಪಿಎಸ್‌ಐ ಹಾಗೂ ಕಾನ್‌ಸ್ಟೆಬಲ್ ಸೇರಿ ಮೂವರು ಮೃತಪಟ್ಟಿದ್ದಾರೆ. ‘ಗಾಂಜಾ ಸಾಗಣೆ ಹಾಗೂ ಮಾರಾಟ ಮಾಡುತ್ತಿದ್ದ ಆರೋಪಿಗಳನ್ನು ಬಂಧಿಸಲೆಂದು ಶಿವಾಜಿನಗರ ಠಾಣೆ ಪೊಲೀಸರ ತಂಡ, ಆಂಧ್ರಪ್ರದೇಶಕ್ಕೆ ಹೋಗಿತ್ತು. ಇದೇ ಸಂದರ್ಭದಲ್ಲೇ ಅಪಘಾತ ಸಂಭವಿಸಿದೆ. 4

ದೆಹಲಿಯಲ್ಲೂ ಮಂಕಿಪಾಕ್ಸ್ ಪತ್ತೆ



ನವದೆಹಲಿ: ಪಶ್ಚಿಮ ದೆಹಲಿಯಲ್ಲಿ 34 ವರ್ಷದ ವ್ಯಕ್ತಿಗೆ ಮಂಕಿಪಾಕ್ಸ್ ವೈರಾಣು ಸೋಂಕು ಇರುವುದು ಭಾನುವಾರ ದೃಢಪಟ್ಟಿದ್ದು, ದೇಶದಲ್ಲಿ ಒಟ್ಟು ಪ್ರಕರಣಗಳ ಸಂಖ್ಯೆ ನಾಲ್ಕಕ್ಕೆ ಏರಿಕೆಯಾಗಿದೆ. ರೋಗ ಲಕ್ಷಣಗಳು ಕಾಣಿಸಿಕೊಂಡ ನಂತರ ವ್ಯಕ್ತಿಯನ್ನು ಮೂರು ದಿನಗಳ ಹಿಂದೆಯೇ ಇಲ್ಲಿನ ಲೋಕ ನಾಯಕ ಜಯಪ್ರಕಾಶ ಆಸ್ಪತ್ರೆಯಲ್ಲಿ ಪ್ರತ್ಯೇಕವಾಗಿರಿಸಿ, ಚಿಕಿತ್ಸೆ ನೀಡಲಾಗುತ್ತಿದೆ. 6



ಬೆಂಗಳೂರಿನ 'ಗೀತಂ' ವಿವಿಯ 13ನೇ ಘಟಿಕೋತ್ಸವದಲ್ಲಿ ಚಲನಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರಿಗೆ ಡಿ.ಲಿಟ್ ಪದವಿ ಪ್ರದಾನ ಮಾಡಲಾಯಿತು

'ಗೀತಂ' ವಿ.ವಿ ಘಟಿಕೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೀತಂ' ವಿ.ವಿಯ 13ನೇ ಘಟಿಕೋತ್ಸವದಲ್ಲಿ ಚಲನಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರಿಗೆ ಡಿ.ಲಿಟ್ ಹಾಗೂ ವಿಜ್ಞಾನಿ ಪ್ರೊ.ವಿ. ರಾಜಾರಾಮನ್ ಅವರಿಗೆ ಡಿ.ಸೈನ್ಸ್ ಪದವಿ ಪ್ರದಾನ ಮಾಡಲಾಯಿತು.

ಇದೇ ವೇಳೆ ಎಂಜಿನಿಯರಿಂಗ್ 426, ವಿಜ್ಞಾನ 21, ಮ್ಯಾನೇಜ್‌ಮೆಂಟ್ 59 ಸೇರಿ ಸ್ನಾತಕೋತ್ತರ ಹಾಗೂ ಪದವಿ ಕೋರ್ಸ್‌ನ 506 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಬಿ.ಟೆಕ್ ವಿಭಾಗದ (ಇಸಿಇ) ಜಿ.ಚೈತ್ರಾ, ಬಿ.ಟೆಕ್‌ನ (ಸಿಎಸ್‌ಇ) ವಿಭಾಗದ ಅಕುಲರುಚಿತಾ, ಉತ್ತಮ ಶೈಕ್ಷಣಿಕ ಸಾಧನೆಗೆ ಬಿಬಿಎ ವಿಭಾಗದ ಆರ್.ಜ್ಯೋತ್ಸ್ನಾ, ಸಂಖ್ಯಾಶಾಸ್ತ್ರದ ಗೋರಂಟ್ಲಾ ಸೌಜನ್ಯಾಗೆ ಚಿನ್ನದ ಪದಕ ಪ್ರದಾನ ಮಾಡಲಾಯಿತು.

ಪ್ರೊ.ಸರಿತ್ ಕುಮಾರ್ ದಾಸ್, ಪ್ರೊ.ಎಂ.ಎಸ್.ಮೋಹನ್ ಕುಮಾರ್, ಪ್ರೊ.ದಯಾನಂದ ಸಿದ್ದವಟ್ಟಂ, ಭರತ್, ಎಂ.ಭಾರದ್ವಾಜ್, ಡಾ.ಡಿ. ಗುಣಶೇಖರನ್, ಗೌತಮ ರಾವ್ ಹಾಜರಿದ್ದರು.

ಹೊರವರ್ತುಲ ರಸ್ತೆ ಸ್ವಚ್ಛತೆಗೆ ಮುಖ್ಯ ಆಯುಕ್ತ ಸೂಚನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ವಿವಿಧ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ
- ಬೀದಿ ದೀಪಗಳಿಗೆ ಅಡ್ಡವಿರುವ ಕೊಂಬೆಗಳನ್ನು ಕತ್ತರಿಸಲು ಸೂಚನೆ

ಬೆಂಗಳೂರು: ನಗರದ ಎಲ್ಲ ಹೊರ ವರ್ತುಲ ರಸ್ತೆಗಳಲ್ಲಿ ಸ್ವಚ್ಛತೆ ಕಾಪಾಡಬೇಕು. ಬೀದಿ ದೀಪಗಳಿಗೆ ಅಡ್ಡವಿರುವ ಮರದ ಕೊಂಬೆಗಳನ್ನು ಕತ್ತರಿಸಬೇಕು. ಪಾದಚಾರಿ ಮಾರ್ಗ ದುರಸ್ತಿಪಡಿಸಿ, ರಸ್ತೆ ಬದಿ ಹಾಕಿರುವ ಕಟ್ಟಡ ಸಾಮಗ್ರಿಗಳನ್ನು ತೆರವುಗೊಳಿಸಿ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ಹೊರ ವರ್ತುಲ ರಸ್ತೆಗಳಲ್ಲಿ ಶನಿವಾರ ರಾತ್ರಿ 1.15ರವರೆಗೆ ತಪಾಸಣೆ ನಡೆಸಿದ ಮುಖ್ಯ ಆಯುಕ್ತರು, ವಿವಿಧ ಕಾಮಗಾರಿಗಳನ್ನು ಪರಿಶೀಲಿಸಿದರು.

ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ಬಿಎಂಆರ್‌ಸಿಎಲ್ ವತಿಯಿಂದ ಡಾಂಬರೀಕರಣ ಮಾಡಲಾಗಿದೆ. ಬಸ್ ನಿಲ್ದಾಣದ ಬಳಿಯ ಸರ್ವೀಸ್ ರಸ್ತೆಯ ಮೇಲೆ ಹೆಚ್ಚು ನೀರು ನಿಲ್ಲುತ್ತಿದ್ದು, ತಾತ್ಕಾಲಿಕವಾಗಿ ಪಂಪ್ ಅಳವಡಿಸಿ ರಾಜಕಾಲುವೆಗೆ ನೀರು ಹರಿದು ಹೋಗುವಂತೆ ಮಾಡಲು ಸೂಚಿಸಿದರು.

ಸಾರಕ್ಕಿ ಜಂಕ್ಷನ್‌ನಲ್ಲಿ ನಾಲ್ಕೂ ಕಡೆ ವಾಹನಗಳಿಗೆ ಸಿಗ್ನಲ್ ಫ್ರೀ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಕಾಮಾಕ್ಯ ಚಿತ್ರಮಂದಿರ ಜಂಕ್ಷನ್ ಬಳಿ ಪುನೀತ್ ರಾಜ್ ಕುಮಾರ್ ರಸ್ತೆ ಮಾರ್ಗದಲ್ಲಿ ಪಾದಚಾರಿ ಮಾರ್ಗವನ್ನು ದುರಸ್ತಿಪಡಿಸಬೇಕು. ಅನಧಿಕೃತವಾಗಿ ಅಳವಡಿಸಿರುವ ಒ.ಎಫ್.ಸಿ ಕೇಬಲ್‌ಗಳನ್ನು ತೆರವು ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಿ.ಇ.ಎಸ್ ಕಾಲೇಜ್ ಬಳಿ ಸರ್ವೀಸ್ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಕಟ್ಟಡ ಭಗ್ನಾವಶೇಷಗಳ ರಾಶಿ ಬಿದ್ದಿದ್ದು, ಅದನ್ನು ಕೂಡಲೆ ತೆರವುಗೊಳಿಸಲು ಘನತ್ಯಾಜ್ಯ ವಿಭಾಗದ ಮುಖ್ಯ ಎಂಜಿನಿಯರ್‌ಗೆ ಸೂಚಿಸಿದರು. ನಾಯಂಡಹಳ್ಳಿ ಜಂಕ್ಷನಲ್ಲಿ ಮಳೆ ನೀರು ನಿಲ್ಲದಂತೆ ಕ್ರಮ ಕೈಗೊಳ್ಳಲು ಸೂಚಿಸಿದರು.

ಸುಮನಹಳ್ಳಿ ಮೇಲ್ಸೇತುವೆ ಬಳಿ ಕೊಟ್ಟಿಗೆ ಪಾಳ್ಯ ರಸ್ತೆ ಮಾರ್ಗದಲ್ಲಿಯೂ ಒಂದು ಪಾದಚಾರಿ ಮೇಲ್ಸೇತುವೆ ನಿರ್ಮಾಣ ಮಾಡಲು ಸೂಚಿಸಿದರು. ನಾಯಂಡಹಳ್ಳಿ ಮೂಲಕ ಗೊರಗುಂಟೆ ಪಾಳ್ಯ ಜಂಕ್ಷನ್ ಗೆ ಬರುವ ಮಾರ್ಗದಲ್ಲಿ ತುಮಕೂರು ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಶೀಘ್ರ ಪೂರ್ಣಗೊಳಿಸಲು ರಸ್ತೆ ಮೂಲಸೌಕರ್ಯ ಮುಖ್ಯ ಎಂಜಿನಿಯರ್‌ಗೆ ಸೂಚಿಸಿದರು.

ಹೆಬ್ಬಾಳ ಮಾರ್ಗದಿಂದ ಗೊರಗುಂಟೆ ಪಾಳ್ಯ ಜಂಕ್ಷನ್ ಬಳಿ ತಾಜ್ ಹೋಟೆಲ್ ಪಾಲಿಕೆ ಜಾಗದಲ್ಲಿ ಗೋಡೆ ನಿರ್ಮಾಣ ಮಾಡುತ್ತಿರುವುದನ್ನು ತೆರವುಗೊಳಿಸಲು ಆಯುಕ್ತರು ಸೂಚಿಸಿದರು. ಬಿಬಿಎಂಪಿ ವ್ಯಾಪ್ತಿಯ ಎಂಟೂ ವಲಯಗಳ ವ್ಯಾಪ್ತಿಗಳಲ್ಲಿ ವಿಶೇಷ ಆಯುಕ್ತರು, ಜಂಟಿ ಆಯುಕ್ತರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಶನಿವಾರ ರಾತ್ರಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿದರು.

'ಇಲ್ಲದ ಕುರ್ಚಿಗಾಗಿ ಕಾಂಗ್ರೆಸ್‌ನಲ್ಲಿ ಕಚ್ಚಾಟ'

ಬೆಂಗಳೂರು: 'ಮುಖ್ಯಮಂತ್ರಿ ಹುದ್ದೆ ಯಾರಪ್ಪನ ಆಸ್ತಿಯೂ ಅಲ್ಲ. ಕಾಂಗ್ರೆಸ್ ಪಕ್ಷದ ನಾಯಕರು ಇಲ್ಲದ ಕುರ್ಚಿಗಾಗಿ ಕಚ್ಚಾಡುತ್ತಿದ್ದಾರೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಲೇವಡಿ ಮಾಡಿದರು.

ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಜ್ಯದಲ್ಲಿ ಮತ್ತೆ ಬಿಜೆಪಿಯೇ ಅಧಿಕಾರಕ್ಕೆ ಬರುತ್ತದೆ. ಎಂದು ಹೇಳಿದರು.

ಕಟ್ಟಡ ಕುಸಿದು ಯುವಕ ಸಾವು

ನವದೆಹಲಿ(ಪಿಟಿಐ): ಈಶಾನ್ಯ ದೆಹಲಿಯ ಮುಸ್ತಾಫಬಾದ್ ಪ್ರದೇಶದಲ್ಲಿ ಭಾನುವಾರ ಮೂರು ಅಂತಸ್ತಿನ ಕಟ್ಟಡ ಕುಸಿದು ಯುವಕರೊಬ್ಬರು ಮೃತಪಟ್ಟಿದ್ದು, ಆರು ಮಂದಿಯನ್ನು ರಕ್ಷಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸುಫಿಯಾನ್ (20) ಮೃತ ಯುವಕ. ಪೊಲೀಸರು, ಅಗ್ನಿ ಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಅವಶೇಷಗಳ ಅಡಿಯಲ್ಲಿ ಸಿಲುಕಿಕೊಂಡಿದ್ದವರನ್ನು ರಕ್ಷಿಸಿದ್ದಾರೆ. ಕಟ್ಟಡದ ಮಾಲೀಕನ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಸಂಸದ ತೇಜಸ್ವಿ ಸೂರ್ಯ ರಾಜೀನಾಮೆಗೆ ಎಎಪಿ ಆಗ್ರಹ

ಬೆಂಗಳೂರು: 'ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ನಿವಾಸದ ಎದುರು ದಾಂದಲೆ ನಡೆಸಿದ ಪ್ರಕರಣದ ಆರೋಪ ಪಟ್ಟಿಯಲ್ಲಿ ಸಂಸದ ತೇಜಸ್ವಿ ಸೂರ್ಯ ಹೆಸರಿದ್ದು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಎಎಪಿ ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ. ಸದಂ ಆಗ್ರಹಿಸಿದರು.

'ಕ್ಷೇತ್ರದ ಸಮಸ್ಯೆ ಪರಿಹರಿಸಲು ಬೆಂಗಳೂರು ದಕ್ಷಿಣದ ಜನರು ತೇಜಸ್ವಿ ಅವರನ್ನು ಸಂಸದರನ್ನಾಗಿ ಆಯ್ಕೆ ಮಾಡಿದ್ದಾರೆ. ಇವರು ದೇಶದ ಯುವಜನರನ್ನು ಗೂಂಡಾಗಿರಿಗೆ ಬಳಸಿಕೊಳ್ಳುವುದರಲ್ಲಿ ನಿರತರಾಗಿದ್ದಾರೆ. ಮಾರ್ಚ್ 30ರಂದು ಕೇಜ್ರಿವಾಲ್ ನಿವಾಸದ ಮೇಲೆ ನಡೆದ ದಾಳಿ ಪ್ರಕರಣದಲ್ಲಿ ತೇಜಸ್ವಿ ಸೂರ್ಯ ಆರೋಪಿ ಆಗಿದ್ದರು' ಎಂದು ಭಾನುವಾರ ಮಾಧ್ಯಮಗಳಿಗೆ ತಿಳಿಸಿದರು.

ರಾಷ್ಟ್ರ ನಿರ್ಮಾಣಕ್ಕೆ ಬಳಕೆಯಾಗಬೇಕಾದ ಯುವಜನತೆಯನ್ನು ಬಿಜೆಪಿಯು ಕ್ರಿಮಿನಲ್‌ಗಳನ್ನಾಗಿ ಮಾಡುತ್ತಿದೆ. ಮುಖ್ಯಮಂತ್ರಿ ನಿವಾಸದ ಮೇಲೆ ದಾಳಿ ಮಾಡುವಷ್ಟು ಇವರು ಮುಂದುವರಿದಿರುವುದು ಅತ್ಯಂತ ಅಪಾಯಕಾರಿ. ಬೆಂಗಳೂರು ದಕ್ಷಿಣ ಕ್ಷೇತ್ರಕ್ಕೆ ತೇಜಸ್ವಿ ರಾಷ್ಟ್ರ ಮಟ್ಟದಲ್ಲಿ ಕಳಂಕ ತಂದಿದ್ದಾರೆ' ಎಂದರು.

'ದಾಳಿಯಲ್ಲಿ ಭಾಗಿಯಾಗಿದ್ದಕ್ಕೆ ತೇಜಸ್ವಿ ಹಾಗೂ ಅವರ ಗೂಂಡಾ ಕಾರ್ಯಕರ್ತರಿಗೆ ಬಿಜೆಪಿಯ ಸನ್ಮಾನವನ್ನೂ ಮಾಡಿದೆ. ದೆಹಲಿ ಪೊಲೀಸರು ಕೇಂದ್ರ ಸರ್ಕಾರದ ಹಿಡಿತದಲ್ಲಿರುವುದನ್ನು ದುರ್ಬಳಕೆ ಮಾಡಿಕೊಂಡು ದಾಳಿ ಮಾಡಿ ಸಂಭ್ರಮಿಸುವುದು ಬಿಜೆಪಿಯ ವಿಕೃತ ಮನೋಭಾವನೆಗೆ ಸಾಕ್ಷಿಯಾಗಿದೆ' ಎಂದರು.

ಕಾಂಗ್ರೆಸ್: ಸ್ವಾತಂತ್ರ್ಯೋತ್ಸವ ನಡಿಗೆ



ರಾಜರಾಜೇಶ್ವರಿನಗರ: ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೈಗೊಂಡಿರುವ ಸ್ವಾತಂತ್ರ್ಯೋತ್ಸವ ನಡಿಗೆಯು ಜಾಲಹಳ್ಳಿಯಲ್ಲಿ ಭಾನುವಾರ ನಡೆಯಿತು.

ತ್ರಿವರ್ಣ ಧ್ವಜವನ್ನು ಹಿಡಿದು ಸಂಸದ ಡಿ.ಕೆ.ಸುರೇಶ್, ಕಾಂಗ್ರೆಸ್ ನಾಯಕಿ ಎಚ್.ಕುಸುಮಾ, ಕೆಪಿಸಿಸಿ ಪ್ರಚಾರ ಸಮಿತಿ ಸಂಚಾಲಕ ಎಂ.ತಿಬ್ಬೇಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋಪಾಲ್, ರಾಂಪುರ ನಾಗೇಶ್, ವಿವಿಧ ವಾರ್ಡ್ ಅಧ್ಯಕ್ಷ ಕೃಷ್ಣಮೂರ್ತಿ, ಪಾರ್ಥಗೌಡ, ಯುವ ಕಾಂಗ್ರೆಸ್‌ನ ಕೃಷ್ಣ, ಶಶಾಂಕ್, ರಾಜರಾಜೇಶ್ವರಿನಗರ ನಗರಸಭೆ ಮಾಜಿ ಅಧ್ಯಕ್ಷ ಹನುಮಂತರಾಯಪ್ಪ, ಕೆಪಿಸಿಸಿ ಸದಸ್ಯ ಕೆ.ಆರ್.ಮಂಜುನಾಥ್, ರಾಜ್ಯ ಮಹಿಳಾ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಸರಸ್ವತಮ್ಮ 20 ಕಿ.ಮೀ ಪಾದಯಾತ್ರೆ ನಡೆಸಿದರು. ಪಾದಯಾತ್ರೆಗೆ ನೂರಾರು ಮಹಿಳೆಯರು, ಯುವಕರು ಸಾಥ್ ನೀಡಿದರು.

ಡಿ.ಕೆ.ಸುರೇಶ್ ಮಾತನಾಡಿ ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳು ತುಂಬಿದೆ. ತ್ಯಾಗ, ಬಲಿದಾನದ ಮೂಲಕ ಸ್ವಾತಂತ್ರ್ಯ ತಂದು ಕೊಟ್ಟ ಮಹನೀಯರ ಸ್ಮರಣೆ, ರಾಷ್ಟ್ರದ ಏಕತೆ, ಸಾಮರಸ್ಯ ಕಾಪಾಡುವುದು ಪಾದಯಾತ್ರೆ ಸಮಯದಲ್ಲಿ ಈ ಭಾಗದ ಮಹನೀಯರನ್ನು ಗೌರವಿಸುವುದು ಕಾರ್ಯಕ್ರಮದ ಉದ್ದೇಶ. ಪಾದಯಾತ್ರೆ ಮೂಲಕ ಸ್ವಾತಂತ್ರ್ಯೋತ್ಸವದ ವಿಷಯಗಳನ್ನು ಯುವ ಜನಾಂಗ, ಮಕ್ಕಳಿಗೆ ತಿಳಿಸಲಾಗುವುದು ಎಂದರು.

ವೈಚಾರಿಕ ದಾಳಿ ಪ್ರತಿರೋಧಕ್ಕೆ ಒಗ್ಗಟ್ಟು ಇರಲಿ: ಪ್ರಕಾಶ ಭಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ಹಾಗೂ ಆರ್‌ಎಸ್‌ಎಸ್ ಮಾಡುತ್ತಿರುವ ವೈಚಾರಿಕ ದಾಳಿ ಪ್ರತಿರೋಧಿಸಲು ನಾವೆಲ್ಲರೂ ವೈಚಾರಿಕ ಹಾಗೂ ಸಂಘಟನಾತ್ಮಕವಾಗಿ ಒಗ್ಗಟ್ಟಾಗಬೇಕು' ಎಂದು ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ರಾಷ್ಟ್ರೀಯ ಅಧ್ಯಕ್ಷ ಪ್ರಕಾಶ ಭಾಯಿ ಶಾ ಕರೆ ನೀಡಿದರು.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ಭಾನುವಾರ 'ಭಾರತದ ಇತಿಹಾಸದ ಮರುರಚನೆಯ ಹೆಸರಿನಲ್ಲಿ ಇತಿಹಾಸ ತಿರುಚುವಿಕೆ' ಕುರಿತು ಏರ್ಪಡಿಸಿದ್ದ ರಾಷ್ಟ್ರ ಮಟ್ಟದ ವೆಬಿನಾರ್‌ನಲ್ಲಿ ಮಾತನಾಡಿದರು.

'ಶೈಕ್ಷಣಿಕ ದೃಷ್ಟಿಯಿಂದ ವೆಬಿನಾರ್ ಮಾಡುತ್ತಿಲ್ಲ. ಸೈದ್ಧಾಂತಿಕ ವಿಚಾರಧಾರೆಯ ಸಂಘರ್ಷವಾಗಿದೆ. ಒಂದು ಧರ್ಮ ಅಥವಾ ಸಿದ್ಧಾಂತದ ಮೇಲೆ ವ್ಯಾಪಕವಾದ ದೇಶದ ಇತಿಹಾಸವನ್ನು ವ್ಯಾಖ್ಯಾನಿಸಲು ಸಾಧ್ಯವಿಲ್ಲ' ಎಂದರು.

ಇತಿಹಾಸಕಾರ ಪ್ರೊ.ಇರ್ಫಾನ್ ಹಬೀಬ್ ಮಾತನಾಡಿ, 'ಇತಿಹಾಸದ ರಚನೆಯಲ್ಲಿ ನಿಖರತೆ, ಸಮಗ್ರತೆ ತುಂಬಾ ಮುಖ್ಯ. ಭಾರತದ ಇತಿಹಾಸವನ್ನು ನಿಖರ ಹಾಗೂ ಸಮಗ್ರವಾಗಿ ರಚಿಸುವಲ್ಲಿ ಹಲವಾರು ಇತಿಹಾಸಕಾರರು ಶ್ರಮಿಸಿದ್ದಾರೆ. ಇತಿಹಾಸಕಾರರಲ್ಲಿಯೂ ಭಿನ್ನಾಭಿಪ್ರಾಯ ಇದ್ದರೂ, ಅವರೆಲ್ಲರೂ ನೈಜ ಸಂಗತಿಗಳ ಆಧಾರದ ಮೇಲೆ ವಾದ ಮಂಡಿಸುತ್ತಿದ್ದರು. ಆದರೆ, ಇಂದಿನ ಆಳ್ವಿಕರ ಅಣತಿಯಂತೆ ಇತಿಹಾಸ ರಚಿಸಲು ಹೊರಟಿರುವವರು ಕೇವಲ ಕಾಲ್ಪನಿಕ ಸಂಗತಿ ಸೃಷ್ಟಿಸಿಕೊಂಡು ತಮಗೆ ಬೇಕಾದಂತೆ ಇತಿಹಾಸವನ್ನು ರಚಿಸುತ್ತಿರುವುದು ಖಂಡನೀಯ' ಎಂದು ಹೇಳಿದರು.

ಚೆನ್ನೈ ವಿವೇಕಾನಂದ ಕಾಲೇಜಿನ ನಿವೃತ್ತ ಇತಿಹಾಸ ಪ್ರಾಧ್ಯಾಪಕ ಪ್ರೊ.ಎ.ಕರುಣಾನಂದನ್, 'ಇತಿಹಾಸದಲ್ಲಿ ಹೊಸ ಹೊಸ ಸಂಶೋಧನೆಗಳು ಒಳಗೊಳ್ಳುತ್ತವೆ. ಆದರೆ, ಇದನ್ನು ಪರಿಶೀಲಿಸುವುದನ್ನು ಇತಿಹಾಸಕಾರರು ಮಾಡಬೇಕೆ ಹೊರತು ಸರ್ಕಾರ ಹಾಗೂ ರಾಜಕಾರಣಿಗಳು ಅಲ್ಲ. ವ್ಯಾಖ್ಯಾನ, ಪುನರ್ ವ್ಯಾಖ್ಯಾನವು ಇತಿಹಾಸ ಬಯಸುತ್ತದೆ. ಆದರೆ ತಿರುಚುವಿಕೆಯನ್ನು ಅಲ್ಲ' ಎಂದು ವಿಶ್ಲೇಷಿಸಿದರು.

'ಬಿಜೆಪಿ ಸರ್ಕಾರವು ತನ್ನ ರಾಜಕೀಯ ಗುಪ್ತಕಾರ್ಯಸೂಚಿಯನ್ನು ಶಿಕ್ಷಣದಲ್ಲಿ ತೂರಿಸಲು ಪ್ರಯತ್ನಿಸುತ್ತಿದೆ. ಇದು ಪ್ರಜಾಸತ್ತಾತ್ಮಕ, ಧರ್ಮನಿರಪೇಕ್ಷ, ಆಧುನಿಕ ಭಾರತದ ಪರಿಕಲ್ಪನೆಗೆ ವಿರುದ್ಧವಾದುದು. ಭಾರತವು ವೈವಿಧ್ಯತೆ ಹೊಂದಿದೆ. ಆದರೆ, ಈ ವೈವಿಧ್ಯತೆ ನಾಶ ಮಾಡುವ ಹುನ್ನಾರ ಮಾಡಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಂಬೈ ಐಐಟಿಯ ನಿವೃತ್ತ ಪ್ರಾಧ್ಯಾಪಕ ಪ್ರೊ.ರಾಮ್ ಪುನಿಯಾನಿ, ದೆಹಲಿ ವಿಶ್ವವಿದ್ಯಾಲಯದ ಶಿಕ್ಷಣಶಾಸ್ತ್ರದ ನಿವೃತ್ತ ಡೀನ್ ಪ್ರೊ.ಅನಿತಾ ರಾಮ್‌ಪಾಲ್, ಅಸ್ಸಾಂ ರಾಜ್ಯದ ಪ್ರೊ.ಪ್ರದೀಪ ಮಹಾಪಾತ್ರ ವಿಚಾರ ಮಂಡಿಸಿದರು.

ಸ್ಮಶಾನಕ್ಕೆ ಜಾಗ: ₹6 ಕೋಟಿ ಬಿಡುಗಡೆ

ಬೆಂಗಳೂರು: ಸಾರ್ವಜನಿಕ ಸ್ಮಶಾನ ಸೌಲಭ್ಯ ಕಲ್ಪಿಸಲು ಸರ್ಕಾರಿ ಜಮೀನು ಲಭ್ಯ ಇಲ್ಲದ ಗ್ರಾಮಗಳಲ್ಲಿ ಖಾಸಗಿ ಭೂ ಮಾಲೀಕರಿಂದ ಜಮೀನು ಖರೀದಿಸಲು ಅನುದಾನ ಕೋರಿ ತಕ್ಷಣ ಪ್ರಸ್ತಾವನೆ ಸಲ್ಲಿಸುವಂತೆ ಎಲ್ಲ ಜಿಲ್ಲಾಧಿಕಾರಿಗಳಿಗೆ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಪತ್ರ ಬರೆದಿದ್ದಾರೆ.

'ಖಾಸಗಿ ಭೂ ಮಾಲೀಕರಿಂದ ಜಮೀನು ಖರೀದಿಸಿ ಸ್ಮಶಾನಕ್ಕೆ ಕಾಯ್ದಿರಿಸಲು ಈಗಾಗಲೇ ₹ 6 ಕೋಟಿ ಬಿಡುಗಡೆ ಮಾಡಲಾಗಿದೆ. ಹೀಗಾಗಿ, ಅನುದಾನ ಅಗತ್ಯ ಇದ್ದವರು ಪ್ರಸ್ತಾವನೆ ಸಲ್ಲಿಸಬೇಕು' ಎಂದು ಪತ್ರದಲ್ಲಿ ಅವರು ತಿಳಿಸಿದ್ದಾರೆ.


28ಕ್ಕೆ ವಿಚಾರ ಸಂಕಿರಣ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ನಾಡಪ್ರಭು ಕೆಂಪೇಗೌಡ ಮಾನವಿಕ ಮತ್ತು ಸಮಾಜ ವಿಜ್ಞಾನಗಳ ಕೇಂದ್ರ ಹಾಗೂ ಇತಿಹಾಸ ವಿಭಾಗದ ಸಹಯೋಗದಲ್ಲಿ ಇದೇ 28, 29ರಂದು ಯಲಹಂಕ ನಾಡಪ್ರಭುಗಳ ಸಾಂಸ್ಕೃತಿಕ ಪರಂಪರೆ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ.

ರಣಬೈರೇಗೌಡರಿಂದ ಮುಮ್ಮಡಿ ಕೆಂಪವೀರಪ್ಪಗೌಡವರೆಗಿನ (ಕ್ರಿ.ಶ. 1320–1728) ಪರಂಪರೆ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮಗಳು ನಡೆಯಲಿವೆ.

ನಿಧನ ವಾರ್ತೆ

ಡಿ. ಬಾಬುರಾಜ್



ಬೆಂಗಳೂರು: ಪತ್ರಿಕಾ ಛಾಯಾಗ್ರಾಹಕ ಡಿ. ಬಾಬುರಾಜ್ (82) ಅವರು ಭಾನುವಾರ ಸಂಜೆ ನಿಧನ ಹೊಂದಿದರು.

ದಾಸರಹಳ್ಳಿಯ ಬಾಲಾಜಿ ಬಡಾವಣೆಯ ಭುವನೇಶ್ವರಿ ನಗರದಲ್ಲಿ ವಾಸವಿದ್ದ ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

ಹೆಬ್ಬಾಳದ ವಿದ್ಯುತ್ ಚಿತಾಗಾರದಲ್ಲಿ ಸೋಮವಾರ ಸಂಜೆ 3.30ಕ್ಕೆ ಅಂತ್ಯಕ್ರಿಯೆ ನೆರವೇರಿಸಲಾಗುವುದೆಂದು ಕುಟುಂಬದವರು ತಿಳಿಸಿದ್ದಾರೆ.

ವಿಠ್ಠಲ್ ಕಾಳಪ್ಪ



ಬೆಂಗಳೂರು: ಉತ್ತರ ಕರ್ನಾಟಕ ವಿಶ್ವಕರ್ಮ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಾಧ್ಯಕ್ಷರಾಗಿದ್ದ ವಿಠ್ಠಲ್ ಕಾಳಪ್ಪ ಹೊಸಕೋಟೆ (59) ಅವರು ಭಾನುವಾರ ಹೃದಯಾಘಾತದಿಂದ ನಿಧನ ಹೊಂದಿದರು.

ರಾಜರಾಜೇಶ್ವರಿ ನಗರದಲ್ಲಿ ವಾಸವಿದ್ದ ವಿಠ್ಠಲ್ ಅವರಿಗೆ ಪುತ್ರಿ ಹಾಗೂ ಪುತ್ರ ಇದ್ದಾರೆ. ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ಸೋಮವಾರ ಬೆಳಿಗ್ಗೆ 10 ಗಂಟೆಗೆ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

ಕುಂದು ಕೊರತೆ

ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.





ಚಾಮುಂಡಿನಗರದ ರಸ್ತೆಯನ್ನು ಸರಿಪಡಿಸಿ

‘ರಸ್ತೆ ಸರಿಪಡಿಸಿ’

ಬಿಡಿಎ ಲೇಔಟ್ ಚಾಮುಂಡಿನಗರದ 1ನೇ ಅಡ್ಡರಸ್ತೆ 3ನೇ ಮುಖ್ಯರಸ್ತೆ ಸಂಪೂರ್ಣ ಹದಗೆಟ್ಟಿದೆ. ಬೇಸಿಗೆಯಲ್ಲಿ ವಾಹನಗಳ ಸಂಚಾರದಿಂದ ಎಲ್ಲೆಡೆ ದೂಳು ಆವರಿಸಿಕೊಳ್ಳುತ್ತದೆ. ದ್ವಿಚಕ್ರ ವಾಹನ ಸವಾರರಿಗೆ ಇದರಿಂದ ಕಿರಿಕಿರಿಯಾಗುತ್ತಿದ್ದು, ಆಳವಾದ ತಗ್ಗು ಗುಂಡಿಗಳು ಕೂಡ ಸೃಷ್ಟಿಯಾಗಿವೆ. ಮಳೆಗಾಲದಲ್ಲಿ ತಗ್ಗು ಗುಂಡಿಗಳಲ್ಲಿ ನೀರು ನಿಂತು ರಸ್ತೆ ಯಾವುದು, ಗುಂಡಿ ಯಾವುದು ಎಂಬುದು ಗೊತ್ತಾಗುವುದಿಲ್ಲ. ಹಲವರು ಗುಂಡಿಯಲ್ಲಿ ಬಿದ್ದು ಗಾಯಗೊಂಡಿದ್ದಾರೆ. ಈಗಲಾದರೂ ಅಧಿಕಾರಿಗಳು ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಸಿ.ಕೆ. ಅಕ್ಷಯ್, ಚಾಮುಂಡಿನಗರದ ನಿವಾಸಿ

ಶೌಚಾಲಯ ತೆರೆಯಲು ಆಗ್ರಹ

ಕೆಂಪೇಗೌಡ ಬಸ್ ನಿಲ್ದಾಣದ ಪ್ಲಾಟ್ ಫಾರ್ಮ್-19 ಬಳಿ ಇರುವ ಸಾರ್ವಜನಿಕ ಶೌಚಾಲಯ ಆರು ತಿಂಗಳಿನಿಂದ ಮುಚ್ಚಲಾಗಿದೆ. ಇದರಿಂದ ನಿಲ್ದಾಣಕ್ಕೆ ಬರುವ ಸಾವಿರಾರು ಪ್ರಯಾಣಿಕರಿಗೆ ಸಮಸ್ಯೆಯಾಗಿದ್ದು, ಪುರುಷರು ಶೌಚಾಲಯದ ಬಳಿ ಮೂತ್ರ ವಿಸರ್ಜನೆ ಮಾಡುತ್ತಿದ್ದಾರೆ. ಮಹಿಳೆಯರು, ವಿದ್ಯಾರ್ಥಿಗಳು ಮೂಗು ಮುಚ್ಚಿಕೊಂಡು ಓಡಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಬಸ್ ನಿಲ್ದಾಣದ ಅಧಿಕಾರಿಗಳಿಗೆ ದೂರು ನೀಡಿದ್ದರೂ ಕಂಡು ಕಾಣದಂತೆ ಮೌನವಾಗಿದ್ದಾರೆ. ಶೌಚಾಲಯ ಸ್ವಚ್ಛಗೊಳಿಸಿ ಸಾರ್ವಜನಿಕರ ಬಳಕೆಗೆ ಅನುಕೂಲ ಮಾಡಿಕೊಡಬೇಕು.

ಕೆ.ಗೋಪಾಲ್, ಪ್ರಯಾಣಿಕ



ಕೆಂಪೇಗೌಡ ಬಸ್ ನಿಲ್ದಾಣದ 19ನೇ ಪ್ಲಾಟ್ ಫಾರ್ಮ್ ಬಳಿ ಇರುವ ಶೌಚಾಲಯ ಮುಚ್ಚಿರುವುದು

‘ಸೊಳ್ಳೆ ಹಾವಳಿ ನಿಯಂತ್ರಿಸಿ’

ಚಾಮರಾಜಪೇಟೆ ಕ್ಷೇತ್ರದ ವ್ಯಾಪ್ತಿಯ ವಾರ್ಡ್ ಸಂಖ್ಯೆ-139ರ ಭಕ್ಷಿಗಾರ್ಡನ್ ವಿ.ಎಂ. ಪುರ, ಆನಂದ ಪುರ, ಗಿರಿಪುರ ಜಾಲಿಮೊಹಲ್ಲ, ರಾಣಾ ಸಿಂಗ್ ಪೇಟೆ ಪ್ರದೇಶಗಳಲ್ಲಿ ಸೊಳ್ಳೆಗಳ ಹಾವಳಿ ಹೆಚ್ಚಾಗಿದೆ. ಇತ್ತೀಚೆಗೆ ಸುರಿದ ಮಳೆಗೆ ಅಲ್ಲಲ್ಲಿ ನಿಂತ ನೀರಿನಲ್ಲಿ ಸೊಳ್ಳೆಗಳು ಉತ್ಪತ್ತಿಯಾಗಿವೆ. ಜನರಲ್ಲಿ ಸಾಂಕ್ರಾಮಿಕ ರೋಗದ ಭೀತಿ ಶುರುವಾಗಿದ್ದು, ಇವುಗಳ ನಿಯಂತ್ರಣಕ್ಕೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು.

ಎಸ್. ಪ್ರಭಾಕರ್, ಚಾಮರಾಜಪೇಟೆ



ಕುಮಾರಸ್ವಾಮಿ ಲೇಔಟ್ 1 ನೇ ಹಂತದಲ್ಲಿರುವ ವಿದ್ಯುತ್ ಕಂಬ

‘ವಿದ್ಯುತ್ ಕಂಬ ಸರಿಪಡಿಸಿ’

ಕುಮಾರಸ್ವಾಮಿ ಬಡಾವಣೆಯ 1ನೇ ಹಂತದ, 4ನೇ ಮುಖ್ಯರಸ್ತೆ 2ನೇ ಕ್ರಾಸ್‌ನಲ್ಲಿರುವ ವಿದ್ಯುತ್ ಕಂಬದ ಸುತ್ತಲೂ ಇರುವ ಮಣ್ಣು ಕುಸಿದಿದೆ. ಈ ಕುರಿತು ಬಿಬಿಎಂಪಿಯವರಿಗೂ ದೂರು ನೀಡಿದ್ದರೂ ಇದುವರೆಗೂ ಯಾವುದೇ ಪ್ರಯೋಜನವಾಗಿಲ್ಲ. ಅಪಾಯ ಸಂಭವಿಸುವ ಮುನ್ನ ವಿದ್ಯುತ್ ಕಂಬವನ್ನು ಸರಿಪಡಿಸಬೇಕು ಎಂಬುದು ಸ್ಥಳೀಯರ ಆಗ್ರಹ.

ನಾಗೇಶ್, ಸ್ಥಳೀಯ ನಿವಾಸಿ

‘ಪಾದಚಾರಿ ಮಾರ್ಗ ಸರಿಪಡಿಸಿ’

ವಿಧಾನಸೌಧದ ಮುಂಭಾಗದಲ್ಲಿರುವ ಪಾದಚಾರಿಮಾರ್ಗ ಹದಗೆಟ್ಟಿದ್ದು, ಇದರಿಂದ ಮಕ್ಕಳು ವೃದ್ಧರು ಈ ಹಾದಿಯಲ್ಲಿ ಸಾಗುವುದೇ ಕಷ್ಟವಾಗಿದೆ. ವಾಹನಗಳು ಅತಿ ವೇಗವಾಗಿ ಸಂಚರಿಸುವುದರಿಂದ ರಸ್ತೆ ಅಂಚಿನಲ್ಲಿ ಓಡಾಡುವುದಕ್ಕೂ ಭಯಪಡಬೇಕಾದ ಪರಿಸ್ಥಿತಿ ಇದೆ. ಸಂಬಂಧಪಟ್ಟ ಅಧಿಕಾರಿಗಳು ಪಾದಚಾರಿ ಮಾರ್ಗ ಸರಿಪಡಿಸಬೇಕು.

ಶಿವರಾಜ್, ಸ್ಥಳೀಯರು




ವಿಧಾನಸೌಧ ಮುಂಭಾಗದಲ್ಲಿರುವ ಪಾದಚಾರಿ ಮಾರ್ಗ ದುರಸ್ತಿಗೊಳಿಸಿ

‘ರಸ್ತೆ ಗುಂಡಿ ಮುಚ್ಚಿ’

ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಪ್ರತಿನಿತ್ಯ ಸಾವಿರಾರು ಬಸ್‌ಗಳು ಸಂಚರಿಸುತ್ತವೆ. ನಿಲ್ದಾಣ ಪ್ರವೇಶಿಸುವ ಮುಖ್ಯ ರಸ್ತೆಯಲ್ಲಿರುವ ಗುಂಡಿ ಮಾತ್ರ ಯಾರ ಕಣ್ಣಿಗೂ ಕಾಣುತ್ತಿಲ್ಲ. ಯಾವುದಾದರೂ ಅನಾಹುತ ಸಂಭವಿಸುವ ಮುನ್ನ ಗುಂಡಿಯನ್ನು ಮುಚ್ಚಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು ಎಂಬುದು ಪ್ರಯಾಣಿಕರ ಒತ್ತಾಯ.

ರಘು ಕೋಟಿಯನ್, ಪ್ರಯಾಣಿಕ



ಮೆಜೆಸ್ಟಿಕ್ ಬಸ್ ನಿಲ್ದಾಣದ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು

ವಾಲಿದ ವಿದ್ಯುತ್ ಕಂಬ ತೆರವುಗೊಳಿಸಿದ ಅಧಿಕಾರಿಗಳು

ವರದಿ ಪರಿಣಾಮ

ಬೆಂಗಳೂರು: ಕೆ.ಆರ್. ಪುರದ ವೆಂಗಯ್ಯನ ಕೆರೆಗೆ ಹೊಂದಿಕೊಂಡಿರುವ ರಾಷ್ಟ್ರೀಯ ಹೆದ್ದಾರಿ- 75ರಲ್ಲಿ ವಾಲಿದ ವಿದ್ಯುತ್ ಕಂಬವನ್ನು ಬೆಸ್ಕಾಂ ಅಧಿಕಾರಿಗಳು ತೆರವುಗೊಳಿಸಿದ್ದಾರೆ.

‘ಪ್ರಜಾವಾಣಿ’ಯ ‘ಕುಂದು ಕೊರತೆ’ ವಿಭಾಗದಲ್ಲಿ ಜುಲೈ 18ರಂದು ‘ಅಪಾಯ ಸೃಷ್ಟಿಸಿದ ವಾಲಿದ ವಿದ್ಯುತ್ ಕಂಬ’ ಎನ್ನುವ ಶೀರ್ಷಿಕೆ ಅಡಿಯಲ್ಲಿ ವರದಿ ಪ್ರಕಟವಾಗಿತ್ತು.



ರಾಷ್ಟ್ರೀಯ ಹೆದ್ದಾರಿ–75ರಲ್ಲಿ ವಾಲಿದ ಕಂಬ ತೆರುವುಗೊಳಿಸಿದ ಅಧಿಕಾರಿಗಳು

‘ಅಸ್ಪೃಶ್ಯತೆಯ ರೋಗಕ್ಕೆ ದೊರೆಯದ ಔಷಧ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆಧುನಿಕ ಜಗತ್ತು ಹಲವಾರು ಮಾರಣಾಂತಿಕ ರೋಗಗಳಿಗೆ ಔಷಧ ಸಂಶೋಧಿಸಿದೆ. ಆದರೂ ಶತಮಾನಗಳಿಂದ ಈ ಸಮಾಜವನ್ನು ಕಾಡುತ್ತಾ ಬಂದಿರುವ ಅಸ್ಪೃಶ್ಯತೆಯೆಂಬ ರೋಗಕ್ಕೆ ಮಾತ್ರ ಔಷಧ ದೊರೆಯದಿರುವುದು ವಿಪರ್ಯಾಸ’ ಎಂದು ಹಿಮಾಚಲ ಪ್ರದೇಶದ ಹೈಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಲ್. ನಾರಾಯಣಸ್ವಾಮಿ ಬೇಸರ ವ್ಯಕ್ತಪಡಿಸಿದರು.

ದಿ ಮಿಥಿಕ್ ಸೊಸೈಟಿ ನಗರದಲ್ಲಿ ಭಾನುವಾರ ಹಮ್ಮಿಕೊಂಡ ‘ದಲಿತಗುರು ದಿ. ತಲಕಾಡು ರಂಗೇಗೌಡ ಸ್ಮಾರಕ ದತ್ತಿ ಉಪನ್ಯಾಸ’ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ‘ಸ್ವಾರ್ಥ ರಾಜಕಾರಣಿಗಳ ಸ್ವಹಿತಾಸಕ್ತಿಗೆ ಜಾತಿವ್ಯವಸ್ಥೆ ಬಲಿಯಾಗಿದೆ. ಜಾತಿ ವ್ಯವಸ್ಥೆ ನಿರ್ಮೂಲವಾಗದೆ ಅಸ್ಪೃಶ್ಯತೆಗೆ ಪರಿಹಾರ ದೊರೆಯದು’ ಎಂದರು.

‘ಈ ಸಮಾಜದಲ್ಲಿ ದಲಿತರ ಬಗ್ಗೆ ಕೆಲವರಲ್ಲಿ ತಪ್ಪು ಕಲ್ಪನೆಯಿದೆ. ಇದನ್ನು ಹೋಗಲಾಡಿಸುವ ಕೆಲಸವಾಗಬೇಕಿದೆ. ಯಾವುದೇ ಸಮುದಾಯ ಸಾಮಾಜಿಕ ಹಾಗೂ ಆರ್ಥಿಕವಾಗಿ ಪ್ರಗತಿ ಹೊಂದಲು ಶಿಕ್ಷಣ ಸಹಕಾರಿ. ಸ್ವಾತಂತ್ರ್ಯ-ಪೂರ್ವದಲ್ಲಿ ದಲಿತರಿಗೆ ಶಿಕ್ಷಣ ಎಟುಕದ ಮಾತಾಗಿತ್ತು. ಅಂತಹ ಸಂದರ್ಭದಲ್ಲೂ ಅವರ ಏಳ್ಗೆಗೆ ತಲಕಾಡು ರಂಗೇಗೌಡ ಸೇರಿದಂತೆ ಹಲವರು ಶ್ರಮಿಸಿದರು’ ಎಂದರು.

ಸಾಮಾಜಿಕ ಕಾರ್ಯಕರ್ತ ವಾದಿರಾಜ್ ಅವರು ‘ದಲಿತರ ಏಳಿಗೆಗೆ ಸವರ್ಣೀಯರ ಕೊಡುಗೆ’ ಎಂಬ ವಿಷಯದ ಬಗ್ಗೆ ಮಾತನಾಡಿ, ‘ಕುದ್ಮಲ್ ರಂಗ ರಾವ್, ತಲಕಾಡು ರಂಗೇಗೌಡ, ಕಾಕಾ ಕಾರಖಾನೀಸ್ ಸೇರಿದಂತೆ ಹಲವರು ದೀನ ದಲಿತರ ಏಳ್ಗೆಗೆ ತಮ್ಮ ಜೀವನವನ್ನು ಮುಡುಪಾಗಿಟ್ಟರು. ಇಂತಹವರು ತಮ್ಮ ವರ್ಗದವರ ವಿರೋಧಗಳನ್ನೂ ಲೆಕ್ಕಿಸದೆ ದಲಿತೋದ್ಧಾರಕ್ಕೆ ಶ್ರಮಿಸಿದರು’ ಎಂದರು.

ಇಂದಿನಿಂದ ಕಾರ್ಗಿಲ್‌ಗೆ ತಿರಂಗ ಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಷ್ಟ್ರೀಯ ಯುವ ಮೋರ್ಚಾ ಇದೇ 25ರಿಂದ ‘ಕಾರ್ಗಿಲ್ ವಿಜಯ್ ದಿವಸ್’ ಗೆ ಸಂಬಂಧಿಸಿದಂತೆ ಎರಡು ದಿನಗಳ ‘ತಿರಂಗ ಯಾತ್ರೆ’ ಹಮ್ಮಿಕೊಂಡಿದೆ.

ಯುವ ಮೋರ್ಚಾದ (ರಾಷ್ಟ್ರೀಯ) ಅಧ್ಯಕ್ಷ ತೇಜಸ್ವಿ ಸೂರ್ಯ ಅವರ ನೇತೃತ್ವದಲ್ಲಿ ಈ ಯಾತ್ರೆ ಕಾಶ್ಮೀರದ ಶ್ರೀನಗರದ ಲಾಲ್‌ಚೌಕ್‌ದಿಂದ ಆರಂಭವಾಗಿ, ಕಾರ್ಗಿಲ್‌ನ ಲಾಲ್‌ಚೌಕ್‌ನಲ್ಲಿ ಕೊನೆಗೊಳ್ಳುತ್ತದೆ ಎಂದು ಬಿಜೆಪಿ ರಾಜ್ಯ ಯುವಮೋರ್ಚಾ ಘಟಕದ ಅಧ್ಯಕ್ಷ ಡಾ.ಸಂದೀಪ್ ಕುಮಾರ್ ತಿಳಿಸಿದ್ದಾರೆ. ಜುಲೈ 26ರಂದು ಕಾರ್ಗಿಲ್ ಯುದ್ಧ ಸ್ಮಾರಕದಲ್ಲಿ ವಿಜಯ್ ದಿವಸ್ ಅನ್ನು ಆಚರಿಸಲಾಗುವುದು. ಇದರಲ್ಲಿ ಪಾಲ್ಗೊಳ್ಳುವ ಎಲ್ಲರೂ ಆಯಾ ರಾಜ್ಯಗಳಲ್ಲಿನ ಹುತಾತ್ಮರ ಮನೆಗಳ ಮುಂಭಾಗದ ಅಂಗಳದಿಂದ ಮಣ್ಣನ್ನು ತರಲು ತೇಜಸ್ವಿ ಸೂರ್ಯ ಸೂಚಿಸಿದ್ದಾರೆ. ಈ ಮಣ್ಣನ್ನು ಸಾಂಕೇತಿಕವಾಗಿ ಯುದ್ಧ ಸ್ಮಾರಕದಲ್ಲಿ ಸಮರ್ಪಿಸಲಾಗುತ್ತದೆ. ಹುತಾತ್ಮರ ಅಮರತ್ವದ ಸೂಚಕ ಮತ್ತು ಅವರ ಕುಟುಂಬಗಳನ್ನು ಗೌರವಿಸಲು ಈ ವಿಶಿಷ್ಟ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಜಮ್ಮು– ಕಾಶ್ಮೀರ ರಾಜ್ಯದಲ್ಲಿ 370ನೇ ವಿಧಿಯನ್ನು ರದ್ದುಪಡಿಸಿದ ನಂತರ ಕಾಶ್ಮೀರದಲ್ಲಿ ಬಿಜೆಪಿ ನಡೆಸುತ್ತಿರುವ ಮೊದಲ ಕಾರ್ಯಕ್ರಮ ಇದಾಗಿದೆ. ಲಾಲ್‌ಚೌಕ್‌ನಿಂದ ಕಾರ್ಗಿಲ್‌ವರೆಗಿನ ಐತಿಹಾಸಿಕ ತಿರಂಗ ಯಾತ್ರೆಯಲ್ಲಿ ಪ್ರಧಾನಿ ಮೋದಿ ಅವರ ‘ಏಕ್ ಭಾರತ್ ಶ್ರೇಷ್ಠ ಭಾರತ್’ದ ಸಂದೇಶವನ್ನು ಸಾರಲಾಗುವುದು. ರಾಜ್ಯದಿಂದಲೂ ಹಲವು ಕಾರ್ಯಕರ್ತರು ಇದರಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಸಂದೀಪ್ ತಿಳಿಸಿದರು.

ಸಚಿವರ ಹೇಳಿಕೆಗೆ ವಿರೋಧ: ಶಿಕ್ಷಕನಿಗೆ ನೋಟಿಸ್

ಬೆಳಗಾವಿ: ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು, 13,800 ಸರ್ಕಾರಿ ಶಾಲೆಗಳ ವಿಲೀನ ಕುರಿತು ಮಾಧ್ಯಮಗಳಿಗೆ ನೀಡಿದ್ದ ಹೇಳಿಕೆ ವಿರೋಧಿಸಿ, ಜಾಲತಾಣದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದ ರಾಯಬಾಗ ತಾಲ್ಲೂಕಿನ ನಿಡಗುಂದಿಯ ಅಂಬೇಡ್ಕರ್ ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕ ವೀರಣ್ಣ ಮಡಿವಾಳರ ಅವರಿಗೆ ಚಿಕ್ಕೋಡಿ ಡಿಡಿಪಿಐ ಎಂ.ಎಲ್. ಹಂಚಾಟೆ ಅವರು ಕಾರಣ ಕೇಳಿ ಜುಲೈ 22ರಂದು ನೋಟಿಸ್ ಜಾರಿಗೊಳಿಸಿದ್ದಾರೆ.

'ಸಚಿವರ ಹೇಳಿಕೆ ನೀವು, ಇದು 13,800 ಶಾಲೆಗಳ ವಿಲೀನವಲ್ಲ. ಅಪ್ಪು ಶಾಲೆಗಳ ಹತ್ಯಾಕಾಂಡ. ಸರ್ಕಾರಿ ಶಾಲೆಗಳ ಮಕ್ಕಳ ಭವಿಷ್ಯದ ಮಾರಣಹೋಮ' ಎಂಬ ಅಭಿಪ್ರಾಯವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದೀರಿ. ಇದು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ಕ್ಕೆ ವ್ಯತಿರಿಕ್ತವಾಗಿದ್ದು, ನಡತೆ ನಿಯಮಗಳು 1966ರ ನಿಯಮ 3 ಅನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ. ನಿಮ್ಮ ಮೇಲೆ ಏಕೆ ಕ್ರಮ ಜರುಗಿಸಬಾರದು ಎನ್ನುವುದಕ್ಕೆ 3 ದಿನಗಳಲ್ಲಿ ಉತ್ತರ ನೀಡಬೇಕು' ಎಂದು ತಿಳಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ವೀರಣ್ಣ ಮಡಿವಾಳರ, 'ನನಗೆ ಯಾರನ್ನೂ ವಿರೋಧಿಸುವ ಅಥವಾ ಪ್ರಶ್ನಿಸುವ ಉದ್ದೇಶವಿಲ್ಲ. ಸರ್ಕಾರಿ ಶಾಲೆಗಳು ಮುಚ್ಚುತ್ತವೆ ಎಂಬ ಆತಂಕದಿಂದ ನನ್ನ ಸಂವೇದನೆಯನ್ನು ಎರಡು ಸಾಲಿನ ಪದ್ಯದಲ್ಲಿ ಅಭಿವ್ಯಕ್ತಿಪಡಿಸಿದ್ದೇನೆ' ಎಂದರು. ನೋಟಿಸ್ ಜಾರಿಗೊಳಿಸಿದ ಸಂಗತಿಯನ್ನು ಭಾನುವಾರ ವೀರಣ್ಣ ಮಡಿವಾಳರ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದು, ಸರ್ಕಾರದ ಕ್ರಮಕ್ಕೆ ವಿರೋಧ ವ್ಯಕ್ತವಾಗಿದೆ. ಸಚಿವ ನಾಗೇಶ್ ಅವರನ್ನು ಕೆಲವರು ಟೀಕಿಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ ಭೇಟಿ ಬಳಿಕ ಡಾ.ಜಿ.ಪರಮೇಶ್ವರ ಹೇಳಿಕೆ

'ಡಿಕೆಶಿ ಹೇಳಿಕೆ–ಯಾವುದೇ ತಪ್ಪಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವಿಧಾನಸಭೆ ಚುನಾವಣೆಯ ಹೊಸ್ತಿಲಲ್ಲಿ ಕಾಂಗ್ರೆಸ್ ನಾಯಕರ ಮಧ್ಯೆ 'ಮುಖ್ಯಮಂತ್ರಿ' ಗಾದಿಗಾಗಿ ಬಿರುಸಿನ ವಾಕ್ಸಮರ ನಡೆಯುತ್ತಿರುವ ಹೊತ್ತಿನಲ್ಲೇ, ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮತ್ತು ಕಾಂಗ್ರೆಸ್ ಶಾಸಕ ಡಾ.ಜಿ.ಪರಮೇಶ್ವರ ಚರ್ಚೆ ನಡೆಸಿರುವುದು ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದೆ.

ಹುಟ್ಟುಹಬ್ಬಕ್ಕೆ ಶುಭಕೋರುವ ನೆಪದಲ್ಲಿ ಸದಾಶಿವನಗರದಲ್ಲಿರುವ ಖರ್ಗೆ ನಿವಾಸಕ್ಕೆ ಭಾನುವಾರ ಭೇಟಿ ನೀಡಿದ ಜಿ. ಪರಮೇಶ್ವರ ಬಂದಿದ್ದರು. ಈ ವೇಳೆ, ನಾಲ್ಕು ಗೋಡೆಗಳ ಮಧ್ಯೆ ಉಭಯ ನಾಯಕರು 45 ನಿಮಿಷಕ್ಕೂ ಹೆಚ್ಚು ಕಾಲ ಪ್ರಸಕ್ತ ರಾಜಕೀಯ ವಿದ್ಯಮಾನಗಳ ಬಗ್ಗೆ ಮಾತುಕತೆ ನಡೆಸಿದ್ದಾರೆ.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಮಲ್ಲಿಕಾರ್ಜುನ ಖರ್ಗೆ, ಪಕ್ಷದಲ್ಲಿ ಮುಖ್ಯಮಂತ್ರಿ ಸ್ಥಾನದ ಬಗ್ಗೆ ನಡೆಯುತ್ತಿರುವ ಚರ್ಚೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. 'ನಮ್ಮ ಹೈಕಮಾಂಡ್ ವಿಜಯಪುರ, ಬೆಳಗಾವಿ, ಮೈಸೂರು, ಬೆಂಗಳೂರು, ಕಲಬುರಗಿಯಲ್ಲಿಲ್ಲ, ಅದು ದೆಹಲಿಯಲ್ಲಿದೆ' ಎಂದು ಹೇಳುವ ಮೂಲಕ ಪರೋಕ್ಷವಾಗಿ ಎಚ್ಚರಿಸಿದರು.

'ನೀವು ಮುಖ್ಯಮಂತ್ರಿ ಆಕಾಂಕ್ಷಿಯಾ?' ಎಂಬ ಸುದ್ದಿಗಾರರ ಪ್ರಶ್ನೆಗೆ, 'ನಾನು ಮುಖ್ಯಮಂತ್ರಿ ಆಗುವುದನ್ನು ಹೈಕಮಾಂಡ್ ಕೇಳಿಕೊಂಡು ಬಂದು ಹೇಳಬೇಕಷ್ಟೇ' ಎಂದು ಉತ್ತರಿಸಿದರು.

'ಮೊದಲು ಪಕ್ಷವನ್ನು ಅಧಿಕಾರಕ್ಕೆ ತರಬೇಕು. 113 ಸ್ಥಾನಗಳು ಬಂದ ನಂತರ ಮುಖ್ಯಮಂತ್ರಿ ಸ್ಥಾನದ ಬಗ್ಗೆ ಯೋಚನೆ ಮಾಡಬೇಕು. ಈ ಬಗ್ಗೆ ಈಗಲೇ ಯಾರೇ ಚರ್ಚಿಸಿದರೂ ಉಪಯೋಗವಿಲ್ಲ. ಹೀಗಾಗಿ, ಮುಖ್ಯಮಂತ್ರಿ ಬಗ್ಗೆ ಆ ಮೇಲೆ ಮಾತನಾಡೋಣವೆಂದು ನಮ್ಮ ನಾಯಕರಿಗೆ ಮನವಿ ಮಾಡುತ್ತೇನೆ. ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಎಲ್ಲರೂ ಒಮ್ಮತದಿಂದ ಇರಬೇಕು. ಯಾವುದೇ ಕಾರಣಕ್ಕೂ ಗೊಂದಲಕ್ಕೆ ಅವಕಾಶ ನೀಡಬಾರದು' ಎಂದು ಸಲಹೆ ನೀಡಿದರು.

ಡಿ.ಕೆ ಆಸೆಪಟ್ಟರೆ ತಪ್ಪೇನು?: ಡಿ.ಕೆ. ಶಿವಕುಮಾರ್ ಅವರಿಂದ ಒಕ್ಕಲಿಗ ಸಮುದಾಯದ ಓಲೈಕೆ ಬಗ್ಗೆ ಪ್ರತಿಕ್ರಿಯಿಸಿದ ಪರಮೇಶ್ವರ, 'ಒಕ್ಕಲಿಗ ಸಮುದಾಯದ ಓಲೈಕೆ ತಪ್ಪೇನಿಲ್ಲ. ಸಮುದಾಯದ ಮುಂದೆ ಕೇಳಬಾರದು ಎನ್ನಲು ಆಗುತ್ತಾ? ಆ ಸಮುದಾಯ ಆಸೆಪಟ್ಟರೆ ಬೇಡ ಎಂದು ಹೇಳಲು ನಾವು ಯಾರು? ಸಾಮೂಹಿಕ ನಾಯಕತ್ವದಲ್ಲಿ ಪಕ್ಷ ಹೋಗಲಿದೆ. ಒಟ್ಟಿಗೆ ಹೋಗುವ ಇಚ್ಛಾಶಕ್ತಿ ಎಲ್ಲರಲ್ಲೂ ಇರಬೇಕು' ಎಂದರು.

'ಬಾಯಿ ಮುಚ್ಚಿಕೊಂಡು ಕೆಲಸ ಮಾಡಿ' ಎಂಬ ಡಿ.ಕೆ. ಶಿವಕುಮಾರ್ ಹೇಳಿಕೆಯನ್ನು ಸಮರ್ಥಿಸಿದ ಪರಮೇಶ್ವರ, 'ಕೆಪಿಸಿಸಿ ಅಧ್ಯಕ್ಷರಾಗಿ ಅವರು ಆ ಮಾತು ಹೇಳಲೇಬೇಕು. ನಾನು ಕೂಡ ಎಂಟು ವರ್ಷ ಕೆಪಿಸಿಸಿ ಅಧ್ಯಕ್ಷನಾಗಿದ್ದೆ. ಈ ವೇಳೆ ಅಷ್ಟು ಕಟುವಾಗಿ ನಾನು ಹೇಳದೇ ಇರಬಹುದು. ಆದರೂ ನನ್ನದೇ ಆದ ರೀತಿಯಲ್ಲಿ, ಪಕ್ಷದ ಕೆಲಸ ಮಾಡಿ ಎನ್ನುತ್ತಿದ್ದೆ. ಅದರಲ್ಲಿ ತಪ್ಪೇನೂ ಇಲ್ಲ' ಎಂದರು.



ಮಲ್ಲಿಕಾರ್ಜುನ ಖರ್ಗೆ– ಜಿ. ಪರಮೇಶ್ವರ ಭೇಟಿ

'ನನ್ನ ಬಾಯಿ ಮುಚ್ಚಿಸಲು ಸಾಧ್ಯವಿಲ್ಲ'

ಹುಬ್ಬಳ್ಳಿ: 'ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಬೇಕೆಂದು ನನ್ನ ಅಭಿಪ್ರಾಯವಷ್ಟೇ ಹೇಳಿದ್ದೇನೆ. ಸಂವಿಧಾನ ನನಗೆ ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕು ನೀಡಿದೆ' ಎಂದು ಕಾಂಗ್ರೆಸ್ ಮುಖಂಡ ಜಮೀರ್ ಅಹ್ಮದ್ ಖಾನ್ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನನ್ನ ಬಾಯಿ ಮುಚ್ಚಿಸಲು ಯಾರಿಂದಲೂ ಸಾಧ್ಯವಿಲ್ಲ. ಲೆವೆಲ್ ಕುರಿತು ಯಾರು ಏನೇ ಹೇಳಲಿ, ತೀರ್ಮಾನಿಸುವುದು ಜನರು ಮಾತ್ರ' ಎಂದು ಡಿ.ಕೆ. ಶಿವಕುಮಾರ್ ಹೇಳಿಕೆಗೆ ತಿರುಗೇಟು ನೀಡಿದರು. 'ನಾನು ಒಕ್ಕಲಿಗ ಸಮುದಾಯದ ವಿರುದ್ಧ ಮಾತನಾಡಿಲ್ಲ. ಒಕ್ಕಲಿಗ ಸಮುದಾಯದವರೇ ಹೆಚ್ಚಿನ ಸಂಖ್ಯೆಯಲ್ಲಿ ನನ್ನನ್ನು ಇಷ್ಟಪಡುತ್ತಾರೆ' ಎಂದರು.

ದಲಿತ ಸಿಎಂ–ಉಭಯ ನಾಯಕರ ಚರ್ಚೆ?

ಮುಖ್ಯಮಂತ್ರಿ ವಿಚಾರದಲ್ಲಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಬೆಂಬಲಿಗರು ನೀಡುತ್ತಿರುವ ಹೇಳಿಕೆಗಳ ಬಗ್ಗೆ ಖರ್ಗೆ ಮತ್ತು ಪರಮೇಶ್ವರ ಅವರು ಚರ್ಚಿಸಿದ್ದಾರೆ ಎನ್ನಲಾಗಿದೆ. ಮೊದಲಿನಿಂದಲೂ ದಲಿತ ಸಮುದಾಯ ಕಾಂಗ್ರೆಸ್ ಬೆನ್ನಿಗೆ ನಿಂತಿದೆ. ಪಕ್ಷ ಅಧಿಕಾರಕ್ಕೆ ಬಂದಾಗಲೆಲ್ಲಾ ದಲಿತ ಸಮುದಾಯಕ್ಕೆ ಮುಖ್ಯಮಂತ್ರಿ ಸ್ಥಾನ ಕೈತಪ್ಪುತ್ತಿದೆ. ತಮ್ಮ(ಒಕ್ಕಲಿಗ) ಸಮುದಾಯದ ಮುಂದೆ ಮುಖ್ಯಮಂತ್ರಿ ಆಗುವ ಬಗ್ಗೆ ಶಿವಕುಮಾರ್ ಇತ್ತೀಚೆಗೆ ಮಾತನಾಡಿದ್ದಾರೆ. ಹೀಗಾಗಿ ಪಕ್ಷ ಅಧಿಕಾರಕ್ಕೆ ಬಂದರೆ ನಾವೂ ಕೈಕಟ್ಟಿ ಕುಳಿತುಕೊಳ್ಳಬಾರದು. ಸಿಗುವ ಅವಕಾಶವನ್ನು ಕಳೆದುಕೊಳ್ಳಬಾರದು' ಎಂಬ ಬಗ್ಗೆ ಚರ್ಚಿಸಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

'26ರಂದು ಮೌನ ಸತ್ಯಾಗ್ರಹ'

ಬೆಂಗಳೂರು: 'ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಇದೇ 26ರಂದು ವಿಚಾರಣೆಗೆ ಮತ್ತೆ ಹಾಜರಾಗುವಂತೆ ಸೋನಿಯಾ ಗಾಂಧಿಗೆ ಜಾರಿ ನಿರ್ದೇಶನಾಲಯ (ಇ.ಡಿ) ನೋಟಿಸ್ ನೀಡಿದೆ. ಇದನ್ನು ಖಂಡಿಸಿ ಕಾಂಗ್ರೆಸ್ ಭವನದ ಗಾಂಧಿ ಪ್ರತಿಮೆ ಬಳಿ ಪಕ್ಷದ ವತಿಯಿಂದ ಅಂದು ಮೌನ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಸೋನಿಯಾ ಗಾಂಧಿ ಅವರು ನ್ಯಾಯಾಲಯದ ಮೊರೆ ಹೋಗದೆ ಧೈರ್ಯವಾಗಿ ವಿಚಾರಣೆ ಎದುರಿಸಿ ಬಂದಿದ್ದಾರೆ. ಆದರೂ ಕಿರುಕುಳ ನಿಲ್ಲುತ್ತಿಲ್ಲ' ಎಂದರು. 'ಪಕ್ಷದ ಸಂಘಟನೆ ಹೊರತು ಬೇರೆ ವಿಚಾರದಲ್ಲಿ ಯಾವುದೇ ನಾಯಕರು ನನ್ನ ಬಳಿ ಚರ್ಚೆ ಮಾಡಿಲ್ಲ, ಮಾಡಲು ಅವಕಾಶ ನೀಡುವುದಿಲ್ಲ' ಎಂದರು.

'ದಲಿತ ಸಿ.ಎಂ ಬಿಜೆಪಿಯಿಂದ ಸಾಧ್ಯ'

ವಿಜಯಪುರ: 'ರಾಜ್ಯದಲ್ಲಿ ದಲಿತರು ಮುಖ್ಯಮಂತ್ರಿ ಆಗಬೇಕು ಎಂದಾದರೆ ಅದು ಬಿಜೆಪಿಯಲ್ಲಿ ಮಾತ್ರ ಸಾಧ್ಯ' ಎಂದು ವಿಧಾನ ಪರಿಷತ್ ಸದಸ್ಯ ಚಲವಾದಿ ನಾರಾಯಣ ಸ್ವಾಮಿ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈಗಾಗಲೇ ಹಿರಿಯ ನಾಯಕ ಗೋವಿಂದ ಕಾರಜೋಳ ಅವರನ್ನು ಸಚಿವ ಹಾಗೂ ಉಪ ಮುಖ್ಯಮಂತ್ರಿ ಮಾಡಲಾಗಿದೆ. ಮುಂದೆ ಅವರು ಮುಖ್ಯಮಂತ್ರಿ ಆಗಿಯೇ ಆಗುತ್ತಾರೆ' ಎಂದರು. 'ರಾಜ್ಯದಲ್ಲಿ 36 ವಿಧಾನಸಭಾ ಕ್ಷೇತ್ರಗಳು ಎಸ್‌ಸಿ ಮತ್ತು ಎಸ್‌ಟಿಗೆ ಮೀಸಲಾಗಿವೆ. ಮೀಸಲು ಕ್ಷೇತ್ರ ಹೊರತುಪಡಿಸಿಯೂ ದಲಿತರಿಗೆ ಸ್ಪರ್ಧಿಲು ಬಿಜೆಪಿ ಹೆಚ್ಚಿನ ಅವಕಾಶ ಕಲ್ಪಿಸಲಿದೆ. ಶೇ 70ಕ್ಕಿಂತ ಹೆಚ್ಚು ದಲಿತರು ಬಿಜೆಪಿಯನ್ನು ಬೆಂಬಲಿಸಲಿದ್ದಾರೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

ಇದೇ 29–30ಕ್ಕೆ ಸಿಇಟಿ ಫಲಿತಾಂಶ

ಬೆಂಗಳೂರು: ರಾಜ್ಯದ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರಸಕ್ತ ಸಾಲಿನಲ್ಲಿ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ–2022) ಫಲಿತಾಂಶ ಇದೇ 29 ಅಥವಾ 30ರಂದು ಪ್ರಕಟವಾಗಲಿದೆ.

ಈ ಬಗ್ಗೆ ಮಾಹಿತಿ ನೀಡಿದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ, 'ಐಸಿಎಸ್‌ಇ 12ನೇ ತರಗತಿಯ ಫಲಿತಾಂಶ ಭಾನುವಾರ ಪ್ರಕಟವಾಗಿದೆ. ಉತ್ತೀರ್ಣರಾದ ವಿದ್ಯಾರ್ಥಿಗಳು ಕೆಇಎ ವೆಬ್ ಸೈಟ್‌ನಲ್ಲಿ ಅಂಕಗಳನ್ನು ಅಪ್ ಲೋಡ್ ಮಾಡಲು ಅವಕಾಶ ನೀಡಲಾಗುವುದು. ನಂತರವಷ್ಟೆ ಫಲಿತಾಂಶ ಪ್ರಕಟಿಸಲು ಸಾಧ್ಯವಾಗಲಿದೆ. 29 ಅಥವಾ 30ರಂದು ಫಲಿತಾಂಶ ಪ್ರಕಟವಾಗಲಿದೆ' ಎಂದರು. ಜೂ.16 ಮತ್ತು 17 ಸಿಇಟಿ, 18ರಂದು ಹೊರನಾಡು ಹಾಗೂ ಗಡಿಭಾಗದ ವಿದ್ಯಾರ್ಥಿಗಳಿಗೆ ಕನ್ನಡ ಪರೀಕ್ಷೆ ನಡೆದಿತ್ತು.

ಒಂದೇ ಕುಟುಂಬದ ಐವರ ಸಾವು



ಕೊಪ್ಪಳ: ಜಿಲ್ಲೆಯ ಕುಕನೂರು ತಾಲ್ಲೂಕಿನ ಭಾನಾಪುರ ಬಳಿ ಶನಿವಾರ ರಾತ್ರಿ ನಡೆದ ರಸ್ತೆ ಅಪಘಾತದಲ್ಲಿ ಸ್ಕಾರ್ಪಿಯೊ ವಾಹನದಲ್ಲಿದ್ದ ಒಂದೇ ಕುಟುಂಬದ ಐದು ಜನ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ನಿವೃತ್ತ ಸೈನಿಕ ಹಾಗೂ ಸದ್ಯ ಪೊಲೀಸ್ ಇಲಾಖೆಯ ಡಿಎಆರ್ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶರಣಪ್ಪ ಕೊಪ್ಪದ ಅವರ ಮೊಮ್ಮಗಳ ಜನ್ಮದಿನದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸ್ವಗ್ರಾಮ ಕುಕನೂರು ತಾಲ್ಲೂಕಿನ ಬಿನ್ನಾಳಕ್ಕೆ ತೆರಳುವಾಗ ಈ ಘಟನೆ ನಡೆದಿದೆ.

ಬಿನ್ನಾಳ ಗ್ರಾಮದ ಗಿರಿಜವ್ವ ಕೊಪ್ಪದ (48), ದೇವಪ್ಪ ಕೊಪ್ಪದ (54), ಪಾರವ್ವ ಬೀರಪ್ಪ ಹಲಗೇರಿ (27), ಶಾಂತವ್ವ ಹನಮಂತಪ್ಪ ಗುಡ್ಲಾನೂರ (34) ಹಾಗೂ ಕಸ್ತೂರೆವ್ವ ನಾಗನಗೌಡ (20) ಮೃತಪಟ್ಟಿದ್ದು, ಪುಟ್ಟರಾಜ ಹಲಗೇರಿ (8), ಭೂಮಿಕಾ ಹಲಗೇರಿ (5), ಪಲ್ಲವಿ ಕರಿಗಾರ (20), ಬಸವರಾಜ ಹಲಗೇರಿ ಹಾಗೂ ಚಾಲಕ ಹರ್ಷವರ್ಧನ ಚನ್ನಳ್ಳಿ ಗಾಯಗೊಂಡಿದ್ದಾರೆ. ಪಾರವ್ವ ಮೃತಪಟ್ಟಿದ್ದರಿಂದ ಅವರ ಮೂವರು ಮಕ್ಕಳು ಅನಾಥರಾಗಿದ್ದಾರೆ. ಹೋದ ವರ್ಷ ಅವರ ಪತಿ ಬೀರಪ್ಪ ಕೂಡ ಸಾವನ್ನಪ್ಪಿದ್ದರು. 'ಅಪಘಾತದ ಬಳಿಕ ಲಾರಿ ಚಾಲಕ ವಾಹನ ನಿಲ್ಲಿಸದೇ ಪರಾರಿಯಾಗಿದ್ದಾನೆ. ಯಾರ ತಪ್ಪಿನಿಂದ ಅವಘಡ ಸಂಭವಿಸಿದೆ ಎನ್ನುವುದರ ಬಗ್ಗೆ ತನಿಖೆ ನಡೆಸಲಾಗುತ್ತಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ ತಿಳಿಸಿದರು.

₹ 5 ಲಕ್ಷ ಪರಿಹಾರ: ಜಿಲ್ಲಾಸ್ಪತ್ರೆಗೆ ಭೇಟಿ ನೀಡಿದ ಸಚಿವ ಹಾಲಪ್ಪ ಆಚಾರ್ ಗಾಯಾಳುಗಳ ಆರೋಗ್ಯ ವಿಚಾರಿಸಿ 'ಮೃತಪಟ್ಟ ವ್ಯಕ್ತಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಲಾ ₹5 ಲಕ್ಷ ಪರಿಹಾರ ಘೋಷಿಸಿದ್ದಾರೆ' ಎಂದು ಅವರು ತಿಳಿಸಿದರು.

ಚಿತ್ತೂರಿನಲ್ಲಿ ಅಪಘಾತ: ಪಿಎಸ್‌ಐ ಸೇರಿ ಮೂವರ ಸಾವು

ಗಾಂಜಾ ಆರೋಪಿ ಬಂಧಿಸಲು ಹೋಗಿದ್ದ ಶಿವಾಜಿನಗರ ಠಾಣೆಯ ಪಿಎಸ್‌ಐ, ಕಾನ್‌ಸ್ಟೆಬಲ್, ಚಾಲಕ ದಾರುಣ ಅಂತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಂಧ್ರಪ್ರದೇಶದ ಚಿತ್ತೂರು ಬಳಿ ಭಾನುವಾರ ಬೆಳಿಗ್ಗೆ ಅಪಘಾತ ಸಂಭವಿಸಿದ್ದು, ಬೆಂಗಳೂರಿನ ಶಿವಾಜಿನಗರ ಠಾಣೆ ಪಿಎಸ್‌ಐ ಹಾಗೂ ಕಾನ್‌ಸ್ಟೆಬಲ್ ಸೇರಿ ಮೂವರು ಮೃತಪಟ್ಟಿದ್ದಾರೆ.

'ಗಾಂಜಾ ಸಾಗಣೆ ಹಾಗೂ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಬಂಧಿಸಲೆಂದು ಶಿವಾಜಿನಗರ ಠಾಣೆ ಪೊಲೀಸರ ತಂಡ, ಆಂಧ್ರಪ್ರದೇಶಕ್ಕೆ ಹೋಗಿತ್ತು. ಇದೇ ಸಂದರ್ಭದಲ್ಲಿ ಅಪಘಾತ ಸಂಭವಿಸಿದೆ. ಪಿಎಸ್‌ಐ ಕೆ. ಅವಿನಾಶ್ (29), ಕಾನ್‌ಸ್ಟೆಬಲ್ ಅನಿಲ್ ಮುಳಿಕ್ (26) ಹಾಗೂ ಚಾಲಕ ಮ್ಯಾಕ್ಸ್‌ವೆಲ್ (28) ಮೃತಪಟ್ಟಿದ್ದಾರೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ್ ತಿಳಿಸಿದರು. 'ಅಪಘಾತದಲ್ಲಿ ಪ್ರೊಬೇಷನರಿ ಪಿಎಸ್‌ಐ ದೀಕ್ಷಿತ್ (28) ಹಾಗೂ ಕಾನ್‌ಸ್ಟೆಬಲ್ ಶರಣ ಬಸವ (29) ತೀವ್ರ ಗಾಯಗೊಂಡಿದ್ದಾರೆ. ಇವರನ್ನು ವೆಲ್ಲೂರಿನ ಸಿಎಂಸಿ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದೂ ಹೇಳಿದರು.



ಅವಿನಾಶ್



ಅನಿಲ್ ಮುಳಿಕ್

'ಅವಿನಾಶ್, ಬೀದರ್ ಜಿಲ್ಲೆಯ ಬಸವ ಕಲ್ಯಾಣದವರು. ಅನಿಲ್ ಮುಳಿಕ್, ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಚಿಕ್ಕಲಕೆರೆ ಗ್ರಾಮದವರು. ಇವರ ಕುಟುಂಬಕ್ಕೆ ನೆರವು ನೀಡಲು ಕ್ರಮ ಕೈಗೊಳ್ಳಲಾಗಿದೆ' ಎಂದೂ ತಿಳಿಸಿದರು.


ತಡೆಗೋಡೆಗೆ ಗುದ್ದಿರುವ ಕಾರು: 'ಟ್ರಾವೆಲ್ ಏಜೆನ್ಸಿಯೊಂದರಿಂದ ಬಾಡಿಗೆ ಪಡೆದಿದ್ದ ಎರಡು ಕಾರುಗಳಲ್ಲಿ ಪೊಲೀಸರ ತಂಡಗಳು, ಶನಿವಾರ ರಾತ್ರಿ ಬೆಂಗಳೂರು ಬಿಟ್ಟಿದ್ದವು. ಪಿಎಸ್‌ಐ ಅವಿನಾಶ್ ನೇತೃತ್ವದ ತಂಡವಿದ್ದ ಇನೋವಾ ಕಾರನ್ನು ಮ್ಯಾಕ್ಸ್‌ವೆಲ್ ಚಲಾಯಿಸುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬೆಳಿಗ್ಗೆ 4.30ರ ಸುಮಾರಿಗೆ ಚಿತ್ತೂರು ತಲುಪಿದ್ದ ಕಾರು, ಅಲ್ಲಿಂದ ರಾಷ್ಟ್ರೀಯ ಹೆದ್ದಾರಿ ಮೂಲಕ ತಿರುಪತಿಯತ್ತ ಹೊರಟಿತ್ತು. ಚಾಲಕ, ಅತಿ ವೇಗವಾಗಿ ಕಾರು ಚಲಾಯಿಸಿದ್ದರು. ನಿಯಂತ್ರಣ ತಪ್ಪಿದ ಕಾರು, ಹೆದ್ದಾರಿಯ ಕೆಳಸೇತುವೆಯ ತಡೆಗೋಡೆಗೆ ಗುದ್ದಿತ್ತು. ಡಿಕ್ಕಿಯಾದ ರಭಸಕ್ಕೆ ಕಾರು ಸಂಪೂರ್ಣ ಜಖಂಗೊಂಡಿತು. ಪಿಎಸ್‌ಐ, ಕಾನ್‌ಸ್ಟೆಬಲ್ ಹಾಗೂ ಚಾಲಕ ಸ್ಥಳದಲ್ಲೇ ಮೃತಪಟ್ಟರೆಂದು ಆಂಧ್ರಪ್ರದೇಶ ಪೊಲೀಸರು ಮಾಹಿತಿ ನೀಡಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

'ಸಿದ್ದರಾಮೋತ್ಸವದಿಂದ ಪಕ್ಷಕ್ಕೆ ಶಕ್ತಿ'

ಬೆಳಗಾವಿ: 'ಸಿದ್ದರಾಮೋತ್ಸವ ಆಚರಣೆಯಿಂದ ಪಕ್ಷಕ್ಕೆ ಇನ್ನಷ್ಟು ಶಕ್ತಿ ಬರಲಿದೆಯೇ ಹೊರತು, ಗೊಂದಲದ ಪ್ರಶ್ನೆಯೇ ಇಲ್ಲ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಹೇಳಿದರು. 'ಸಿದ್ದರಾಮಯ್ಯ ಅವರೇ ಮುಂದಿನ ಮುಖ್ಯಮಂತ್ರಿ ಎಂದು ಶಾಸಕ ಜಮೀರ್ ಅಹಮದ್ ಖಾನ್ ಪದೇಪದೆ ಪ್ರಸ್ತಾಪಿಸುತ್ತಿರುವುದಕ್ಕೆ ಸಿದ್ದರಾಮಯ್ಯ ಅವರ 75ನೇ ವರ್ಷದ ಜನ್ಮದಿನ ಆಚರಣೆಯ ಗೊಂದಲ ಕಾರಣವೇ?' ಎಂಬ ಪತ್ರಕರ್ತರ ಪ್ರಶ್ನೆಗೆ ಅವರು ಭಾನುವಾರ ಪ್ರತಿಕ್ರಿಯಿಸಿದರು.

1 ಸದ್ದಿಲ್ಲದ ಕ್ರಾಂತಿಗೆ ವರ್ಷ




ಮಾತು ಬೆಳ್ಳಿ ಮೌನ ಬಂಗಾರ ಎಂಬ ಮಾತು ಬೊಮ್ಮಾಯಿ ಸರ್ಕಾರಕ್ಕೆ ಅಕ್ಷರಶಃ ಅನ್ವಯಿಸುತ್ತದೆ.

ಶರಣರ ನಾಡಿನಿಂದ ಬಂದ ಬಸವರಾಜ ಬೊಮ್ಮಾಯಿ ಅವರು ತೂಕದ ಮಾತಿಗೆ ಬೆಲೆ ಕೊಡುವವರು. ಎಂದೂ ಎಲ್ಲೆ ಮೀರಿ ಹೋಗಿಲ್ಲ. ಹೋಗುವುದೂ ಇಲ್ಲ. ಅದರಿಂದಲೇ ರಾಜ್ಯದ ಘನತೆ ಗೌರವಕ್ಕೆ ಎಂದೂ ಕುಂದು ಬಂದಿಲ್ಲ.

ಬೊಮ್ಮಾಯಿ ಆಳವಾದ ಆಡಳಿತದ ಅನುಭವ ಪಡೆದವರು. ರಾಜಕಾರಣವನ್ನು ಗಂಭೀರವಾಗಿ ತೆಗೆದುಕೊಂಡವರು. ತಾಳ್ಮೆಯೇ ಅವರ ರಕ್ಷಾ ಕವಚ. ಹತ್ತು ಮಾತನಾಡುವುದಕ್ಕಿಂತ ಹೇಳದೆಯೇ ಕೆಲಸವನ್ನು ಮಾಡುವುದರಲ್ಲಿ ಅವರ ನಂಬಿಕೆ. ಇಂದಿನ ಪ್ರಚಾರ ಯುಗದಲ್ಲಿ ಸಾಧನೆ ಮಾಡುವುದಕ್ಕಿಂತ ಹೇಳಿಕೊಳ್ಳುವುದೇ ಹೆಚ್ಚು. ನಮ್ಮ ಸರ್ಕಾರಕ್ಕೆ ಇದರಲ್ಲಿ ನಂಬಿಕೆ ಇಲ್ಲ ಎಂಬುದು ಸ್ಪಷ್ಟ. ಇದರಿಂದ ಸರ್ಕಾರದ ಹಣ ಮತ್ತು ಸಮಯ ಎರಡೂ ಉಳಿತಾಯವಾಗುತ್ತದೆ. ದೇಶದಲ್ಲಿರುವ ಎಲ್ಲ ಸಮಸ್ಯೆಗಳೂ ನಮ್ಮ ರಾಜ್ಯದಲ್ಲಿ ತಲೆಯೆತ್ತಿದ್ದು ನಿಜ. ಆದರೆ, ಅದನ್ನು ಜನಸಾಮಾನ್ಯರಿಗೆ ತೊಂದರೆ ಆಗದಂತೆ ನಿವಾರಿಸಿದ್ದು ಸರ್ಕಾರದ ಜಾಣ್ಮೆ.

ಮೊದಲನೆಯದಾಗಿ ಕಾನೂನು ಸುವ್ಯವಸ್ಥೆ ಪಾಲನೆ. ಈ ವಿಚಾರದಲ್ಲಿ ನಮ್ಮ ರಾಜ್ಯ ಮುಂದಿದೆ ಎಂದರೆ ತಪ್ಪಾಗಲಾರದು. ಇದಕ್ಕೆ ಕಾರಣ ಪೊಲೀಸರಿಗೆ ಮುಕ್ತ ಅವಕಾಶ. ಅಲ್ಲದೇ ಹೊರಗಿನ ಶಕ್ತಿಗಳು ಇಲ್ಲಿ ಶಾಂತಿ ಕದಡಲು ಯತ್ನಿಸಿದರೂ ಅದಕ್ಕೆ ಜನಸಾಮಾನ್ಯರ ಬೆಂಬಲ ಸಿಗದೇ ಇರುವುದು ಇದರಿಂದ ಹೊರಗಿನಿಂದ ಬಂದ ಶಕ್ತಿಗಳು ತಂತಾನೇ ಮಾಯವಾಗಿವೆ. ಎಲ್ಲ ರಾಜ್ಯಗಳ ಹಾಗೆ ನಮ್ಮ ರಾಜ್ಯವೂ ಕೊರೊನಾದಿಂದ ಪರಿತಪಿಸಿತು. ಆದರೂ ಈಗ ಚೇತರಿಕೆಯ ಹಾದಿಯಲ್ಲಿದೆ. ಜನರ ಕಷ್ಟದಲ್ಲಿ ಸರ್ಕಾರ ಭಾಗಿಯಾಗುವುದರಲ್ಲಿ ಹಿಂದೆ ಬೀಳಲಿಲ್ಲ. ಕೇಂದ್ರ ಸರ್ಕಾರ ನೀಡಿದ ಎಲ್ಲ ಸವಲತ್ತುಗಳನ್ನು ಬಳಸಿಕೊಂಡು ಜನರಿಗೆ ಎಷ್ಟು ಸವಲತ್ತು ಕಲ್ಪಿಸಿಕೊಡಲು ಸಾಧ್ಯವೋ ಅಷ್ಟನ್ನು ನಿರ್ವಂಚನೆಯಿಂದ ಮಾಡಿದೆ ಎಂಬುದು ಸ್ಪಷ್ಟ. ಹಿಂದೆ ಉತ್ತರ ಕರ್ನಾಟಕವನ್ನು ಕಡೆಗಣಿಸಲಾಗಿದೆ ಎಂಬ ಕೂಗು ಕೇಳಿ ಬರುತ್ತಿತ್ತು. ಅದಕ್ಕೆ ಬೊಮ್ಮಾಯಿ ಸರ್ಕಾರ ಪೂರ್ಣ ವಿರಾಮ ಹಾಕಿದೆ. ಮುಖ್ಯಮಂತ್ರಿಯೇ ಅಲ್ಲಿಯವರಾದ್ದರಿಂದ ಸಮಸ್ಯೆ ತಲೆ ಎತ್ತಲು ಅವಕಾಶವೇ ಇಲ್ಲ. ಇನ್ನು ನೈಸರ್ಗಿಕ ವಿಕೋಪ. ಮುಖ್ಯಮಂತ್ರಿಯೇ ಎಲ್ಲ ಜಿಲ್ಲೆಗಳ ಪ್ರವಾಸ ಮಾಡಿ ತುರ್ತು ಪರಿಹಾರ ಕಾಮಗಾರಿಗಳಿಗೆ ಚಾಲನೆ ನೀಡಿದ್ದಾರೆ. ಪರಿಹಾರ ಧನವನ್ನೂ ಬಿಡುಗಡೆ ಮಾಡಿದ್ದಾರೆ. ಇದೆಲ್ಲ ಸದ್ದಿಲ್ಲದೆ ನಡೆದಿರುವ ಕೆಲಸಗಳು ಎಂಬುದು ಗಮನಾರ್ಹ. ಇಂದಿನ ಯುಗಮಾನದಲ್ಲಿ ನ್ಯಾಯಾಲಯದ ಮೊರೆ ಹೋಗುವುದು ಸಾಮಾನ್ಯ. ಸರ್ಕಾರ ನ್ಯಾಯಾಲಯದ ತೀರ್ಮಾನಗಳಿಗೆ ಬೆಲೆಕೊಟ್ಟು ಅದನ್ನು ಜಾರಿಗೆ ತರುವುದರಲ್ಲಿ ಹಿಂದೆ ಬಿದ್ದಿಲ್ಲ. ನೆರೆ–ಹೊರೆ ರಾಜ್ಯಗಳಿಂದ ಕೆಲವು ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಸಮಸ್ಯೆ ತಲೆದೋರಿದಾಗ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಬಾರದಂತೆ ಸರ್ಕಾರ ಕ್ರಮ ಕೈಗೊಂಡಿದೆ.

ನಮ್ಮದು ಕೃಷಿ ಪ್ರಧಾನ ರಾಜ್ಯ. ವರುಣನೇ ನಮ್ಮ ಅತ್ಯಂತ ದೊಡ್ಡ ಉದ್ಯೋಗದಾತ. ಅವನ ಮುಂದೆ ಯಾವ ಉದ್ಯಮಿಯೂ ಇಲ್ಲ. ಈಗ ಬಾರಿ ಉತ್ತಮ ಮಳೆಯಾಗಿದೆ. ಕೆರೆ–ಕಟ್ಟೆಗಳು ತುಂಬಿವೆ. ಜಲಾಶಯಗಳಲ್ಲಿ ಜಲರಾಶಿ ಕಣ್ಣುತುಂಬಿ ನಿಂತಿವೆ. ಇದರಿಂದ ಈಗ ರೈತರಿಗೆ ಬಿತ್ತನೆ ಬೀಜ ಮತ್ತು ರಸಗೊಬ್ಬರ ಸಾಕಷ್ಟು ದೊರಕುವಂತೆ ಮಾಡುವುದರಲ್ಲಿ ಸರ್ಕಾರ ನಿರತವಾಗಿದೆ. ಮುಖ್ಯಮಂತ್ರಿಯೇ ಸ್ವಯಂ ನೀರಾವರಿ ತಜ್ಞರು. ಅವರಿಗೆ ಅತ್ಯಾಧುನಿಕ ಕೃಷಿ ತಂತ್ರಜ್ಞಾನ ತಿಳಿದಿದೆ. ಹೀಗಾಗಿ ಎಲ್ಲವೂ ಸಕಾಲಕ್ಕೆ ಸಿಗುವಂತೆ ಮಾಡುವುದರಲ್ಲಿ ಸಂದೇಹವಿಲ್ಲ. ದೇಶದ ಮೊದಲ 5 ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ರಾಜ್ಯದ ಒಟ್ಟು ಆರ್ಥಿಕ ಬೆಳವಣಿಗೆ ₹ 17.31 ಲಕ್ಷ ಕೋಟಿ ದೇಶದ ಜಿಡಿಪಿಯಲ್ಲಿ ಕರ್ನಾಟಕದ ಪಾಲು ಶೇ 8.8. ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ರಾಜ್ಯದಲ್ಲಿ ಇನ್ನೂ ಬಿತ್ತನೆ ಕಾರ್ಯ ಮುಂದುವರಿದಿದೆ. ಕಳೆದ ವರ್ಷ 110.14 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿತ್ತು. ಈಗ 82.67 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದೆ. ಬೊಮ್ಮಾಯಿ ಸರ್ಕಾರ ಅಸ್ತಿತ್ವಕ್ಕೆ ಬಂದ ದಿನವೇ ತೆಗೆದುಕೊಂಡ ಮೊದಲ ನಿರ್ಧಾರ ರೈತ ಮಕ್ಕಳ ವಿದ್ಯಾಭ್ಯಾಸಕ್ಕೆ ಆರ್ಥಿಕ ನೆರವು. ಪ್ರೌಢಶಾಲೆಯಿಂದ ಹಿಡಿದು ಸ್ನಾತಕೋತ್ತರವರೆಗೆ 7.13 ಲಕ್ಷ ಮಕ್ಕಳಿಗೆ ₹ 261 ಕೋಟಿ ನೆರವು ಕಳೆದ ವರ್ಷ ನೀಡಲಾಗಿತ್ತು. ಈಗ 1.22 ಲಕ್ಷ ಮಕ್ಕಳಿಗೆ ₹ 73 ಕೋಟಿ ನೆರವು ಒದಗಿಸಲಾಗಿದೆ. ಈಗ ಹೊಸ ಶೈಕ್ಷಣಿಕ ವರ್ಷ ಆರಂಭಗೊಂಡಿರುವುದರಿಂದ ಇನ್ನು ಹೆಚ್ಚಿನ ಮಕ್ಕಳು ನೆರವು ಪಡೆಯಲಿದ್ದಾರೆ.



ಪ್ರಧಾನ ಮಂತ್ರಿ ಕಿಸಾನ್ ಯೋಜನೆಯಲ್ಲಿ 48 ಲಕ್ಷ ರೈತರಿಗೆ ನೆರವು ಲಭಿಸಿದೆ. ಬೆಳೆವಿಮೆಯಲ್ಲಿ 5.29 ಲಕ್ಷ ರೈತರು ಪರಿಹಾರವಾಗಿ ₹ 695 ಕೋಟಿ ಪಡೆದುಕೊಂಡಿದ್ದಾರೆ. ಅಕಾಲಿಕ ಮಳೆಯಿಂದ ಬೆಳೆ ಕಳೆದುಕೊಂಡವರು ₹ 1 ಕೋಟಿ ಪರಿಹಾರ ಪಡೆದುಕೊಂಡಿದ್ದಾರೆ. ಕರ್ನಾಟಕ ಆರ್ಥಿಕ ಸಮೀಕ್ಷೆಯ ಪ್ರಕಾರ ಕೃಷಿಯಿಂದ ಶೇ 16.6 ಮತ್ತು ಕೈಗಾರಿಕೆಯಿಂದ ಶೇ 6.1 ಮತ್ತು ಸೇವಾ ಕ್ಷೇತ್ರದಿಂದ ಶೇ 11.6 ಬೆಳವಣಿಗೆಯನ್ನು ರಾಜ್ಯ ಕಂಡಿದೆ. ಕೊರೊನಾ ಕಾಲದಲ್ಲಿ ರಾಜ್ಯ ₹ 70 ಸಾವಿರ ಕೋಟಿ ಕೊರತೆ ಕಂಡಿತು. ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಹಣ ನೀಡಬೇಕಾಗಿ ಬಂದಿದ್ದರಿಂದ ಇತರ ಕ್ಷೇತ್ರಗಳ ಬೆಳವಣಿಗೆ ಇಳಿಮುಖಗೊಂಡಿತು. ಆದರೂ ಐಟಿ ಕ್ಷೇತ್ರ ನಮ್ಮ ಬೆಳವಣಿಗೆಗೆ ಶ್ರೀರಕ್ಷೆಯಾಗಿ ಬಂದಿತು. ಕೊರೊನಾ ಕಾಲದಲ್ಲಿ ಐಟಿ ನೌಕರರು ಮನೆಯಲ್ಲೇ ಕೆಲಸ ಮಾಡಿದ್ದರಿಂದ ಬೆಳವಣಿಗೆ ಕಾಣಲು ಸಾಧ್ಯವಾಯಿತು. ದೇಶದ ಒಟ್ಟು ಸಾಫ್ಟ್‌ವೇರ್ ಉತ್ಪಾದನೆಯಲ್ಲಿ ಕರ್ನಾಟಕದ ಪಾಲು ಶೇ 38.

ಒಟ್ಟು 21 ಲಕ್ಷ ಜನ ಈ ಕ್ಷೇತ್ರದಲ್ಲೇ ಕೆಲಸ ಮಾಡುತ್ತಿದ್ದಾರೆ. 16 ಶತಕೋಟಿ ಡಾಲರ್ ಬಂಡವಾಳ ರೂಪದಲ್ಲಿ ಕರ್ನಾಟಕಕ್ಕೆ ಬಂದಿದೆ. ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳಲ್ಲಿ 55 ಲಕ್ಷ ಜನ ಉದ್ಯೋಗ ಪಡೆದಿದ್ದು, ಇನ್ನೂ ಹೆಚ್ಚು ಜನರಿಗೆ ಉದ್ಯೋಗ ಕಲ್ಪಿಸಿಕೊಡುವುದಕ್ಕೆ ಅವಕಾಶಗಳಿವೆ. ಉತ್ಪಾದನಾ ವಲಯದಲ್ಲಿ ಹೆಚ್ಚಿನ ಉದ್ಯೋಗ ಅವಕಾಶ ನೀಡಲು ಸಾಧ್ಯವಿದೆ. ಕರ್ನಾಟಕ ಕೈಗಾರಿಕೆ ಕ್ಷೇತ್ರದಲ್ಲಿ ಶೇ 6.1ರಷ್ಟು ಬೆಳವಣಿಗೆ ಕಂಡಿದೆ. ಇದು ಗುಜರಾತ್‌ಗಿಂತ ಕಡಿಮೆ. ಹಿಂದೆ ನಮ್ಮ ಬೆಳವಣಿಗೆ ಅಧಿಕಗೊಂಡಿತ್ತು. ಕೊರೊನಾ ಪ್ರಭಾವದಿಂದ ಕೈಗಾರಿಕೆಗಳು ಚೇತರಿಕೆ ಕಂಡಿರಲಿಲ್ಲ. ಈಗ ನಿಧಾನಗತಿಯಲ್ಲಿ ಕೈಗಾರಿಕೆ ಬೆಳವಣಿಗೆ ಸಹಜಸ್ಥಿತಿಗೆ ಬರುತ್ತಿರುವುದು ಸಂತಸದ ಸಂಗತಿ.

ಕೈಗಾರಿಕೆ ಕ್ಷೇತ್ರ ಬಳಸುತ್ತಿದ್ದ ವಿದ್ಯುತ್ ಕೇವಲ 7,500 ದಶಲಕ್ಷ ಯೂನಿಟ್ ಆಗಿತ್ತು. ಈಗ ಇದು ಅಧಿಕಗೊಳ್ಳುತ್ತಿದೆ. ಕೃಷಿಗೆ ಇದರ ಮೂರರಷ್ಟು ವಿದ್ಯುತ್ ಬಳಕೆಯಾಗುತ್ತಿದೆ. ಇದಕ್ಕೆ ಪ್ರಮುಖ ಕಾರಣ ಉತ್ತಮ ಮಳೆ. ಜಲವಿದ್ಯುತ್ ಉತ್ಪಾದನೆ ಕೂಡ ಅಧಿಕಗೊಂಡಿದೆ. ಕೈಗಾರಿಕೆಗಳಲ್ಲಿ ಹೆಚ್ಚು ಉದ್ಯಮಿಗಳು ಸ್ವಯಂ ವಿದ್ಯುತ್ ಉತ್ಪಾದನೆಗೆ ಆಸಕ್ತಿ ತೋರುತ್ತಿರುವುದು ಶುಭಸೂಚನೆ. ಇದರಿಂದ ವಿದ್ಯುತ್ ರಂಗದಲ್ಲಿ ಖಾಸಗಿ ಬಂಡವಾಳ ಅಧಿಕಗೊಳ್ಳಲಿದೆ. ಒಟ್ಟು ಉತ್ಪಾದನೆಯಲ್ಲಿ ಶೇ 20ರಷ್ಟು ಸೋಲಾರ್ ವಿದ್ಯುತ್ ಆಗಿರುವುದು ಮತ್ತೊಂದು ಗಮನಾರ್ಹ ಬೆಳವಣಿಗೆ. ರಾಜ್ಯದಲ್ಲಿ ಒಟ್ಟು 8.5 ಲಕ್ಷ ಸಣ್ಣ ಮತ್ತು ಅತಿಸಣ್ಣ ಕೈಗಾರಿಕೆಗಳಿವೆ. ಕೈಗಾರಿಕೆಯೊಂದಿಗೆ ಶಿಕ್ಷಣ, ಆರೋಗ್ಯ, ಪೌಷ್ಟಿಕ ಆಹಾರ ವಿತರಣೆ, ಕುಡಿಯುವ ನೀರು, ವಸತಿ ಸವಲತ್ತು ಉತ್ತಮಗೊಳ್ಳುತ್ತಿದೆ. ಇದೆಲ್ಲವೂ ಇರುವುದರಿಂದ ವಿದೇಶ ನೇರ ಬಂಡವಾಳ ಅಧಿಕಗೊಳ್ಳಲು ಕಾರಣವಾಗುತ್ತಿದೆ. ಇದೆಲ್ಲಕ್ಕಿಂತ ಹೆಚ್ಚಾಗಿ ಕರ್ನಾಟಕದಲ್ಲಿ ಕೌಟುಂಬಿಕ ವಾತಾವರಣವಿದೆ. ಹೊರಗಿನವರು ಯಾವುದೇ ಸಮಸ್ಯೆ ಇಲ್ಲದೆ ನೆಮ್ಮದಿಯಾಗಿ ಬದುಕಬಹುದು. ಈ ವಾತಾವರಣ ಬೇರೆ ರಾಜ್ಯಗಳಲ್ಲಿ ಇಲ್ಲ ಎಂಬುದು ಸ್ಪಷ್ಟ. ಹೊರಗಿನಿಂದ ಬರುವ ಜನ ಮೊದಲು ಹುಡುಕುವುದು ಈ ಕೌಟುಂಬಿಕ ವಾತಾವರಣವನ್ನೇ ಎಂಬುದನ್ನು ಮರೆಯುವ ಹಾಗಿಲ್ಲ.

ಕೊರೊನಾ ನಿವಾರಣೆಯಲ್ಲಿ ಕರ್ನಾಟಕ ಮುಂದಿದ್ದ ಹಾಗೆ ಈಗ ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತರುವ ದಿಕ್ಕಿನಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ನಿವೃತ್ತ ಐಎಎಸ್ ಅಧಿಕಾರಿ ಮದನಗೋಪಾಲ್ ನೇತೃತ್ವದಲ್ಲಿ ಕಾರ್ಯಪಡೆಯನ್ನು ರಚಿಸಲಾಗಿದೆ. ಇದು ಈಗಾಗಲೇ ಹಲವು ವಿಷಯಗಳ ಬಗ್ಗೆ ತರಬೇಕಾದ ಬದಲಾವಣೆ ಕುರಿತು ಪ್ರಬಂಧಗಳನ್ನು ಪ್ರಕಟಿಸಿ ಜನರ ಪರಿಶೀಲನೆಗೆ ಒಪ್ಪಿಸಿದೆ. ಇದರ ಬಗ್ಗೆ ಚರ್ಚೆ ನಡೆದ ಮೇಲೆ ಜಾರಿಗೆ ತರುವ ಬಗ್ಗೆ ಚಿಂತನೆ ನಡೆಯಲಿದೆ. ಈಗ ಸರ್ಕಾರಿ ಮತ್ತು ಖಾಸಗಿ ಶಾಲೆ ಮತ್ತು ಕಾಲೇಜುಗಳನ್ನು ಆಧುನಿಕ ಉಪಕರಣಗಳ ಮೂಲಕ ಸುಸಜ್ಜಿತಗೊಳಿಸುವ ಕೆಲಸ ನಡೆಯುತ್ತಿದೆ. ಪ್ರತಿ ತರಗತಿಗೆ ಪ್ರೊಜೆಕ್ಟರ್, ಬಿಳಿ ಬೋರ್ಡ್, ಅತ್ಯಂತ ವೇಗದ ಇಂಟರ್‌ನೆಟ್ ಒದಗಿಸಲಾಗುತ್ತಿದೆ. ಇದಕ್ಕಾಗಿ ₹ 28 ಕೋಟಿ ನೀಡಲಾಗಿದೆ. ಒಟ್ಟು 6,500 ತರಗತಿ ಕೊಠಡಿಗಳನ್ನು ಸಜ್ಜುಗೊಳಿಸಲು ₹ 98 ಕೋಟಿ ಮೀಸಲಿಡಲಾಗಿದೆ. ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಕಲ್ಯಾಣಕ್ಕೆ ಇರುವ ಇಲಾಖೆಗಳು ಒಟ್ಟು 1.6 ಲಕ್ಷ ಮಕ್ಕಳಿಗೆ ₹ 161 ಕೋಟಿ ಮೌಲ್ಯದ ಲ್ಯಾಪ್‌ಟ್ಯಾಪ್, ಟ್ಯಾಬ್ಲೆಟ್‌ಗಳನ್ನು ಒದಗಿಸಲಾಗಿದೆ.

ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ಆಡಳಿತ ಮತ್ತು ಪರೀಕ್ಷೆ ವಿಭಾಗದಿಂದ ಹಿಡಿದು ಎಲ್ಲವನ್ನೂ ಸಂಪೂರ್ಣವಾಗಿ ಕಂಪ್ಯೂಟರೀಕರಣ ಮಾಡಲು ತೀರ್ಮಾನಿಸಲಾಗಿದೆ. 16 ಹೊಸ ಸರ್ಕಾರಿ ಪಾಲಿಟೆಕ್ನಿಕ್ ಆರಂಭಿಸಲಾಗಿದೆ. 12 ಪಾಲಿಟೆಕ್ನಿಕ್‌ಗಳಲ್ಲಿ 13 ಹೊಸ ಕೋರ್ಸ್‌ಗಳನ್ನು ತೆರೆಯಲಾಗಿದೆ. 3 ಹೊಸ ಎಂಜಿನಿಯರಿಂಗ್ ಕಾಲೇಜುಗಳನ್ನು ಸರ್ಕಾರ ಆರಂಭಿಸಿದೆ. ಅತಿಥಿ ಉಪನ್ಯಾಸಕರಿಗೆ ₹ 26 ಸಾವಿರಗಳಿಂದ ₹ 32 ಸಾವಿರವರೆಗೆ ಸಂಬಳ ಹೆಚ್ಚಿಸಲಾಗಿದೆ.

ಐಟಿ ಬಿಟಿ ಕಂಪನಿಗಳು ವಿದ್ಯಾರ್ಥಿಗಳಿಗೆ 27,500 ಕಂಪ್ಯೂಟರ್ ವಿತರಿಸಲಾಗಿದೆ. 12,500 ವಿಡಿಯೊ ತರಗತಿಗಳನ್ನು ಕೊರೊನಾ ಕಾಲದಲ್ಲಿ ನಡೆಸಿ ಕಾಲೇಜು ವಿದ್ಯಾರ್ಥಿಗಳಿಗೆ ಶಿಕ್ಷಣ ಮುಂದುವರಿಸಲು ಸಹಾಯ ಮಾಡಲಾಗಿದೆ. ಅದೇ ಹೈಸ್ಕೂಲು ಮಕ್ಕಳಿಗೆ ವಿದ್ಯಾಗಮ ತರಗತಿಗಳನ್ನು ಕೊರೊನಾ ಕಾಲದಲ್ಲಿ ನಡೆಸಿದ್ದರಿಂದ ಶಾಲೆಗಳಿಂದ ದೂರ ಉಳಿದಿದ್ದ ಮಕ್ಕಳಿಗೆ ಅನುಕೂಲವಾಯಿತು.

ಕೊರೊನಾ ಸೋಂಕು ನಮಗೆ ಹಲವು ಪಾಠಗಳನ್ನು ಕಲಿಸಿಕೊಟ್ಟಿದೆ. ಹಿಂದೆ ನಾವು ಸ್ವಚ್ಛತೆಗೆ ಹೆಚ್ಚು ಗಮನ ಕೊಟ್ಟಿರಲಿಲ್ಲ. ಮುಖಕ್ಕೆ ಕವಚ ಧರಿಸುವುದರಿಂದ ಹಲವು ಶ್ವಾಸಕೋಶಕ್ಕೆ ಸಂಬಂಧಿಸಿದ ರೋಗಗಳು ಹರಡುವುದು ಕಡಿಮೆಯಾಯಿತು. ಸ್ವಚ್ಛ ಭಾರತ್ ಯೋಜನೆ ಸಂಚಲನ ಮೂಡಿಸಿದ್ದಂತೂ ನಿಜ. ಈಗ ಕೊರೊನಾ ಇಳಿಮುಖಗೊಂಡಿದ್ದರೂ ಜನರಲ್ಲಿ ಎಚ್ಚರ ಮೂಡಿಸುವ ಕೆಲಸವನ್ನು ಸರ್ಕಾರ ಕೈಬಿಟ್ಟಿಲ್ಲ. ಈಗ ಚಿಕ್ಕ ಮಕ್ಕಳೂ ಕೊರೊನಾ ಬಗ್ಗೆ ಎಚ್ಚರಿಕೆಯ ಮಾತುಗಳನ್ನು ಹೇಳುವ ಪರಿಜ್ಞಾನ ಬೆಳೆಸಿಕೊಂಡಿವೆ ಎಂಬುದು ಸಂತಸದ ಸಂಗತಿ.

ರೈಲು ಮತ್ತು ಬಸ್ ಪ್ರಯಾಣಗಳಲ್ಲೂ ಜನರಲ್ಲಿ ಸ್ವಚ್ಛತೆಯ ಅರಿವು ಮೂಡಿದೆ. ಅದರಲ್ಲೂ ಪ್ಲಾಸ್ಟಿಕ್ ಬಳಕೆ ಇಳಿಮುಖಗೊಂಡಿದ್ದು, ನಿಸರ್ಗದಲ್ಲಿ ಸುಲಭವಾಗಿ ಲೀನವಾಗುವ ವಸ್ತುಗಳಿಂದ ಮಾಡಿರುವುದನ್ನು ಹೆಚ್ಚು ಬಳಸುವ ಪರಿಪಾಠ ಬೆಳೆದಿದೆ. ಇದು ಕಸಮುಕ್ತ ರಾಜ್ಯದತ್ತ ಹೆಜ್ಜೆ ಹಾಕಲು ಸಹಕಾರಿಯಾಗಲಿದೆ.

ಪೊಲೀಸರು ಸಮಾಜಕ್ಕೆ ಅಗತ್ಯ. ಆದರೆ, ಅವರೇ ಸಮಾಜವನ್ನು ನಡೆಸುವುದಿಲ್ಲ. ಅದೇ ರೀತಿ ಸರ್ಕಾರ ಇರುತ್ತದೆ. ಆದರೆ ಅದೇ ಎಲ್ಲವನ್ನೂ ಮಾಡುವುದಿಲ್ಲ. ಅತಿ ಕಡಿಮೆ ಆದೇಶ ನೀಡುವ ಸರ್ಕಾರವೇ ಉತ್ತಮ ಎನ್ನುವ ವಾಕ್ಯವಿದೆ. ಅದಕ್ಕೆ ತಕ್ಕಂತೆ ಬೊಮ್ಮಾಯಿ ಸರ್ಕಾರ ಕಾರ್ಯನಿರ್ವಹಿಸುತ್ತಿದೆ. ಕೆಲವರು ಪ್ರತಿಯೊಂದರಲ್ಲೂ ಸರ್ಕಾರ ಮೂಗು ತೂರಿಸಬೇಕು ಎಂಬ ಅಭಿಪ್ರಾಯ ಹೊಂದಿರುತ್ತಾರೆ. ಕುಂತಿದ್ದಕ್ಕೆ ನಿಂತಿದ್ದಕ್ಕೆ ಆದೇಶ ಹೊರಡಿಸುತ್ತ ಹೋದಲ್ಲಿ ಅದಕ್ಕೆ ಅಂತ್ಯ ಎಂಬುದೇ ಇರುವುದಿಲ್ಲ. ಜನಸಾಮಾನ್ಯರು ಸ್ವಯಂ ಪ್ರೇರಣೆಯಿಂದ ಕಾನೂನು ಉಲ್ಲಂಘಿಸದೇ ಇರುವ ಹಾಗೆ ಜಾಗೃತಿ ಮೂಡಿಸುವುದಷ್ಟೇ ಸರ್ಕಾರದ ಕರ್ತವ್ಯ. ಕರ್ನಾಟಕದ ಎಲ್ಲ ಪ್ರಮುಖ ನಗರಗಳಿಗೆ ರಸ್ತೆ ಮತ್ತು ರೈಲು ಸಂಪರ್ಕ ಕಲ್ಪಿಸುವ ಕೆಲಸ ಭರದಿಂದ ಸಾಗಿದೆ.

ಮೈಸೂರು- ಬೆಂಗಳೂರು 6 ಪಥಗಳ ಹೆದ್ದಾರಿ, ಪುಣೆ- ಬೆಂಗಳೂರು- ಚೆನ್ನೈ ಕೈಗಾರಿಕಾ ಕಾರಿಡಾರ್‌ಗಳು ರಾಜ್ಯದ ಚಿತ್ರಣವನ್ನೇ ಬದಲಿಸಲಿದೆ. ಇದಕ್ಕೆ ಕೇಂದ್ರದ ನೆರವೂ ಲಭಿಸಿದೆ. ಆರ್ಥಿಕ ಪ್ರಗತಿ ಎಂದರೆ ಕೇವಲ ಐಷಾರಾಮಿ ಹೋಟೆಲ್, ಗಗನಚುಂಬಿ ಕಟ್ಟಡಗಳ ನಿರ್ಮಾಣವಲ್ಲ, ಕೋಟ್ಯಧಿಪತಿಗಳು ನಮ್ಮಲ್ಲಿ ಬಂದು ವ್ಯಾಪಾರ ವ್ಯವಹಾರ ನಡೆಸಿದರೆ ನಮ್ಮ ಖಜಾನೆ ತುಂಬುವುದಲ್ಲ. ಕಟ್ಟಕಡೆಯ ಹಳ್ಳಿಯ ಮಗುವಿಗೆ ಎಲ್ಲ ಶಿಕ್ಷಣ ಸವಲತ್ತು ಕಲ್ಪಿಸಿ ಅದು ಜಗತ್ತಿನ ಯಾವುದೇ ಮೂಲೆಯಲ್ಲಾದರೂ ಎಲ್ಲ ಮಕ್ಕಳಿಗೆ ಸರಿಸಮಾನವಾಗಿ ನಿಲ್ಲುವ ಬುದ್ಧಿಮತ್ತೆಯನ್ನು ಬೆಳೆಸುವುದು ಮುಖ್ಯ. ಈ ದಿಸೆಯಲ್ಲಿ ಕರ್ನಾಟಕ ಇಡುತ್ತಿರುವ ಹೆಜ್ಜೆ ಗಮನಾರ್ಹ. ಇದಕ್ಕೆ ನಿಸರ್ಗವೂ ನಮಗೆ ಸಹಕಾರಿಯಾಗಿದೆ. ಇಲ್ಲಿಯ ತಂಪಾದ ಹವಾಗುಣ ಉತ್ತರ ಭಾರತದ ಜನರನ್ನು ಕೈಬೀಸಿ ಕರೆಯುತ್ತಿದೆ. ನಾವು ಹೊರಗಿನಿಂದ ಯಾರೇ ಬರಲಿ ಇವನಾರವ, ಇವನಾರವ ಎಂದು ಕೇಳುವುದಿಲ್ಲ. ಇವ ನಮ್ಮವ ಎನ್ನುತ್ತೇವೆ. ಅದರಿಂದಲೇ ವಿದೇಶಿ ನೇರ ಬಂಡವಾಳ ಹೂಡಿಕೆ ಹರಿದು ಬರಲು ಕಾರಣವಾಗಿದೆ.

ಜ್ಞಾನಾಧಾರಿತ ಆರ್ಥಿಕತೆಯಲ್ಲಿ ಮೊದಲು

ಆರ್ಥಿಕ ಬೆಳವಣಿಗೆ ಎಂದರೆ ನಾವು ಲೆಕ್ಕ ಹಾಕುವುದು ತೆರಿಗೆ, ಆದಾಯ ಮತ್ತು ವಿದೇಶಿ ವಿನಿಮಯ ಗಳಿಕೆ ಮಾತ್ರ. ಆದರೆ, ಕಂಪ್ಯೂಟರೀಕರಣ ಮತ್ತು ಮಾಹಿತಿ ತಂತ್ರಜ್ಞಾನ ಹೆಚ್ಚಿನ ಮಹತ್ವ ಪಡೆದ ಮೇಲೆ ಜ್ಞಾನಾಧಾರಿತ ಆರ್ಥಿಕತೆ ತಲೆಎತ್ತಿತು. 1967ರಲ್ಲಿ ಮಾಹಿತಿ ತಂತ್ರಜ್ಞಾನ ಮುಂಬೈನಲ್ಲಿ ತಲೆ ಎತ್ತಿತ್ತು. ಕಂಪ್ಯೂಟರ್ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ವಿಭಾಗಗಳು ಬೃಹದಾಕಾರವಾಗಿ ಬೆಳೆಯಿತು. ಬೆಂಗಳೂರು ನಗರ ಇದಕ್ಕೆ ತವರೂರು ಆಯಿತು. ಅಮೆರಿಕದ ಸಿಲಿಕಾನ್ ವ್ಯಾಲಿಗೆ ಸರಿಸಮಾನವಾಗಿ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಬೆಳೆಯಿತು. ಇದಕ್ಕೆ ಸರ್ಕಾರ ಕೂಡ ನೆರವು ನೀಡುತ್ತ ಬಂದಿದೆ.

ಐಟಿ ಕಂಪನಿಗಳು ಬೆಳೆದಂತೆ ಎಂಜಿನಿಯರಿಂಗ್ ಕಾಲೇಜುಗಳಿಗೆ ಬೇಡಿಕೆ ಹೆಚ್ಚಾಯಿತು. ಅದರಿಂದ 100ಕ್ಕೂ ಹೆಚ್ಚು ಕಾಲೇಜುಗಳು ತಲೆ ಎತ್ತಲು ಕಾರಣವಾಯಿತು. ಈ ಸಮಯದಲ್ಲಿ ಅಬ್ದುಲ್ ಕಲಾಂ ಬೆಂಗಳೂರಿನ ಡಿಆರ್‌ಡಿಒ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು. ಅವರ ಪ್ರಭಾವದಿಂದ ಇಸ್ರೊ, ಎನ್‌ಎಎಲ್ ಮತ್ತಿತರ ಸಂಸ್ಥೆಗಳು ಜಾಗತಿಕ ಮಟ್ಟದಲ್ಲಿ ಖ್ಯಾತಿಗಳಿಸಲು ಸಾಧ್ಯವಾಯಿತು. ಅವರು ರಾಷ್ಟ್ರಪತಿಯಾದ ಮೇಲೆ ಬೆಂಗಳೂರಿನ ಮಹತ್ವ ಇನ್ನೂ ಅಧಿಕಗೊಂಡಿತು. ಜ್ಞಾನ ಆಧರಿತ ತಂತ್ರಜ್ಞಾನದಲ್ಲಿ ಭಾರತ ಸೂಪರ್ ಪವರ್ ಆಗಲಿದೆ ಎಂದು ಅವರು ಆಗಲೇ ಹೇಳಿದ್ದರು. ಅದರಂತೆ ಮಾಹಿತಿ ತಂತ್ರಜ್ಞಾನದಲ್ಲಿ ನಮ್ಮ ಯುವಕರು ಜಗತ್ತಿನಲ್ಲಿ ಮೊದಲ ಸಾಲಿನಲ್ಲಿ ನಿಲ್ಲುವ ಸಾಮರ್ಥ್ಯ ಪಡೆದಿದ್ದಾರೆ.

ಕಂಪ್ಯೂಟರ್ ಬಳಕೆ ಎಲ್ಲ ರಂಗಗಳಿಗೆ ವಿಸ್ತರಿಸಿದ ಮೇಲೆ ಬೌದ್ಧಿಕ ಸನ್ನದು ಪ್ರಮುಖವಾಯಿತು. ಪೇಟೆಂಟ್ ಪಡೆಯುವುದು ಔಷಧ ಕ್ಷೇತ್ರಕ್ಕೆ ಮಾತ್ರ ಮೀಸಲಾಗಿತ್ತು. ಈಗ ಎಲ್ಲ ಕ್ಷೇತ್ರಗಳಲ್ಲಿ ಪೇಟೆಂಟ್ ಕಾಯ್ದೆ ಜಾರಿಗೆ ಬಂದಿದೆ. ಹೊಸ ಹೊಸ ತಂತ್ರಜ್ಞಾನ ಅವಿಷ್ಕಾರಕ್ಕೆ ಅವಕಾಶ ಮಾಡಿಕೊಡುವುದು ಈಗ ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. 2007ರಲ್ಲಿ ವಿಶ್ವ ಬುದ್ಧಿಮತ್ತೆ ಆಸ್ತಿ ಸಂಸ್ಥೆ (ಡಬ್ಲುಐಪಿಒ) ತಲೆ ಎತ್ತಿತು. ಇದರ ಸಂಸ್ಥಾಪಕರಲ್ಲಿ ಸೌಮಿತ್ರ ದತ್ತ ಒಬ್ಬರು ಎಂಬುದು ಗಮನಾರ್ಹ. ಅವರು 131 ದೇಶಗಳ ಬೌದ್ಧಿಕ ಆರ್ಥಿಕತೆಯನ್ನು ಅಳತೆ ಮಾಡಿ ಪ್ರತಿ ದೇಶಕ್ಕೂ ಒಂದು ರ್‍ಯಾಂಕ್ ನೀಡುವ ಪರಿಪಾಠವನ್ನು ಜಾರಿಗೆ ತಂದರು. ಭಾರತ ಇದರಲ್ಲಿ 48ನೇ ಸ್ಥಾನ ಪಡೆದಿದೆ. ಮೊದಲ 50 ದೇಶಗಳ ಪಟ್ಟಿಯಲ್ಲಿ ಭಾರತ ಇರುವುದು ಗಮನಾರ್ಹ. ಅದೇರೀತಿ ನೀತಿ ಆಯೋಗ ಪ್ರತಿವರ್ಷ ಸಮೀಕ್ಷೆ ನಡೆಸಿ ರಾಜ್ಯಗಳ ಬೌದ್ಧಿಕ ಆರ್ಥಿಕತೆ ಮಟ್ಟವನ್ನು ಅಳೆಯುತ್ತಿದೆ. ಕಳೆದ ಮೂರು ವರ್ಷಗಳಿಂದ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಇದಕ್ಕೆ ಐಟಿ ಕಂಪನಿಗಳೇ ಕಾರಣ ವಿದೇಶಿ ನೇರ ಬಂಡವಾಳ ಅಧಿಕಗೊಳ್ಳಲು ಈ ಕಂಪನಿಗಳೇ ಆಧಾರ.

ಮಾನವ ಸಂಪನ್ಮೂಲ ಅಭಿವೃದ್ಧಿ ಹಾಗೂ ಇತರ ನಾಗರಿಕ ಸವಲತ್ತುಗಳ ಪೂರೈಕೆ, ರಾಜಕೀಯ ಸ್ಥಿರತೆ ಸೇರಿದಂತೆ ಎಲ್ಲ ಮಾನದಂಡಗಳೂ ಕರ್ನಾಟಕದ ಪರವಾಗಿದೆ. ಈ ಪರಂಪರೆಯನ್ನು ಮುಂದುವರಿಸುವುದು ಅಗತ್ಯ.

ಒಂಟಿ ವೃದ್ಧೆ ಕೊಲೆ ಪ್ರಕರಣ: ಸಾಫ್ಟ್‌ವೇರ್ ಕಂಪನಿ ಉದ್ಯೋಗಿ ಬಂಧನ

ಸಾಲ ತೀರಿಸಲು ಮನೆ ಒಡತಿ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚನ್ನಮ್ಮನ ಕೆರೆ ಅಚ್ಚುಕಟ್ಟು ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಯಶೋಧಮ್ಮ (75) ಕೊಲೆ ಪ್ರಕ ರಣ ಭೇದಿಸಿರುವ ಪೊಲೀಸರು, ಬಾಡಿಗೆದಾರ ಜೈ ಕಿಶನ್ ಎಂಬಾತನನ್ನು ಬಂಧಿಸಿದ್ದಾರೆ.

'ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಮಾರುಕಟ್ಟೆ ಅಧಿಕಾರಿ ಆಗಿ ಕೆಲಸ ಮಾಡುತ್ತಿದ್ದ ಕಿಶನ್, ವೃದ್ಧೆ ಯಶೋಧಮ್ಮ ಒಡೆತನದ ಮನೆಯಲ್ಲಿ ಬಾಡಿಗೆಗಿದ್ದ. ಜುಲೈ 1ರಂದು ಯಶೋಧಮ್ಮ ಅವರನ್ನು ಕೊಲೆ ಮಾಡಿ, ಚಿನ್ನಾಭರಣ ದೋಚಿದ್ದ. ತನಿಖೆಗೆ ರಚಿಸಲಾಗಿದ್ದ ವಿಶೇಷ ತಂಡ, ಆರೋಪಿ ಬಂಧಿಸುವಲ್ಲಿ ಯಶಸ್ವಿಯಾಗಿದೆ' ಎಂದು ದಕ್ಷಿಣ ವಿಭಾಗದ ಡಿಸಿಪಿ ಪಿ. ಕೃಷ್ಣಕಾಂತ್ ಹೇಳಿದರು.

'ವಿನಾಯಕ ನಗರದ 5ನೇ ಅಡ್ಡರಸ್ತೆಯಲ್ಲಿ ಬಹುಮಹಡಿ ಕಟ್ಟಡ ಹೊಂದಿದ್ದ ಯಶೋಧಮ್ಮ, ನೆಲ ಮಹಡಿ ಮನೆಯಲ್ಲಿ ಒಂಟಿಯಾಗಿ ವಾಸವಿದ್ದರು. ಇವರ ಒಬ್ಬನೇ ಮಗ, ಕತ್ರಿಗುಪ್ಪೆಯಲ್ಲಿ ಪ್ರತ್ಯೇಕವಾಗಿ ವಾಸವಿದ್ದರು. ಆಗಾಗ ತಾಯಿ ಮನೆಗೆ ಬಂದು ಆರೋಗ್ಯ ವಿಚಾರಿಸಿಕೊಂಡು ಹೋಗುತ್ತಿದ್ದರು' ಎಂದೂ ಡಿಸಿಪಿ ತಿಳಿಸಿದರು.

ಷೇರು ವ್ಯವಹಾರದಲ್ಲಿ ನಷ್ಟ: 'ಯಶೋಧಮ್ಮ ಅವರ ಬಹುಮಹಡಿ ಕಟ್ಟಡದ ಎರಡನೇ ಮಹಡಿ ಮನೆಯಲ್ಲಿ ನಾಲ್ಕು ವರ್ಷಗಳಿಂದ ಕಿಶನ್ ಬಾಡಿಗೆಗಿದ್ದ. ಆನ್‌ಲೈನ್ ಷೇರು ವ್ಯವಹಾರದಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದ ಈತ, ಲಕ್ಷಾಂತರ ರೂಪಾಯಿ ಹೂಡಿಕೆ ಮಾಡಿದ್ದ. ಆದರೆ, ಹಣ ವಾಪಸು ಬರದೇ ನಷ್ಟ ಅನುಭವಿಸಿದ್ದ' ಎಂದು ಡಿಸಿಪಿ ಹೇಳಿದರು.

'ಸಾಲದ ಹಣ ವಾಪಸು ಕೊಡುವಂತೆ ಸಾಲಗಾರರು ಮನೆ ಬಳಿ ಬಂದು ಗಲಾಟೆ ಮಾಡಲಾರಂಭಿಸಿದ್ದರು. ಇದೇ ವೇಳೆಯೇ ಯಶೋಧಮ್ಮ ಬಳಿಯೂ ಆರೋಪಿ ₹ 40 ಸಾವಿರ ಸಾಲ ಪಡೆದಿದ್ದ. ಅದನ್ನೂ ವಾಪಸು ಕೊಟ್ಟಿರಲಿಲ್ಲ. ಈ ವಿಚಾರಕ್ಕೂ ಇಬ್ಬರ ನಡುವೆ ಆಗಾಗ ಜಗಳ ನಡೆಯುತ್ತಿತ್ತು' ಎಂದೂ ಹೇಳಿದರು.

ಸಾಲ ತೀರಿಸಲು ಕೊಲೆಗೆ ಸಂಚು: 'ಯಶೋಧಮ್ಮ ಒಂಟಿಯಾಗಿರುವುದನ್ನು ತಿಳಿದಿದ್ದ ಆರೋಪಿ, ಅವರನ್ನು ಕೊಲೆ ಮಾಡಿ ಚಿನ್ನಾಭರಣ ದೋಚಲು ಸಂಚು ರೂಪಿಸಿದ್ದ' ಎಂದು ಕೃಷ್ಣಕಾಂತ್ ತಿಳಿಸಿದರು.

'ಸಾಲ ವಾಪಸು ಕೊಡುವ ಸೋಗಿನಲ್ಲಿ ಜುಲೈ 1ರಂದು ಆರೋಪಿ, ವೃದ್ಧೆ ಮನೆಗೆ ಹೋಗಿದ್ದ. ಜಗಳ ತೆಗೆದು ಯಶೋಧಮ್ಮ ಮೇಲೆ ಹಲ್ಲೆ ಮಾಡಿದ್ದ ಚಾಕುವಿನಿಂದ 60 ಬಾರಿ ವೃದ್ಧೆಗೆ ಇರಿದಿದ್ದ. ತೀವ್ರ ರಕ್ತಸ್ರಾವದಿಂದ ವೃದ್ಧೆ ಮೃತಪಟ್ಟ ಬಳಿಕ ಆರೋಪಿ ಅಲ್ಲಿಂದ ತನ್ನ ಮನೆಗೆ ಹೋಗಿದ್ದ' ಎಂದೂ ಹೇಳಿದರು.

ಆಭರಣ ಅಡವಿಟ್ಟು ಸಿಕ್ಕಿಬಿದ್ದ: 'ಮತ್ತೊಂದು ಮನೆಯಲ್ಲಿ ಬಾಡಿಗೆಗಿದ್ದವರು, ವೃದ್ಧೆ ಮೃತದೇಹ ನೋಡಿ ಠಾಣೆಗೆ ಮಾಹಿತಿ ನೀಡಿದ್ದರು. ತನಿಖೆಗೆಂದು ಪೊಲೀಸರು ಸ್ಥಳಕ್ಕೆ ಹೋದಾಗ ಆರೋಪಿ ಅಮಾಯಕನಂತೆ ವರ್ತಿಸಿದ್ದ. ಯಾವುದೇ ಅನುಮಾನ ಬಾರದಂತೆ ನಟಿಸಿದ್ದ' ಎಂದು ಕೃಷ್ಣಕಾಂತ್ ತಿಳಿಸಿದರು. 'ವೃದ್ಧೆಯಿಂದ ದೋಚಿದ್ದ ಆಭರಣ ವನ್ನು ಆರೋಪಿ, ಚಿನ್ನಾಭರಣ ಮಳಿಗೆಯೊಂದರಲ್ಲಿ ಅಡವಿಟ್ಟಿದ್ದ. ಇದೇ ಸುಳಿವು ಆಧರಿಸಿ ಆತನನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ತಪ್ಪೊಪ್ಪಿಕೊಂಡ' ಎಂದೂ ಹೇಳಿದರು.

ಗ್ಯಾಸ್ ರಿಫಿಲ್ಲಿಂಗ್ ವೇಳೆ ಸ್ಫೋಟ: ಸಾವು

ಬೆಂಗಳೂರು: ಗ್ಯಾಸ್ ರಿಫಿಲ್ಲಿಂಗ್ ವೇಳೆ ಸ್ಫೋಟ ಸಂಭವಿಸಿ ತೀವ್ರ ಗಾಯಗೊಂಡಿದ್ದ ಕದೀರ್ (24) ಎಂಬುವರು ಚಿಕಿತ್ಸೆಗೆ ಸ್ಪಂದಿಸದೇ ಆಸ್ಪತ್ರೆಯಲ್ಲಿ ಭಾನುವಾರ ಮೃತಪಟ್ಟಿದ್ದಾರೆ.

'ಎಚ್‌ಎಎಲ್ ಬಳಿಯ ಇಸ್ಲಾಂಪುರ ನಿವಾಸಿ ಕದೀರ್, ಬಾಡಿಗೆ ಮನೆಯಲ್ಲಿ ವಾಸವಿದ್ದರು. ಅದೇ ಮನೆಯಲ್ಲಿ ಬುಧವಾರ ಸ್ಫೋಟ ಸಂಭವಿಸಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕದೀರ್, ಅಕ್ರಮವಾಗಿ ಗ್ಯಾಸ್ ರಿಫಿಲ್ಲಿಂಗ್ ಮಾಡಿ ಹಣ ಸಂಪಾದಿಸುತ್ತಿದ್ದರು. ಬುಧವಾರವೂ ಮನೆ ಬಳಕೆ ಸಿಲಿಂಡರ್‌ಗಳಿಂದ ಸಣ್ಣ ಗಾತ್ರದ ಸಿಲಿಂಡರ್‌ಗಳಿಗೆ ಅಡುಗೆ ಅನಿಲ ವರ್ಗಾಯಿಸುತ್ತಿದ್ದರು. ಆಗ ಅನಿಲ ಸೋರಿಕೆಯಾಗಿ ಸ್ಫೋಟ ಸಂಭವಿಸಿ ಬೆಂಕಿ ಹೊತ್ತಿಕೊಂಡಿತ್ತು. ಈ ಬಗ್ಗೆ ಮನೆ ಮಾಲೀಕರು, ಪ್ರತ್ಯಕ್ಷದರ್ಶಿಗಳ ಹೇಳಿಕೆ ಪಡೆಯಲಾಗಿದೆ' ಎಂದೂ ತಿಳಿಸಿವೆ.

ಸುಲಿಗೆ: ಎಂಬಿಎ ಪದವೀಧರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕರನ್ನು ಅಡ್ಡಗಟ್ಟಿ ಸುಲಿಗೆ ಮಾಡಿ ಪರಾರಿ ಯಾಗಿದ್ದ ನಾಲ್ವರು ಆರೋಪಿಗಳನ್ನು ಗಿರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಶ್ರೀಧರ್ (29) ಹಾಗೂ ನಿತಿನ್ ರಾಜ್ (18) ಬಂಧಿತರು. ಇನ್ನಿಬ್ಬರು ಬಾಲಕರಾಗಿದ್ದು, ಅವರನ್ನು ಬಾಲ ನ್ಯಾಯ ಮಂಡಳಿ ಎದುರು ಹಾಜರುಪಡಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿ ಶ್ರೀಧರ್, ಎಂಬಿಎ ಪದವೀಧರ. ಹಲವೆಡೆ ಸಾಲ ಮಾಡಿ, ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ಹಣ ಕಳೆದುಕೊಂಡಿದ್ದ. ಸಾಲಗಾರರ ಕಿರುಕುಳ ಹೆಚ್ಚಾಗುತ್ತಿದ್ದಂತೆ, ಮನೆ ತೊರೆದಿದ್ದ. ಸಹಚರರ ಜೊತೆ ಸೇರಿ ಸುಲಿಗೆ ಹಾಗೂ ಕಳ್ಳತನ ಎಸಗಲಾರಂಭಿಸಿದ್ದ' ಎಂದೂ ತಿಳಿಸಿದರು.

'ಬ್ಯಾಂಕ್ ಕಾಲೊನಿಯಲ್ಲಿ ಜೂನ್ 2ರಂದು ಲೋಕೇಶ್ ಎಂಬುವರನ್ನು ಅಡ್ಡಗಟ್ಟಿದ್ದ ಆರೋಪಿಗಳು, ಮಾರಕಾಸ್ತ್ರ ತೋರಿಸಿ ಬೆದರಿಸಿದ್ದರು. ಚಿನ್ನದ ಉಂಗುರ, ಸರ, ಪರ್ಸ್‌ನಲ್ಲಿದ್ದ ₹ 20 ಸಾವಿರ ನಗದು ಹಾಗೂ ಮೊಬೈಲ್ ಸುಲಿಗೆ ಮಾಡಿ ಪರಾರಿಯಾಗಿದ್ದರು' ಎಂದೂ ಹೇಳಿದರು.

ಮಲೆ ಮಹದೇಶ್ವರ ದೇವಸ್ಥಾನಕ್ಕೆ ಹೋಗಿ ಪೂಜೆ: 'ಕೃತ್ಯದ ಬಳಿಕ ಆರೋಪಿಗಳು, ಗೋವಾಗೆ ಹೋಗಿ ಕೆಲ ದಿನ ಮೋಜು–ಮಸ್ತಿ ಮಾಡಿದ್ದರು. ನಂತರ, ಪಶ್ಚಾತಾಪವಾಗಿ ಮಲೆಮಹದೇಶ್ವರ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದ್ದರು. ಆರೋಪಿಗಳ ಬಗ್ಗೆ ಸುಳಿವು ಸಿಗುತ್ತಿದ್ದಂತೆ ವಿಶೇಷ ಕಾರ್ಯಾಚರಣೆ ನಡಸಿ ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಕಾಂಪೌಂಡ್‌ಗೆ ಡಿಕ್ಕಿ: ಚಾಲಕ ಸಾವು

ಬೆಂಗಳೂರು: ಚಿಕ್ಕಜಾಲ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಮನೆಯೊಂದರ ಕಾಂಪೌಂಡ್‌ಗೆ ಟ್ರ್ಯಾಕ್ಟರ್ ಗುದ್ದಿ ಅಪಘಾತ ಸಂಭವಿಸಿದ್ದು, ಚಾಲಕ ದಿಲೀಪ್ (22) ಎಂಬುವರು ಮೃತಪಟ್ಟಿದ್ದಾರೆ.

'ಹಾಸನದ ದಿಲೀಪ್, ಯಲಹಂಕದಲ್ಲಿ ವಾಸವಿದ್ದರು. ನೀರಿನ ಟ್ಯಾಂಕ್ ಅಳವಡಿಸಿದ್ದ ಟ್ರ್ಯಾಕ್ಟರ್ ಚಾಲನೆ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಭಾನುವಾರ ಬೆಳಿಗ್ಗೆ 4.30ರ ಸುಮಾರಿಗೆ ದಿಲೀಪ್ ಟ್ರ್ಯಾಕ್ಟರ್‌ನಲ್ಲಿ ಹೊರಟಿದ್ದರು. ಮಾರ್ಗಮಧ್ಯೆ ಅತೀ ವೇಗವಾಗಿ ಟ್ರ್ಯಾಕ್ಟರ್ ಚಲಾಯಿಸಿದ್ದರು. ನಿಯಂತ್ರಣ ತಪ್ಪಿದ ಟ್ರ್ಯಾಕ್ಟರ್, ಮನೆಯೊಂದರ ಕಾಂಪೌಂಡ್‌ಗೆ ಗುದ್ದಿ ಜಖಂಗೊಂಡಿತ್ತು. ತೀವ್ರ ಗಾಯಗೊಂಡು ದಿಲೀಪ್ ಮೃತಪಟ್ಟಿದ್ದಾರೆಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ' ಎಂದೂ ತಿಳಿಸಿದರು.

ಯೋಜನೆಗಳಿಂದ ಶಕ್ತಿಶಾಲಿ ದೇಶ: ಗೆಹಲೋತ್

ಪ್ರಜಾವಾಣಿ ವಾರ್ತೆ



ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಕೆರೆ ಹೋಬಳಿಯ ಯಲಚಗುಪ್ಪೆ ಗ್ರಾಮದಲ್ಲಿ ಬಂಟರ ಸಂಘದ ಬಿಎಸ್‌ಆರ್‌ಎನ್‌ಎಸ್ ವಿದ್ಯಾನಿಕೇತನ 2 ಶಾಲಾ ಸಂಕೀರ್ಣ ಉದ್ಘಾಟನೆ ಸಮಾರಂಭದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಸನ್ಮಾನಿಸಲಾಯಿತು

ಬೆಂಗಳೂರು: 'ಮೇಕ್ ಇನ್ ಇಂಡಿಯಾ, ಡಿಜಿಟಲ್ ಇಂಡಿಯಾ, ಸ್ಟಾರ್ಟ್ ಅಪ್ ಮುಂತಾದ ಮಹತ್ವದ ಯೋಜನೆಗಳ ಸಹಾಯದಿಂದ ಶಕ್ತಿಶಾಲಿ ದೇಶ ಕಟ್ಟಲು ಸಾಧ್ಯವಿದೆ. ಇದರ ಒಟ್ಟು ಫಲಿತಾಂಶವೇ ಆತ್ಮನಿರ್ಭರ ಭಾರತ' ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

ಬೆಂಗಳೂರು ದಕ್ಷಿಣ ತಾಲೂಕಿನ ತಾವರೆಕೆರೆ ಹೋಬಳಿಯ ಯಲಚಗುಪ್ಪೆಯಲ್ಲಿ ಬಂಟರ ಸಂಘದ ಬಿಎಸ್‌ಆರ್‌ಎನ್‌ಎಸ್ ವಿದ್ಯಾನಿ ಕೇತನ-2 ಶಾಲಾ ಸಂಕೀರ್ಣ ಉದ್ಘಾಟಿಸಿ ಮಾತನಾಡಿದರು.

'ಭವಿಷ್ಯದಲ್ಲಿ ಉದ್ಯೋಗ ಸೃಷ್ಟಿ, ಮಹಿಳಾ ಸಶಕ್ತೀಕರಣ ಹಾಗೂ ಪರಸ್ಪರ ಸಹಭಾಗಿತ್ವದ ಮೂಲಕ ದೇಶದ ಅಭಿವೃದ್ಧಿಗೆ ವಿದ್ಯಾರ್ಥಿಗಳಿಗೆ ಗುಣ ಮಟ್ಟದ ಶಿಕ್ಷಣ ನೀಡಬೇಕು' ಎಂದರು.

ಮಂತ್ರಾಲಯ ರಾಘವೇಂದ್ರ ಸ್ವಾಮಿ ಮಠದ ಸುಭುದೇಂದ್ರ ತೀರ್ಥ ಸ್ವಾಮೀಜಿ ಮಾತನಾಡಿ, 'ಶಿಕ್ಷಣ ಸಂಸ್ಥೆಗಳು ದೇಶದ ಪ್ರಗತಿಯ ಮಾಧ್ಯಮವಾಗಿದೆ. ಯಾರು ಅಕ್ಷರದಿಂದ ದೂರ ಆಗಿರುತ್ತಾರೆ, ಅವರು ಲೋಕ ಕಂಟಕರಾಗಿರುತ್ತಾರೆ' ಎಂದರು.

'ಶೀಲ, ಚಾರಿತ್ರ್ಯ, ಸೇವೆ, ತ್ಯಾಗದ ಮನೋಭಾವನೆಯ ಶಿಕ್ಷಣ ನೀಡಬೇಕು' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದರು.

ಮಾಜಿ ಲೋಕಾಯುಕ್ತ ನ್ಯಾಯ ಮೂರ್ತಿ ಪಿ. ವಿಶ್ವನಾಥ ಶೆಟ್ಟಿ, ಬಿ.ಎಸ್. ಆರ್.ಎನ್.ಎಸ್ ವಿದ್ಯಾನಿಕೇತನದ ಆಡಳಿತ ಮಂಡಳಿ ಅಧ್ಯಕ್ಷ ಕೆ. ಪ್ರಕಾಶ್ ಶೆಟ್ಟಿ, ಬೆಂಗಳೂರು ವಿವಿ ಕುಲಪತಿ ಡಾ. ಎಂ. ಜಯಕರ ಶೆಟ್ಟಿ, ಉದ್ಯಮಿ ಶಶಿಕಿರಣ್ ಶೆಟ್ಟಿ, ಮಿಸ್ ಇಂಡಿಯಾ ಸಿನಿ ಶೆಟ್ಟಿ ಉಪಸ್ಥಿತರಿದ್ದರು.

ಬಂಟರ ಸಂಘದ ಅಧ್ಯಕ್ಷ ಆರ್. ಉಪೇಂದ್ರ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಮಧುಕರ ಶೆಟ್ಟಿ, ಕೋಶಾಧಿಕಾರಿ ದೀಪಕ್ ಶೆಟ್ಟಿ ಇದ್ದರು.

ನಗರದಲ್ಲಿ ಇಂದು



ಅಶ್ವತ್ಥ ನಾರಾಯಣ

ಸೃಷ್ಟಿ–2022: ಉದ್ಘಾಟನೆ: ಎಸ್. ಸೋಮನಾಥ್, ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಸ್ಥಳ: ಬಿಎಂಎಸ್ ಬಸವನಗುಡಿ ಎಂಜಿನಿಯರಿಂಗ್ ಕಾಲೇಜು, ಮಧ್ಯಾಹ್ನ 3

ದಯಾನಂದಸಾಗರ್ ಸ್ಮರಣಾರ್ಥ ರಾಜ್ಯಮಟ್ಟದ ಸಾಂಸ್ಕೃತಿಕ ರಂಗೋತ್ಸವ: ಅತಿಥಿಗಳು: ಹೇಮಚಂದ್ರ ಸಾಗರ್, ರೋಹನ್.ಪಿ. ಸಾಗರ್, ಪ್ರೇಮಚಂದ್ರ ಸಾಗರ್, ಅಧ್ಯಕ್ಷತೆ: ಉದಯ್.ಬಿ. ಗರುಡಾಚಾರ್, ಲಲಿತಾ ನಾಯ್ಕ, ಆಯೋಜನೆ:ರಂಗಶ್ರೀ ಕಲಾ ಸಂಸ್ಥೆ, ದಯಾನಂದಸಾಗರ್ ಪ್ರತಿಷ್ಠಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಚಂದ್ರಸಾಗರ್ ಕಲ್ಯಾಣಮಂಟಪ, ಅಶೋಕ ಪಿಲ್ಲರ್, ಸಂಜೆ 4

ಫೂಲನ್‌ದೇವಿ ನಾಟಕ ಪ್ರದರ್ಶನ: ರಚನೆ, ಸಂಗೀತ, ನಿರ್ದೇಶನ: ರಾಜಗುರು, ವಸ್ತ್ರವಿನ್ಯಾಸ, ನಿರ್ವಹಣೆ: ನಯನ ಸೂಡ, ರಂಗ ಸಜ್ಜಿಕೆ: ಶಶಿಧರ ಅಡಪ, ಪ್ರಸಾಧನ: ಜಯರಾಜ್ ಹೊಸ್ಕೂರು, ಆಯೋಜನೆ: ರಂಗಪಯಣ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 7

ಎಸ್‌. ಆರ್‌. ವಿಶ್ವನಾಥ್‌ಗೆ ಶುಭ ಕೋರಿದ ಮುಖ್ಯಮಂತ್ರಿ

ತಳ್ಳುಗಾಡಿ, ಹೊಲಿಗೆ ಯಂತ್ರ ವಿತರಣೆ

ಪ್ರಜಾವಾಣಿ ವಾರ್ತೆ



ಶಾಸಕ ಎಸ್‌.ಆರ್‌.ವಿಶ್ವನಾಥ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಿಂಗನಾಯಕನಹಳ್ಳಿಯಲ್ಲಿರುವ ಅವರ ನಿವಾಸಕ್ಕೆ ಭಾನುವಾರ ಭೇಟಿ ನೀಡಿ ಶುಭ ಕೋರಿದರು. ಪತ್ನಿ ವಾಣಿಶ್ರೀ ವಿಶ್ವನಾಥ್, ಪುತ್ರ ಆಲೋಕ್, ಪುತ್ರಿ ಅಪೂರ್ವ ಇದ್ದರು.

ಯಲಹಂಕ: ಬಿಡಿಎ ಅಧ್ಯಕ್ಷ ಎಸ್. ಆರ್.ವಿಶ್ವನಾಥ್ ಅವರ ಜನ್ಮದಿನದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಿಂಗನಾಯಕನಹಳ್ಳಿಯ ಅವರ ನಿವಾಸಕ್ಕೆ ಭಾನುವಾರ ಭೇಟಿ ನೀಡಿ ಶುಭ ಕೋರಿದರು.

ಬಳಿಕ ಮಾತನಾಡಿದ ಅವರು, 'ಹೋರಾಟದ ಮೂಲಕ ಬಂದಿರುವ ವಿಶ್ವನಾಥ್, ಕ್ಷೇತ್ರದಲ್ಲಿ ಜನಪರ ಕೆಲಸಗಳನ್ನು ಮಾಡುತ್ತಿದ್ದು, ಅತ್ಯುತ್ತಮ ಶಾಸಕರಲ್ಲಿ ಇವರೂ ಒಬ್ಬರು. ಇಂತಹ ಶಾಸಕರು ಸಿಕ್ಕಿರುವುದು ಕ್ಷೇತ್ರದ ಜನರ ಸೌಭಾಗ್ಯ. ಬಿಡಿಎನಲ್ಲಿಯೂ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ' ಎಂದರು.

ಹೊನ್ನೇನಹಳ್ಳಿಯ ಸಮೀಪದ ರೆಸಾರ್ಟ್‌ನಲ್ಲಿ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮಾತನಾಡಿ, 'ವಿಶ್ವನಾಥ್‌ಗೆ ಶೀಘ್ರ ಸಚಿವ ಸ್ಥಾನ ಸಿಗಬೇಕು. ಈ ಸಂಬಂಧ ಮುಖ್ಯಮಂತ್ರಿ ಜೊತೆಗೆ ಚರ್ಚಿಸುವೆ' ಎಂದರು.

ಎಸ್.ಆರ್.ವಿಶ್ವನಾಥ್ ಮಾತನಾಡಿ, 'ಕಾರ್ಯಕ್ರಮದಲ್ಲಿ 50 ಮಂದಿ ಅಂಗವಿಕಲರಿಗೆ ವಾಹನ, 300 ತಳ್ಳುಗಾಡಿ, 2000 ಹೊಲಿಗೆ ಯಂತ್ರ, ವಿದ್ಯಾರ್ಥಿಗಳಿಗೆ ನೋಟ್‌ಬುಕ್ ಮತ್ತು ಲೇಖನಿ ಸಾಮಗ್ರಿ, ಕಾರ್ಮಿಕ ಇಲಾಖೆಯಿಂದ 1,500 ಮಂದಿಗೆ ಅಗತ್ಯ ವಸ್ತುಗಳು, ಕಾರ್ಮಿಕ ಕಾರ್ಡ್ ವಿತರಿಸಲಾಗಿದೆ. ಕಂದಾಯ ಇಲಾಖೆಯಿಂದ 420 ಮಂದಿಗೆ 94'ಸಿಸಿ' ಹಕ್ಕುಪತ್ರ, 165 ಪಿಂಚಣಿ ಆದೇಶಪತ್ರ ಹಾಗೂ 70 ಪಹಣಿ ವಿಸ್ತೀರ್ಣ ತಿದ್ದುಪಡಿ ಆದೇಶಗಳು ಹಾಗೂ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರಿಗೆ ಬಟ್ಟೆ ವಿತರಿಸಲಾಗಿದೆ' ಎಂದು ಅವರು ತಿಳಿಸಿದರು.

ಲೋಕಾರ್ಪಣೆ: ಯಲಹಂಕದ ಹಳೆಯ ಹಾಗೂ ಉಪನಗರ ವ್ಯಾಪ್ತಿಯಲ್ಲಿ ನೂತನವಾಗಿ ನಿರ್ಮಿಸಿರುವ ಬ್ಯಾಡ್ಮಿಂಟನ್ ಕೋರ್ಟ್, ಸರ್ಕಾರಿ ಶಾಲಾ ಕಟ್ಟಡಗಳು, ಉದ್ಯಾನ ಹಾಗೂ ಆಯುರ್ವೇದ ಆಸ್ಪತ್ರೆ ಕಟ್ಟಡವನ್ನು ವಿಶ್ವನಾಥ್ ಉದ್ಘಾಟಿಸಿದರು.

ದೊಡ್ಡಬಳ್ಳಾಪುರ ಮುಖ್ಯರಸ್ತೆಯಲ್ಲಿ ನೂತನವಾಗಿ ಅಳವಡಿಸಿರುವ ಟಸ್ಕರ್ ವಿದ್ಯುತ್ ದೀಪಗಳು ಹಾಗೂ ಸಂದೀಪ್ ಉನ್ನಿಕೃಷ್ಣನ್ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಅಳವಡಿಸಿರುವ ಅಲಂಕಾರಿಕ ವಿದ್ಯುತ್ ದೀಪಗಳನ್ನು ಅನಾವರಣಗೊಳಿಸಿದರು.

'ಸದಾಶಿವ ಆಯೋಗದ ವರದಿ; ಚರ್ಚಿಸಿ ತೀರ್ಮಾನ'

ಪ್ರಜಾವಾಣಿ ವಾರ್ತೆ



ಮಾಗಡಿ ತಾಲ್ಲೂಕಿನ ಸೋಲೂರು ಹೋಬಳಿ ಪಾಲನಹಳ್ಳಿ ನಡೆದ ಚೌಡೇಶ್ವರಿ ದೂಳೋತ್ಸವದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮಾಜಿ ಸಚಿವರಾದ ಎಚ್‌.ಎಂ.ರೇವಣ್ಣ, ಆಂಜನಮೂರ್ತಿ, ಡಾ.ಸಿದ್ದರಾಜು ಸ್ವಾಮಿ ಹಾಗೂ ಮಾದಿಗ ಸಮುದಾಯದ ಸ್ವಾಮೀಜಿಗಳು ಭಾಗವಹಿಸಿದ್ದರು

ಬೆಂಗಳೂರು: 'ಒಳ ಮೀಸಲಾತಿ ವರ್ಗೀಕರಣ ಸಂಬಂಧಿಸಿದಂತೆ ನ್ಯಾಯ ಮೂರ್ತಿ ಎ.ಜೆ. ಸದಾಶಿವ ಆಯೋಗ ನೀಡಿರುವ ವರದಿ ವಿಚಾರವಾಗಿ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಮತ್ತು ಜಿ. ಪರಮೇಶ್ವರ ಜತೆ ಮಾತನಾಡಿದ್ದೇವೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಈ ಬಗ್ಗೆ ತೀರ್ಮಾನ ಮಾಡುತ್ತೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಮಾಗಡಿ ತಾಲ್ಲೂಕು ಸೋಲೂರಿನ ಪಾಲನಹಳ್ಳಿ ಮಠಕ್ಕೆ ಭಾನುವಾರ ಭೇಟಿ ನೀಡಿದ ಅವರು, ಸಿದ್ದರಾಜು ಸ್ವಾಮೀಜಿ ಸೇರಿದಂತೆ ಮಾದಿಗ ಸಮಾಜದ ವಿವಿಧ ಸ್ವಾಮೀಜಿಗಳ ಜತೆ ಸಮಾಲೋಚನೆ ನಡೆಸಿದರು. ಇದೇ ಸಂದರ್ಭದಲ್ಲಿ ಆಷಾಢ ಮಾಸದ ಚೌಡೇಶ್ವರಿ ದೇವಿಯ ದೂಳು ಉತ್ಸವದಲ್ಲಿ ಭಾಗವಹಿಸಿ, ಶನೇಶ್ವರ ದೇವರ ದರ್ಶನ ಪಡೆದರು. ಪಕ್ಷದ ಮುಖಂಡರಾದ ಎಚ್‌.ಎಂ. ರೇವಣ್ಣ, ಎಚ್. ಆಂಜನೇಯ ಕೂಡಾ ಇದ್ದರು.

'ಸದಾಶಿವ ಆಯೋಗವನ್ನು ಎಸ್. ಎಂ. ಕೃಷ್ಣ ಕಾಲದಲ್ಲಿ ಕಾಂಗ್ರೆಸ್ ರಚನೆ ಮಾಡಿತ್ತು. ವರದಿಯನ್ನು ನೇರ ವಾಗಿ ಸಂಪುಟದ ಮುಂದೆ ಮಂಡಿಸಲಾಗಿತ್ತು. ಅದನ್ನು ತಕ್ಷಣ ಜಾರಿಗೆ ತರಲು ಆಗಲಿಲ್ಲ' ಎಂದು ಸ್ವಾಮೀಜಿಗಳಿಗೆ ಶಿವಕುಮಾರ್ ಹೇಳಿದರು.


ಸ್ವಾಮೀಜಿಗಳು ಮಾತನಾಡಿ, 'ಮಾದಿಗ ಸಮುದಾಯದ ಹೆಚ್ಚಿನ ಜನ ಕೂಲಿ ಮಾಡಿಯೇ ಬದುಕುತ್ತಿದ್ದಾರೆ. ಮಕ್ಕಳು ಎಸ್ಸೆಸ್ಸೆಲ್ಸಿಯವರೆಗೂ ಓದುತ್ತಾರೆ. ಆದರೆ, ಮುಂದೆ ಓದಿಸಲು ಪೋಷಕರಿಗೆ ಸಾಧ್ಯವಾಗುತ್ತಿಲ್ಲ ಎಂದರು

ಸುದ್ದಿಗಾರರ ಜೊತೆ ಮಾತನಾಡಿದ ಶಿವಕುಮಾರ್, 'ಮಾದಿಗ ಸಮುದಾಯದ ಎಲ್ಲ ಮಠಾಧೀಶರ ಜೊತೆ ಚರ್ಚೆ ಮಾಡಿದ್ದೇನೆ. ಅವರು ಕೆಲವು ಬೇಡಿಕೆಗಳನ್ನು ಇಟ್ಟಿದ್ದಾರೆ. ಅವುಗಳನ್ನು ಪಕ್ಷದ ನಾಯಕರ ಮುಂದೆ ಪ್ರಸ್ತಾಪಿಸಿ ಚರ್ಚೆ ಮಾಡುತ್ತೇನೆ' ಎಂದರು.

‘ಮದುವೆಗೆ ಸಿದ್ಧತೆ ನಡೆಸಿದ್ದರು’

ಅಪಘಾತದಲ್ಲಿ ಪೊಲೀಸರ ಸಾವು • ಶಿವಾಜಿನಗರ ಠಾಣೆಯಲ್ಲಿ ನೀರವ ಮೌನ

ಪ್ರಜಾವಾಣಿ ವಾರ್ತೆ



ಆಂಧ್ರಪ್ರದೇಶದ ಚಿತ್ತೂರು ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾನುವಾರ ಬೆಳಿಗ್ಗೆ ಅಪಘಾತ ಸಂಭವಿಸಿ ಉರುಳಿಬಿದ್ದಿದ್ದ ಇನೋವಾ ಕಾರು

ಬೆಂಗಳೂರು: ‘ಆಂಧ್ರಪ್ರದೇಶದ ಚಿತ್ತೂರಿನಲ್ಲಿ ಸಂಭವಿಸಿದ ಅಪಘಾತದಲ್ಲಿ ಮೃತಪಟ್ಟಿರುವ ಪಿಎಸ್‌ಐ ಕೆ. ಅವಿನಾಶ್, 10 ದಿನಗಳ ಹಿಂದೆಯಷ್ಟೇ ಶಿವಾಜಿನಗರ ಠಾಣೆ ಕರ್ತವ್ಯಕ್ಕೆ ಹಾಜರಾಗಿದ್ದರು. ಡ್ರಗ್ಸ್ ಜಾಲ ಭೇದಿಸಲು ಹೋಗಿ ಜೀವ ಕಳೆದುಕೊಂಡಿದ್ದಾರೆ’ ಎಂದು ಅವಿನಾಶ್ ಅವರನ್ನು ನೆನೆದು ಸಹೋದ್ಯೋಗಿಗಳು ಕಣ್ಣೀರಿಟ್ಟರು.

ಪಿಎಸ್‌ಐ ಅವಿನಾಶ್ ಹಾಗೂ ಕಾನ್‌ಸ್ಟೆಬಲ್ ಅನಿಲ್ ಮುಳಿಕ್ ಸಾವಿನಿಂದಾಗಿ ಶಿವಾಜಿನಗರ ಠಾಣೆಯಲ್ಲಿ ಭಾನುವಾರ ನೀರವ ಮೌನ ಆವರಿಸಿತ್ತು. ಅಪಘಾತದ ಸುದ್ದಿ ತಿಳಿದು ಠಾಣೆಗೆ ಬಂದಿದ್ದ ಪಶ್ಚಿಮ ವಿಭಾಗದ ಡಿಸಿಪಿ ಭೀಮಾಶಂಕರ್, ಆಂಧ್ರಪ್ರದೇಶದ ಪೊಲೀಸ್ ಅಧಿಕಾರಿಗಳ ಜೊತೆ ಮಾತನಾಡಿ ಗಾಯಾಳುಗಳ ಚಿಕಿತ್ಸೆ ಬಗ್ಗೆ ಮಾಹಿತಿ ಪಡೆದುಕೊಂಡರು.

‘2017ನೇ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಬ್ಯಾಚ್‌ನ ಅವಿನಾಶ್, ಜ್ಞಾನಭಾರತಿ ಹಾಗೂ ಪೀಣ್ಯ ಸಂಚಾರ ಠಾಣೆಯಲ್ಲಿ ಕೆಲಸ ಮಾಡಿದ್ದರು. ಇತ್ತೀಚೆಗಷ್ಟೇ ಅವರನ್ನು ಶಿವಾಜಿನಗರ ಠಾಣೆಗೆ ವರ್ಗಾಯಿಸಲಾಗಿತ್ತು. 10 ದಿನಗಳ ಹಿಂದೆಯಷ್ಟೇ ಅವಿನಾಶ್, ಠಾಣೆಗೆ ಬಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದರು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಶಿವಾಜಿನಗರ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪಿಯೊಬ್ಬನನ್ನು ಶನಿವಾರ ಬೆಳಿಗ್ಗೆ ಬಂಧಿಸಲಾಗಿತ್ತು. ಆತನ ವಿಚಾರಣೆ ವೇಳೆ, ಆಂಧ್ರಪ್ರದೇಶದಿಂದ ಗಾಂಜಾ ಸಾಗಣೆಯಾಗುತ್ತಿದ್ದ ಮಾಹಿತಿ ಲಭ್ಯವಾಗಿತ್ತು. ಪ್ರಕರಣದ ತನಿಖೆ ಹೊಣೆ ಹೊತ್ತುಕೊಂಡಿದ್ದ ಅವಿನಾಶ್, ಸಿಬ್ಬಂದಿಗಳ ಜೊತೆ ಶನಿವಾರ ರಾತ್ರಿಯೇ ಆಂಧ್ರಪ್ರದೇಶಕ್ಕೆ ಹೊರಟಿದ್ದರು. ಮಾರ್ಗಮಧ್ಯೆಯೇ ಈ ಅವಘಡ ಸಂಭವಿಸಿದೆ’ ಎಂದರು.

‘ಅವಿನಾಶ್ ಅವರಿಗೆ ಮದುವೆ ಮಾಡಲೆಂದು ಕುಟುಂಬದವರು ಸಿದ್ಧತೆ ನಡೆಸಿದ್ದರು’ ಎಂದೂ ಅಧಿಕಾರಿ ಭಾವುಕರಾದರು.

ತರಬೇತಿ ಮುಗಿಸಿ 6 ತಿಂಗಳು: ‘ಕಾನ್‌ಸ್ಟೆಬಲ್ ಅನಿಲ್, ಕಳೆದ ವರ್ಷವಷ್ಟೇ ಕೆಲಸಕ್ಕೆ ಸೇರಿದ್ದರು. ತರಬೇತಿ ಮುಗಿಸಿ, ಆರು ತಿಂಗಳ ಹಿಂದೆಯಷ್ಟೇ ಶಿವಾಜಿನಗರ ಠಾಣೆಗೆ ನಿಯೋಜನೆಗೊಂಡು ವೃತ್ತಿ ಆರಂಭಿಸಿದ್ದರು. ಅವಿವಾಹಿತರಾಗಿದ್ದ ಅನಿಲ್ ಸಹ ಮದುವೆಗೆ ತಯಾರಿ ನಡೆಸುತ್ತಿದ್ದರು’ ಎಂದು ಪೊಲೀಸ್ ಅಧಿಕಾರಿ ಹೇಳಿದರು.

‘ಅವಿನಾಶ್ ಹಾಗೂ ಕಾನ್‌ಸ್ಟೆಬಲ್ ಅನಿಲ್, ಇಬ್ಬರೂ ಬಡತನದಲ್ಲಿ ಬೆಳೆದವರು. ಚಾಲಕ ಮ್ಯಾಕ್ಸ್‌ವೆಲ್ ಸಹ ಪೊಲೀಸರ ಕೆಲಸಕ್ಕೆ ನೆರವಾಗಲು ಹೋಗಿ ಪ್ರಾಣ ಬಿಟ್ಟಿದ್ದಾರೆ. ಇವರನ್ನು ಕಳೆದುಕೊಂಡು ಕುಟುಂಬಗಳು ಕಂಗಾಲಾಗಿವೆ. ಅವರಿಗೆ ಪರಿಹಾರ ನೀಡುವಂತೆ ಸರ್ಕಾರವನ್ನು ಒತ್ತಾಯಿಸಲಾಗುವುದು’ ಎಂದೂ ತಿಳಿಸಿದರು.

‘ಅತ್ಯುತ್ತಮ ಚಿಕಿತ್ಸೆಗೆ ಕ್ರಮ’

‘ಅಪಘಾತದಲ್ಲಿ ಪೊಲೀಸರು ಹಾಗೂ ಚಾಲಕ ಮೃತಪಟ್ಟಿರುವುದು ನೋವು ತಂದಿದೆ. ಮೃತರ ಅಂತ್ಯಕ್ರಿಯೆಯನ್ನು ಸರ್ಕಾರಿ ಗೌರವದೊಂದಿಗೆ ನೆರವೇರಿಸಲು ವ್ಯವಸ್ಥೆ ಮಾಡಲಾಗಿದೆ. ಗಾಯಾಳುಗಳಿಗೆ ಅತ್ಯುತ್ತಮ ಚಿಕಿತ್ಸೆ ದೊರಕಿಸಲು ಕ್ರಮ ಕೈಗೊಳ್ಳಲಾಗಿದೆ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಳವು: ಯುವತಿ ಬಂಧನ

ಬೆಂಗಳೂರು: ದೊಡ್ಡಮ್ಮನ ಮನೆಯಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ದೀಕ್ಷಿತಾ ಹಾಗೂ ಅವರ ಸ್ನೇಹಿತ ಮಧು ಅವರನ್ನು ಪೀಣ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಆರೋಪಿ ದೀಕ್ಷಿತಾ ಹಾಗೂ ಮಧು, ಹಲವು ವರ್ಷಗಳಿಂದ ಸ್ನೇಹಿತರು. ಇಬ್ಬರು ಪರಸ್ಪರ ಪ್ರೀತಿಸುತ್ತಿದ್ದರೆಂದು ಗೊತ್ತಾಗಿದೆ. ಅವರಿಬ್ಬರು ಸಂಚು ರೂಪಿಸಿ ಕಳ್ಳತನ ಮಾಡಿದ್ದರು. ಇಬ್ಬರನ್ನೂ ಬಂಧಿಸಿ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಖರ್ಚಿಗೆ ಹಣ ಬೇಕೆಂದು ಮಧು ಪದೇ ಪದೇ ಕೇಳುತ್ತಿದ್ದರು. ತಮ್ಮ ದೊಡ್ಡಮ್ಮನ ಮನೆಯಲ್ಲೇ ಕಳ್ಳತನ ಮಾಡೋಣವೆಂದು ಯುವತಿ ಹೇಳಿದ್ದರು.’

‘ಪಿಪಿಇ ಕಿಟ್ ಧರಿಸಿದ್ದ ಆರೋಪಿಗಳು, ಮನೆ ಬಳಿ ಮಾಮಾಚಾರದ ವಸ್ತುಗಳನ್ನು ಎಸೆದಿದ್ದರು. ಇದರಿಂದ ಹೆದರಿದ್ದ ದೊಡ್ಡಮ್ಮ, ಮನೆಯಿಂದ ಹೊರಗೆ ಓಡಿ ಬಂದು ಸಂಬಂಧಿಕರ ಮನೆಗೆ ಹೋಗಿದ್ದರು. ಇದೇ ವೇಳೆಯೇ ಮನೆಯೊಳಗೆ ನುಗ್ಗಿದ್ದ ಆರೋಪಿಗಳು ಕಳ್ಳತನ ಮಾಡಿ ಪರಾರಿಯಾಗಿದ್ದರು’ ಎಂದರು.

ಪ್ರೊ.ನಾ. ದಯಾನಂದ ಅವರ ‘ವಿಶ್ವಾಸ’ ಕೃತಿ ಬಿಡುಗಡೆ

‘ಮೇರು ವ್ಯಕ್ತಿತ್ವಗಳ ಪರಿಚಯಿಸಿ’

ಪ್ರಜಾವಾಣಿ ವಾರ್ತೆ


ಬೆಂಗಳೂರು: ‘ವಯಸ್ಸು ಮುಖ್ಯವಲ್ಲ. ಜೀವನದ ಅವಧಿಯಲ್ಲಿ ನಾವು ಹೇಗೆ ಬಾಳಬೇಕು, ಯಾವ ರೀತಿ ಜನರ ವಿಶ್ವಾಸಕ್ಕೆ ಪಾತ್ರವಾಗಬೇಕು ಎಂಬುದು ಮುಖ್ಯ’ ಎಂದು ಸಾಹಿತಿ ಹಂ.ಪ. ನಾಗರಾಜಯ್ಯ ತಿಳಿಸಿದರು.

ನಗರದಲ್ಲಿ ಭಾನುವಾರ ಶೃಂಗಾರ ಪ್ರಕಾಶನ ಆಯೋಜಿಸಿದ್ದ ಪ್ರೊ.ನಾ. ದಯಾನಂದ ಅವರು ಎಂ.ಜೆ. ಇಂದ್ರಕುಮಾರ್ ಕುರಿತು ಬರೆದಿರುವ ‘ವಿಶ್ವಾಸ’ (ನಂಬಿಕೆಯ ಜೀವಂತ ರೂಪಕ: ನ್ಯಾಯಾಧೀಶ ಇಂದ್ರಕುಮಾರ್ ಬದುಕು) ಜೀವನ ಚರಿತ್ರೆ ಪುಸ್ತಕ ಬಿಡುಗಡೆಯಲ್ಲಿ ಅವರು ಮಾತನಾಡಿದರು.

‘ಮೇರು ವ್ಯಕ್ತಿತ್ವವುಳ್ಳವರ ಕುರಿತು ಪುಸ್ತಕ ಪ್ರಕಟಿಸಿ ಸಮಾಜಕ್ಕೆ ಪರಿಚಯಿಸುವುದು ಶ್ಲಾಘನೀಯ ಕಾರ್ಯ. ಇಂದ್ರಕುಮಾರ್ ಅವರ ಇಡೀ ಜೀವನ ಮತ್ತು ವ್ಯಕ್ತಿತ್ವವನ್ನು ‘ವಿಶ್ವಾಸ’ ಎನ್ನುವ ಮೂರೇ ಶಬ್ದಗಳಲ್ಲಿ ಲೇಖಕ ಪ್ರೊ. ನಾ. ದಯಾನಂದ ವಿವರಿಸಿದ್ದಾರೆ. ಈ ಪುಸ್ತಕ ರೂಪ, ಸ್ವರೂಪ, ಮಹತ್ವ, ಅನನ್ಯತೆಯಿಂದ ಕೂಡಿದೆ. ಅವರ ಬದುಕು ಎಲ್ಲರಿಗೂ ಮಾದರಿ’ ಎಂದು ತಿಳಿಸಿದರು.

ಪತ್ರಕರ್ತ ಪದ್ಮರಾಜ ದಂಡಾವತಿ ಮಾತನಾಡಿ, ‘ಜೀವನ ಚರಿತ್ರೆಯಲ್ಲಿ ಎಲ್ಲವನ್ನು ಹಿಡಿದಿಡಲು ಸಾಧ್ಯವಿಲ್ಲ. ಆದರೆ, ಆತ್ಮಚರಿತ್ರೆ ಬರೆಯುವುದು ಸುಲಭವೂ ಅಲ್ಲ, ಅನೇಕ ಸಂಗತಿಗಳನ್ನು ಬರೆಯುವಂತೆ ಇರುವುದಿಲ್ಲ. ತಮ್ಮ ದೌರ್ಬಲ್ಯಗಳನ್ನು ಹೇಳಿಕೊಳ್ಳಲು ಯಾರೂ ಇಷ್ಟಪಡುವುದಿಲ್ಲ. ಆದ್ದರಿಂದ, ಯಾರು ಆತ್ಮಚರಿತ್ರೆ ಬರೆಯುವ ಗೊಡವೆಗೆ ಹೋಗುವುದಿಲ್ಲ. ಈ ಮಿತಿಗಳು ಚರಿತ್ರೆಕಾರನಿಗೂ ಇರುತ್ತವೆ’ ಎಂದರು.

ಕರ್ನಾಟಕ ಜೈನ್ ಅಸೋಸಿಯೇಷನ್ ಮಾಜಿ ಅಧ್ಯಕ್ಷ ಜೀತೇಂದ್ರಕುಮಾರ್, ಲೇಖಕ ಪ್ರೊ.ನಾ. ದಯಾನಂದ, ಶೃಂಗಾರ ಪ್ರಕಾಶನದ ಡಾ. ಎಂ.ವಿ. ನಾಗರಾಜ ರಾವ್ ಇದ್ದರು.



‘ವಿಶ್ವಾಸ’ ಪುಸ್ತಕವನ್ನು ಜೀತೇಂದ್ರಕುಮಾರ್ (ಎಡದಿಂದ ಎರಡನೆಯವರು) ಬಿಡುಗಡೆಗೊಳಿಸಿದರು. ಪ್ರೊ.ನಾ. ದಯಾನಂದ, ಸಾಹಿತಿ ಹಂ.ಪ. ನಾಗರಾಜಯ್ಯ, ಪತ್ರಕರ್ತ ಪದ್ಮರಾಜ ದಂಡಾವತಿ, ಎಂ.ವಿ. ನಾಗರಾಜ ರಾವ್ ಇದ್ದಾರೆ.

ಪುಸ್ತಕ ಪರಿಚಯ

- **ಪುಸ್ತಕ:** ವಿಶ್ವಾಸ (ನಂಬಿಕೆಯ ಜೀವಂತ ರೂಪಕ: ನ್ಯಾಯಾಧೀಶ ಇಂದ್ರಕುಮಾರ್ ಬದುಕು)
- **ಲೇಖಕರು:** ಪ್ರೊ.ನಾ. ದಯಾನಂದ
- **ಪ್ರಕಾಶನ:** ಶೃಂಗಾರ ಪ್ರಕಾಶನ, ಚಿಕ್ಕನಾಯಕನಹಳ್ಳಿ
- **ಬೆಲೆ:** ₹275

‘ಹೈದರಾಬಾದ್‌ಗೆ ಬನ್ನಿ’ ಎಂದು ಟ್ವೀಟ್ ಮಾಡಿದ್ದ ತೆಲಂಗಾಣ ಸಚಿವ

‘ಅವಮಾನಿಸುವ ಉದ್ದೇಶವಿರಲಿಲ್ಲ’

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಹೈದರಾಬಾದ್‌ನಲ್ಲಿ ಹೂಡಿಕೆ ಮಾಡಿ ಎಂದು ಬೆಂಗಳೂರಿಗರನ್ನು ಉದ್ದೇಶಿಸಿ ತೆಲಂಗಾಣದ ಐಟಿ ಮತ್ತು ಕೈಗಾರಿಕಾ ಸಚಿವ ಕೆ.ಟಿ. ರಾಮ ರಾವ್ ಅವರು ಮಾರ್ಚ್‌ನಲ್ಲಿ ಮಾಡಿದ್ದ ಟ್ವೀಟ್, ವಿವಾದಕ್ಕೆ ಕಾರಣವಾಗಿತ್ತು. ನೆರೆಯ ರಾಜ್ಯದ ವಿಷಯಗಳಲ್ಲಿ ಸಚಿವರು ಮೂಗು ತೂರಿಸುತ್ತಿದ್ದಾರೆ ಎಂದು ಕರ್ನಾಟಕದ ಜನರು ಪ್ರತಿಕ್ರಿಯಿಸಿದ್ದರು.

‘ಪ್ರಜಾವಾಣಿ’ಯೊಂದಿಗೆ ಮಾತನಾಡಿರುವ ಕೆ.ಟಿ. ರಾಮ ರಾವ್, ಈ ಎಲ್ಲಾ ವಿವಾದಗಳ ಬಗ್ಗೆ ಪ್ರತಿಕ್ರಿಯೆ ನೀಡಿದ್ದಾರೆ. ‘ಈ ಟ್ವೀಟ್ ಮೂಲಕ ನಾನು ನನ್ನ ಸರ್ಕಾರದ ಸಾಧನೆಗಳನ್ನು ಹೇಳಲು ಹೊರಟಿದ್ದೆ ಅಷ್ಟೇ. ಹೂಡಿಕೆಗೆ ಬೇಕಾಗಿರುವ ಉತ್ತಮ ಮೂಲಸೌಕರ್ಯ, 24 ಗಂಟೆಗಳ ವಿದ್ಯುತ್ ಪೂರೈಕೆ ಹೈದರಾಬಾದ್‌ನಲ್ಲಿದೆ. ಆದ್ದರಿಂದ ಹೂಡಿಕೆಗೆ ಹೈದರಾಬಾದ್ ಯೋಗ್ಯವಾಗಿದೆ ಎಂದು ಹೇಳಿದ್ದೆ. ಬೇರೆ ನಗರವನ್ನು ಹೀಗಳೆಯುವ ಅಥವಾ ಅವಮಾನಿಸುವ ಉದ್ದೇಶ ಇರಲಿಲ್ಲ’ ಎಂದು ಅವರು ಹೇಳಿದರು.



ನಾನು ಬೆಂಗಳೂರನ್ನು ಇಷ್ಟಪಡುತ್ತೇನೆ. 1990ರಿಂದ ಅಲ್ಲಿಗೆ ಹೋಗುತ್ತಿದ್ದೇನೆ. ಆದರೆ, ಸಹಜವಾಗಿ ನಾನು ಹೈದರಾಬಾದ್ ಅನ್ನೇ ಹೆಚ್ಚು ಪ್ರೀತಿಸುತ್ತೇನೆ

ಕೆ.ಟಿ. ರಾಮ ರಾವ್,
ತೆಲಂಗಾಣದ ಐಟಿ ಮತ್ತು ಕೈಗಾರಿಕಾ ಸಚಿವ

‘ನಾನು ಈ ಟ್ವೀಟ್ ಮಾಡಿದ ನಂತರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬೆಂಗಳೂರಿಗೆ ಕೆಲವು ರಸ್ತೆ ಅಭಿವೃದ್ಧಿ ಯೋಜನೆಗಳನ್ನು ಘೋಷಣೆ ಮಾಡಿದರು ಎಂದು ಕೆಲವರು ನನಗೆ ತಿಳಿಸಿದರು. ಇದಕ್ಕಾಗಿ ನನಗೆ ಬೆಂಗಳೂರಿನ ಹಲವು ಜನರು ಧನ್ಯವಾದವನ್ನೂ ತಿಳಿಸಿದರು’ ಎಂದರು.

ಖಾತಾಬುಕ್ ಸ್ಥಾಪಕ ರವೀಶ್ ನರೇಶ್ ಅವರು ಟ್ವೀಟ್ ಮೂಲಕ ಬೆಂಗಳೂರಿನಲ್ಲಿನ ಕೆಟ್ಟ ರಸ್ತೆಗಳು, ವಿದ್ಯುತ್ ಕಡಿತ, ಕಳಪೆ ಗುಣಮಟ್ಟದ ನೀರು ಪೂರೈಕೆ, ಪಾದಾಚಾರಿ ಮಾರ್ಗ ಇಲ್ಲದಿರುವುದರ ಕುರಿತು ಮಾರ್ಚ್‌ನಲ್ಲಿ ದೂರಿದ್ದರು. ಇದಕ್ಕೆ ಪ್ರತಿಕ್ರಿಯಿಸಿ ಕೆ.ಟಿ. ರಾಮ್ ರಾವ್, ‘ಹೈದರಾಬಾದ್‌ಗೆ ಬನ್ನಿ’ ಎಂದಿದ್ದರು.

ಕೆ.ಟಿ. ರಾಮ್ ರಾವ್ ಅವರು ಆಂಧ್ರಪ್ರದೇಶಕ್ಕೆ ಸಂಬಂಧಿಸಿದಂತೆಯೂ ಏಪ್ರಿಲ್‌ನಲ್ಲಿ ಇದೇ ರೀತಿಯ ವಿವಾದ ಮಾಡಿಕೊಂಡಿದ್ದರು.

‘ಬೆಂಗಳೂರು ವರ್ಸಸ್ ಹೈದರಾಬಾದ್’

ನೀತಿ ಆಯೋಗದ ‘ನಾವೀನ್ಯ ಸೂಚ್ಯಂಕ ವರದಿ 2021’ಯು ಬಿಡುಗಡೆ ಆಗಿದೆ. ಇದರಲ್ಲಿ ಕರ್ನಾಟಕವು ಮೊದಲ ಸ್ಥಾನ ಪಡೆದುಕೊಂಡರೆ, ತೆಲಂಗಾಣವು ಎರಡನೇ ಸ್ಥಾನ ಪಡೆದುಕೊಂಡಿದೆ. ಈ ವರದಿ ಬಂದ ಬಳಿಕ ‘ಬೆಂಗಳೂರು ವರ್ಸಸ್ ಹೈದರಾಬಾದ್’ ಎಂದು ಟ್ವೀಟ್ ಮಾಡಿರುವ ಕರ್ನಾಟಕ ಬಿಜೆಪಿ ಮತ್ತೊಮ್ಮೆ ಕಿಡಿ ಹಚ್ಚಿದೆ.

‘ಡಿಯರ್ ಕೆಟಿಆರ್, ಹೇಗಿದ್ದೀರಿ? ಜಗತ್ತು ಬೆಂಗಳೂರಿನಲ್ಲಿ ಹೂಡಿಕೆ ಮಾಡಲು ಬಯಸುತ್ತಿದೆ! ಅಂದಹಾಗೆ ನಿಮ್ಮ ಓಲೈಕೆ ರಾಜಕಾರಣ ಹೇಗೆ ನಡೆಯುತ್ತಿದೆ. ನಮಸ್ಕಾರ’ ಎಂದು ಕರ್ನಾಟಕ ಬಿಜೆಪಿ ಟ್ವೀಟ್ ಮಾಡಿದೆ.

ಚಂದ್ರಶೇಖರ ಕಂಬಾರರ ‘ಮಾತೋಶ್ರೀ ಮಾದಕ- ಪ್ರಹಸನ’ ಬಿಡುಗಡೆ

‘ವಾಸ್ತವಗಳ ಭಿನ್ನ ಪರಿಚಯದ ಬರವಣಿಗೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಂದ್ರಶೇಖರ ಕಂಬಾರರ ನಾಟಕಗಳಲ್ಲಿ ಬಂಡವಾಳಶಾಹಿ ಹಾಗೂ ಸಮಾಜವಾದಿಗಳ ಅತಿರೇಕವನ್ನು ಟೀಕೆ ಮಾಡಲಾಗಿತ್ತು. ಆ ಕಾಲದಲ್ಲೇ ಕಂಬಾರರು ಏಕೆ ಅಷ್ಟೊಂದು ಟೀಕೆ ಮಾಡುತ್ತಿದ್ದರು ಎಂದು ಈಗ ಅರ್ಥವಾಗುತ್ತಿದೆ’ ಎಂದು ಸಾಹಿತಿ ಎಚ್.ಎಸ್. ಶಿವಪ್ರಕಾಶ್ ಅಭಿಪ್ರಾಯಪಟ್ಟರು.

ಅಂಕಿತ ಪುಸ್ತಕ ಮತ್ತು ಬುಕ್ ಬ್ರಹ್ಮದ ಜಂಟಿ ಆಶ್ರಯದಲ್ಲಿ ಚಂದ್ರಶೇಖರ ಕಂಬಾರರ ‘ಮಾತೋಶ್ರೀ ಮಾದಕ- ಪ್ರಹಸನ’, ಬಿ. ಜಯಶ್ರೀ ಮತ್ತು ಪ್ರತಿಭಾ ನಂದಕುಮಾರ್ ಅವರ ‘ಕರಿಮಾಯಿ’ ನಾಟಕ ಕೃತಿ ಹಾಗೂ ‘ಕಂಬಾರರ ಕಾವ್ಯ ಮತ್ತು ನಾಟಕ’ ಪುಸ್ತಕಗಳನ್ನು ಭಾನುವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

‘ಕಂಬಾರರ ನಾಟಕಗಳಲ್ಲಿ ವಿಡಂಬನೆ ಮೂಲಕ ನವೋದಯ, ನವ್ಯ ಸಾಹಿತ್ಯಗಳಿಗಿಂತ ಭಿನ್ನವಾಗಿ ವಾಸ್ತವಗಳ ಪರಿಚಯವಾಗುತ್ತದೆ. ಜನಪದ ಸಾಹಿತ್ಯವನ್ನು ಅಳವಡಿಸಿಕೊಂಡ ಚಿಕಿತ್ಸಾತ್ಮಕ ಬರವಣಿಗೆ ಕಂಬಾರರದ್ದು’ ಎಂದರು.



ಚಂದ್ರಶೇಖರ ಕಂಬಾರರ ‘ಮಾತೋಶ್ರೀ ಮಾದಕ ಪ್ರಹಸನ’, ಬಿ. ಜಯಶ್ರೀ ಮತ್ತು ಪ್ರತಿಭಾ ನಂದಕುಮಾರ್ ಅವರ ‘ಕರಿಮಾಯಿ’ ನಾಟಕ ಕೃತಿ ಹಾಗೂ ‘ಕಂಬಾರರ ಕಾವ್ಯ ಮತ್ತು ನಾಟಕ’ ಪುಸ್ತಕಗಳನ್ನು ಸಾಹಿತಿ ಎಚ್.ಎಸ್. ಶಿವಪ್ರಕಾಶ್ ಭಾನುವಾರ ಬಿಡುಗಡೆ ಮಾಡಿದರು. ರಂಗ ವಿಮರ್ಶಕ ನಾರಾಯಣ ರಾಯಚೂರ್, ವಿಮರ್ಶಕ ಎಚ್.ಆರ್. ವಿಜಯಶಂಕರ್, ರಂಗಕರ್ಮಿ ಬಿ. ಜಯಶ್ರೀ, ಕವಯತ್ರಿ ಪ್ರತಿಭಾ ನಂದಕುಮಾರ್ ಇದ್ದರು

ವಿಮರ್ಶಕ ಎಚ್.ಆರ್. ವಿಜಯಶಂಕರ್ ಅವರು ಮೂರು ಕೃತಿಗಳ ಪರಿಚಯ ಮಾಡಿಕೊಟ್ಟರು. ‘ಕುರ್ತಕೋಟಿಯವರ ಪ್ರಕಾರ, ಬೆಳಗಾವಿಯಲ್ಲಿ ಪ್ರಾಧ್ಯಾಪಕರಾಗಿದ್ದ ಕಂಬಾರರು ಅಲ್ಲಿ ಪ್ರಥಮ ಬಾರಿಗೆ ‘ಹೇಳತೇನ ಕೇಳ’ ಕವನ ಹಾಡಿದ್ದರು. ಅದರ ಗುಂಗಿನಿಂದ ನಾನಿನ್ನೂ ಹೊರಬಂದಿಲ್ಲ. 40 ವರ್ಷಗಳ ಬಳಿಕ ಕುರ್ತಕೋಟಿಯವರು ಈ ಮಾತನ್ನು ಹೇಳಿದ್ದಾರೆ ಎಂದರೆ ಅವರ ಸೃಜನಶೀಲ ಪ್ರತಿಭೆಗೆ ಒಂದು ಗೌರವ’ ಎಂದರು.

ಯಶಸ್ಸು ನಿರೀಕ್ಷಿಸಿರಲಿಲ್ಲ: ‘ಕರಿಮಾಯಿ’ ಕಾದಂಬರಿ ನಾಟಕವಾಗಿ ಯಶ ಕಾಣುತ್ತದೆ ಎಂಬ ನಿರೀಕ್ಷೆ ಇರಲಿಲ್ಲ. ಬಿ. ಜಯಶ್ರೀ ಅವರು ಅದನ್ನು ಸಾಧ್ಯವಾಗಿಸಿದರು. ನಾಟಕದ ಆರಂಭದಲ್ಲಿ ‘ತಾಯೇ..’ ಎಂಬ ಹಾಡಿನ ಸೆಳೆತ ನಾಟಕ ಮುಗಿಯುವವರೆಗೂ ಉಳಿಸಿಕೊಂಡಿದೆ ಎಂದು ಸಾಹಿತಿ ಚಂದ್ರಶೇಖರ ಕಂಬಾರ ಅವರು ಶ್ಲಾಘಿಸಿದರು.

ಎಂಟು ದಿನಗಳಲ್ಲಿ ನಾಟಕ: ‘ಕರಿಮಾಯಿ’ ಕಾದಂಬರಿಯನ್ನು ಎಂಟು ದಿನಗಳಲ್ಲಿ ನಾಟಕ ರೂಪಕ್ಕೆ ತರಲಾಯಿತು. ಕೊನೆಯ ಹಾಡನ್ನು ಬರೆದುಕೊಡಲು ಕಂಬಾರರು ತುಂಬಾ ಸತಾಯಿಸಿದ್ದರು. ಅವರನ್ನು ಹಿಡಿಯುವುದೇ ಕಷ್ಟಕರವಾಗಿತ್ತು. ನಾಟಕವನ್ನು ನೋಡಿದ ಮೇಲೆ ಕಂಬಾರರು ಶ್ಲಾಘಿಸಿದರು ಎಂದು ರಂಗಕರ್ಮಿ ಬಿ. ಜಯಶ್ರೀ ಸ್ಮರಿಸಿಕೊಂಡರು. ‘ತಾಯೇ..’ ಹಾಡನ್ನೂ ಹಾಡಿದರು.

ರಂಗ ವಿಮರ್ಶಕ ನಾರಾಯಣ ರಾಯಚೂರ್ ಮಾತನಾಡಿ, ‘ಕಾದಂಬರಿ ನಾಟಕವಾಗಬಹುದು. ಅದನ್ನು ರಂಗದ ಮೇಲೆ ತಂದು ಯಶಸ್ಸು ಸಾಧಿಸಿದ್ದು ಇತಿಹಾಸವೇ ಸರಿ. ಬಿ. ಜಯಶ್ರೀ ಅವರು ಪ್ರತಿಭಾವಂತ ಕಲಾವಿದರನ್ನು ಈ ನಾಟಕದ ಮೂಲಕ ಹೊರ ತಂದರು’ ಎಂದರು.

ಸಮಾರಂಭವು ಬುಕ್ ಬ್ರಹ್ಮ ಫೇಸ್ ಬುಕ್ ಹಾಗೂ ಯೂಟ್ಯೂಬ್ ಚಾನೆಲ್‌ನಲ್ಲಿ ನೇರಪ್ರಸಾರಗೊಂಡಿತು.

ಬಂಡಾಯ ಸಾಹಿತ್ಯ ಸಮ್ಮೇಳನದ ಸಮಾರೋಪದಲ್ಲಿ ನಾಗಮೋಹನ ದಾಸ್

‘ಅವರ ಅಜೆಂಡಾ ಬದಲು ನಮ್ಮ ಅಜೆಂಡಾ ಸಿದ್ಧಪಡಿಸಬೇಕು’

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಅವರು ಅಜೆಂಡಾದೊಂದಿಗೆ ಬರುತ್ತಾರೆ. ನಾವು ಅದರ ಹಿಂದೆ ಗಿರಕಿ ಹೊಡೆಯುತ್ತೇವೆ. ಇಲ್ಲಿಯವರೆಗೆ ನಡೆದಿರುವುದನ್ನು ಬಿಟ್ಟು ಸಂವಿಧಾನದ ತತ್ವಗಳನ್ನು ಆಧರಿಸಿದ ಅಜೆಂಡಾವನ್ನು ನಾವೇ ಸಿದ್ಧಪಡಿಸಬೇಕಿದೆ’ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಅವರು ಅಭಿಪ್ರಾಯಪಟ್ಟರು.

ನಗರದಲ್ಲಿ ಭಾನುವಾರ ನಡೆದ ರಾಜ್ಯಮಟ್ಟದ ಬಂಡಾಯ ಸಾಹಿತ್ಯ ಸಮ್ಮೇಳನದ ಸಮಾರೋಪದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪರೋಕ್ಷವಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ವಿರುದ್ಧ ಹರಿಹಾಯ್ದರು.

‘ಭಗವದ್ಗೀತೆಯನ್ನು ರಾಷ್ಟ್ರೀಯ ಗ್ರಂಥ ಎಂದರು. ಘರ್ ವಾಪ್ಸಿ, ಹಿಜಾಬ್, ಹಲಾಲ್, ಆಜಾನ್ ಹೀಗೆ ಒಂದೊಂದೇ ಅಜೆಂಡಾ ಮುಂದಿಡುತ್ತಲೇ ಬಂದರು. ನಾವು ಅದರ ಬಗ್ಗೆ ಚರ್ಚೆ ಮಾಡುತ್ತೇವೆ. ಅವರು ಅದನ್ನು ಕೈಬಿಟ್ಟು ಮತ್ತೊಂದು ವಿಚಾರ ಹರಿಯಬಿಡುತ್ತಾರೆ. ಅದಕ್ಕೆ ಪ್ರತಿಕ್ರಿಯಿಸುವ ಬದಲು, ನಾವೇ ನೀಡುವ ಅಜೆಂಡಾ ಕುರಿತು ಅವರು ಚರ್ಚೆ ಮಾಡುವಂತಾಗಬೇಕು’ ಎಂದು ಅವರು ಹೇಳಿದರು.

ಈಗ ಅಘೋಷಿತ ತುರ್ತು ಪರಿಸ್ಥಿತಿ ಇದೆ. ಹಿಂದೆ ಆರ್ಥಿಕ ಮುಗ್ಗಟ್ಟು ಮತ್ತು ಚೇತರಿಕೆಗಳಿದ್ದವು. ಈಗ ಆರ್ಥಿಕ ಹಾಗೂ ಸಾಮಾಜಿಕ ಭಯೋತ್ಪಾದನೆ ಇದೆ. ಸಂವಿಧಾನದ ಆಶಯ ಎತ್ತಿ ಹಿಡಿಯುವ ಎಲ್ಲ ಸಂಘಟನೆಗಳು ತಮ್ಮ ಗುರುತು ಉಳಿಸಿಕೊಂಡು ಒಂದೇ ವೇದಿಕೆ ಅಡಿ ಬಂದು ಹೋರಾಟ ರೂಪಿಸದೇ ಇದ್ದರೆ ಇಂಥ ಸ್ಥಿತಿ ಎದುರಿಸಲು ಸಾಧ್ಯವಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು.



ದಾವಣಗೆರೆಯಲ್ಲಿ ಭಾನುವಾರ ನಡೆದ ರಾಜ್ಯ ಮಟ್ಟದ ಬಂಡಾಯ ಸಾಹಿತ್ಯ ಸಮ್ಮೇಳನದ ಸಮಾರೋಪದಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಮಾತನಾಡಿದರು. ಆರ್.ಜಿ.ಹಳ್ಳಿ ನಾಗರಾಜ್, ಭಕ್ತರಹಳ್ಳಿ ಕಾಮರಾಜ್, ಎ.ಬಿ. ರಾಮಚಂದ್ರಪ್ಪ, ರಾಜ್ಯಸಭೆ ಸದಸ್ಯ ಎಲ್. ಹನುಮಂತಯ್ಯ ಇದ್ದಾರೆ – ಪ್ರಜಾವಾಣಿ ಚಿತ್ರ

‘ಸಮಾಜ ಸೇವಕರನ್ನು, ದಲಿತರು, ಆದಿವಾಸಿಗಳ ಪರ ಕೆಲಸ ಮಾಡುವವರನ್ನು, ದೇಶದ ಹಿತಕ್ಕಾಗಿ ದುಡಿಯುವವರನ್ನು ದೇಶದ್ರೋಹಿಗಳೆಂದು ಜೈಲಿಗೆ ಅಟ್ಟಲಾಗುತ್ತಿದೆ. ಸತ್ಯನಿಷ್ಠ ಬರಹಗಾರರು ಬರೆಯಲು ಎರಡೆರಡು ಬಾರಿ ಯೋಚಿಸಬೇಕಾದ ಪರಿಸ್ಥಿತಿ ಉಂಟಾಗಿದೆ. ಲೇಖನಿ ಖಡ್ಗವಾಗುವುದು ಒತ್ತಟ್ಟಿಗಿರಲಿ, ಕನಿಷ್ಠಪಕ್ಷ ಕಡ್ಡಿಯಂತೆ ಆಡಿಸಿದರೂ ಜೈಲಿಗೆ ಹೋಗಬೇಕಾದ ಸ್ಥಿತಿ ಇದೆ ಎಂದು ಸಮಾರೋಪ ಭಾಷಣ ಮಾಡಿದ ರಾಜ್ಯಸಭೆ ಸದಸ್ಯ, ಸಾಹಿತಿ ಎಲ್.ಹನುಮಂತಯ್ಯ ಹೇಳಿದರು.

ಧರ್ಮ ನಿರಪೇಕ್ಷದ ಜಾಗವನ್ನು ಧರ್ಮಾಂಧತೆ ತುಂಬಿಕೊಂಡಿದೆ. ಸ್ವಾತಂತ್ರ್ಯದ ಹೋರಾಟದಲ್ಲಿ ತಪ್ಪೊಪ್ಪಿಗೆ ನೀಡಿದವರ ಸಂತತಿ ಈಗ ದೇಶಪ್ರೇಮದ ಪಾಠ ಹೇಳುತ್ತಿದೆ. ಗಾಂಧಿ ಕೊಂದವರು ದೇಶಪ್ರೇಮಿಗಳಾಗಿದ್ದಾರೆ. ನೈಜ ದೇಶಪ್ರೇಮಿಗಳನ್ನು ದೇಶದ್ರೋಹಿಗಳು ಎಂದು ಕರೆಯಲಾಗುತ್ತಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

‘ಮನುಸ್ಮೃತಿ ಜಾರಿಗೆ ಹುನ್ನಾರ’

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ದೇಶದ ಸಂವಿಧಾನದ ಜಾಗದಲ್ಲಿ ಮನುಸ್ಮೃತಿಯನ್ನು ಪ್ರತಿಷ್ಠಾಪಿಸುವ ಹುನ್ನಾರ ಹೊಂದಿದೆ ಎಂದು ಕಾರ್ಮಿಕ ಮುಖಂಡ ಸಿದ್ದನಗೌಡ ಪಾಟೀಲ ಅವರು ಹೇಳಿದರು.

‘ಕರ್ನಾಟಕದ ಜನ ಚಳವಳಿಗಳು ಹಿನ್ನೋಟ–ಮುನ್ನೋಟ’ ಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಆರ್‌ಎಸ್‌ಎಸ್ ಸ್ಥಾಪನೆಯಾಗಿ 2025ಕ್ಕೆ ನೂರು ವರ್ಷ ಆಗಲಿರುವುದರಿಂದ, 2024ರ ಚುನಾವಣೆಯಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ ಮನುಸ್ಮೃತಿಯನ್ನು ಜಾರಿಗೊಳಿಸುವ ದುರುದ್ದೇಶ ಹೊಂದಿದೆ. ಮುಂಬರುವ ಚುನಾವಣೆಯೊಳಗೆ ಬಿಜೆಪಿಯೇತರ ಪಕ್ಷಗಳು, ಸಂಘಟನೆಗಳು, ಸಂಸ್ಕೃತಿ ಚಿಂತಕರು ಪರ್ಯಾಯವನ್ನು ಕಂಡುಕೊಳ್ಳದಿದ್ದರೆ ಸಂವಿಧಾನಾತ್ಮಕ ಆಡಳಿತ ಇರುವುದಿಲ್ಲ’ ಎಂದು ಎಚ್ಚರಿಸಿದರು.

‘ನಟನ’ದಿಂದ ಡಿಪ್ಲೊಮಾ ಕೋರ್ಸ್

ಮೈಸೂರು: ಮಂಡ್ಯ ರಮೇಶ್ ನೇತೃತ್ವದ, ಇಲ್ಲಿನ ರಾಮಕೃಷ್ಣ ನಗರದಲ್ಲಿರುವ ‘ನಟನ ರಂಗಶಾಲೆ’ಯು ಮೈಸೂರು ವಿಶ್ವವಿದ್ಯಾಲಯದ ಮಾನ್ಯತೆಯಲ್ಲಿ ನಡೆಸುತ್ತಿರುವ 2022–23ನೇ ಸಾಲಿನ ಡಿಪ್ಲೊಮಾ ಕೋರ್ಸ್ ಪ್ರವೇಶ ಪ್ರಕ್ರಿಯೆ ಮತ್ತು ಸಂದರ್ಶನವನ್ನು ಆ.7ರಂದು ಬೆಳಿಗ್ಗೆ 10ಕ್ಕೆ ಹಮ್ಮಿಕೊಂಡಿದೆ.

ಆಸಕ್ತರು www.natanamysuru.org ಅಥವಾ ಕಚೇರಿಯಲ್ಲಿ ನಿಗದಿತ ಶುಲ್ಕ ಪಾವತಿಸಿ ಅರ್ಜಿ ಪಡೆದು ಆ.3ರ ಒಳಗೆ ಸಲ್ಲಿಸಬೇಕು. **ಹೆಚ್ಚಿನ ಮಾಹಿತಿ:** 7259537777

ಅಗ್ನಿ ಅವಘಡ: ಮೃತರ ಸಂಖ್ಯೆ 3ಕ್ಕೆ ಏರಿಕೆ

ಹುಬ್ಬಳ್ಳಿ: ತಾರಿಹಾಳದ ಕೈಗಾರಿಕಾ ಪ್ರದೇಶದ ಸ್ಪಾರ್ಕ್ ಕ್ಯಾಂಡಲ್ ಉತ್ಪಾದಿಸುವ ಕಾರ್ಖಾನೆಯಲ್ಲಿ ಶನಿವಾರ ನಡೆದ ಅಗ್ನಿ ಅವಘಡದಲ್ಲಿ ಮೃತಪಟ್ಟವರ ಸಂಖ್ಯೆ ಮೂರಕ್ಕೆ ಏರಿಕೆಯಾಗಿದೆ.

ಕಿಮ್ಸ್‌ಗೆ ದಾಖಲಾಗಿದ್ದ ಕಲಘಟಗಿಯ ಮಾಳೇಶ ಹದ್ದನ್ನವರ (25) ಮತ್ತು ತಾರಿಹಾಳದ ಗೌರವ್ವ ಹಿರೇಮಠ (45) ಚಿಕಿತ್ಸೆಗೆ ಸ್ಪಂದಿಸದೆ ಭಾನುವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ. ಶನಿವಾರ ತಡರಾತ್ರಿ ವಿಜಯಲಕ್ಷ್ಮಿ ಯಚ್ಚನಗಾರ (34) ಮೃತಪಟ್ಟಿದ್ದರು. ಇನ್ನುಳಿದ ಆರು ಮಂದಿಗೆ ಚಿಕಿತ್ಸೆ ಮುಂದುವರಿದಿದೆ. ಕಾರ್ಖಾನೆಯನ್ನು ಬಾಡಿಗೆಗೆ ಪಡೆದಿದ್ದ ಮುಂಬೈ ಉದ್ಯಮಿ ಅಬ್ದುಲ್ ಶೇಕ್ ತಲೆಮರೆಸಿಕೊಂಡಿದ್ದು, ಪೊಲೀಸರು ಬಂಧನಕ್ಕಾಗಿ ಬಲೆ ಬೀಸಿದ್ದಾರೆ.

ಅವಘಡ ನಡೆದ ಕಾರ್ಖಾನೆಗೆ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಹಾಲಪ್ಪ ಆಚಾರ್, ಘಟನೆ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಸೂಚಿಸಿದರು. ನಂತರ, ಕಿಮ್ಸ್‌ಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು.

‘ಅವಘಡದಲ್ಲಿ ಮೃತಪಟ್ಟ ಕುಟುಂಬದವರಿಗೆ ₹5 ಲಕ್ಷ ಪರಿಹಾರ ನೀಡಲಾಗುವುದು’ ಎಂದು ಸಚಿವ ಹಾಲಪ್ಪ ಭರವಸೆ ನೀಡಿದರು.

ಬಿಸಿಯೇರಿದ ಚರ್ಚೆ, ಪರಿಸರದ ಕಥೆ...

ಸೂಫಿ ಸಂಗೀತದ ಹೊನಲು • 2 ದಿನಗಳ ಮೈಸೂರು ಸಾಹಿತ್ಯ ಸಂಭ್ರಮಕ್ಕೆ ತೆರೆ

ಪ್ರಜಾವಾಣಿ ವಾರ್ತೆ

ಮೈಸೂರು: ಕ್ರಿಕೆಟಿಗ ಕೃಷ್ಣಮಾಚಾರಿ ಶ್ರೀಕಾಂತ್ ಅವರ ‘1983ರ ಕ್ರಿಕೆಟ್ ವಿಶ್ವಕಪ್’ನ ರೋಚಕ ಕ್ಷಣಗಳ ಹಾಸ್ಯಧಾಟಿಯ ವಿವರಣೆ, ರಾಜಕಾರಣದ ವಿಷಯದಲ್ಲಿ ಪತ್ರಕರ್ತರಾದ ಸುಗತ ಶ್ರೀನಿವಾಸರಾಜು–ಸಾಗರಿಕಾ ಘೋಷ್ ಮಧ್ಯೆ ಬಿಸಿಯೇರಿದ ಚರ್ಚೆ, ಸಂಜಯ್ ಗುಬ್ಬಿ ಅವರ ಪರಿಸರದ ಕಥೆಗೆ ಸಾಹಿತ್ಯಪ್ರಿಯರು ಸಾಕ್ಷಿಯಾದರು.

ಇಲ್ಲಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಭಾನುವಾರ ‘ಮೈಸೂರು ಸಾಹಿತ್ಯ ಸಂಭ್ರಮ’ಕ್ಕೆ ‘ಅಪರ್ಯಾಪ್ತ’ ತಂಡದ ಸೂಫಿ ಗಾಯನ ಹಾಗೂ ಮಕ್ಕಳ ಸಂವಾದದೊಂದಿಗೆ ತೆರೆಬಿತ್ತು. ದಿನವಿಡೀ ನಡೆದ ವಿವಿಧ ಗೋಷ್ಠಿಗಳಲ್ಲಿ ಕ್ರಿಕೆಟ್–ರಾಜಕಾರಣ–ಸಾಹಿತ್ಯ–ಸಂಗೀತದ ಹೂರಣದ ಸವಿ ಎಲ್ಲರದ್ದಾಗಿತ್ತು.

‘ಯೆಸ್, ಪ್ರೈಮ್ ಮಿನಿಸ್ಟರ್’ ಸಂವಾದದಲ್ಲಿ ಮಾತನಾಡಿದ ಸಾಗರಿಕಾ ಘೋಷ್, ‘50 ವರ್ಷ ಸಂಸದರಾಗಿದ್ದ ಅಟಲ್ ಬಿಹಾರಿ ವಾಜಪೇಯಿ ಆರ್‌ಎಸ್‌ಎಸ್‌ನಿಂದ ಅಂತರ ಕಾಯ್ದುಕೊಂಡಿದ್ದ ರಾಜಕಾರಣಿ. ಗುಜರಾತ್ ಗಲಭೆಯಾದಾಗ ನರೇಂದ್ರ ಮೋದಿ ಅವರಿಗೆ ರಾಜಧರ್ಮ ಪಾಲಿಸಲು ಸೂಚಿಸಿದ್ದರು. ನರಸಿಂಹರಾವ್ ಅವರ ಆರ್ಥಿಕ ನೀತಿಗಳನ್ನು ಮುಂದುವರಿಸಿದ್ದರು. ಹೀಗಾಗಿಯೇ ಸಂಘ ಪರಿವಾರ ಅವರನ್ನು ವಿರೋಧಿಸುತ್ತಿತ್ತು’ ಎಂದರು.



ಮೈಸೂರಿನಲ್ಲಿ ಭಾನುವಾರ ನಡೆದ ‘ಮೈಸೂರು ಸಾಹಿತ್ಯ ಸಂಭ್ರಮ–2022’ರ ಗೋಷ್ಠಿಯಲ್ಲಿ 1983ರ ವಿಶ್ವಕಪ್ ರೋಚಕ ಕ್ಷಣಗಳ ಕುರಿತು ಕ್ರಿಕೆಟಿಗ ಕೃಷ್ಣಮಾಚಾರಿ ಶ್ರೀಕಾಂತ್ ಮಾತನಾಡಿದರು – ಪ್ರಜಾವಾಣಿ ಚಿತ್ರ

‘ಕಪಿಲ್‌ನನ್ನು ಹುಚ್ಚ ಎಂದಿದ್ದೆವು’

‘1983ರ ವಿಶ್ವಕಪ್ ವಿಜಯದ ಜೀವನಪಾಠಗಳು’ ಕುರಿತ ಗೋಷ್ಠಿಯಲ್ಲಿ ಕೃಷ್ಣಮಾಚಾರಿ ಶ್ರೀಕಾಂತ್, ‘ವೆಸ್ಟ್ ಇಂಡೀಸ್ ವಿರುದ್ಧದ ವಿಶ್ವಕಪ್ ಕ್ರಿಕೆಟ್ ಲೀಗ್‌ನ ಮೊದಲ ಪಂದ್ಯವನ್ನೆ ಗೆಲ್ಲುತ್ತೇವೆಂದು ಕಪಿಲ್ ದೇವ್ ಹೇಳಿದಾಗ ನಾವೆಲ್ಲ ಹುಚ್ಚನೆಂದು ಕರೆದಿದ್ದೆವು. ಆದರೆ, ಆ ಒಂದು ಗೆಲುವಿಂದ ಸಿಕ್ಕ ಆತ್ಮವಿಶ್ವಾಸ ಭಾರತದ ಕ್ರಿಕೆಟ್ ದಿಕ್ಕನ್ನು ಬದಲಿಸಿತು’ ಎಂದರು.

‘ಗುರಿಯನ್ನು ಬೆಂಬತ್ತುವ ಛಲವನ್ನು ಕಪಿಲ್‌ದೇವ್, ವಿರಾಟ್ ಕೊಹ್ಲಿ ಅವರಿಂದ ಕಲಿಯಬೇಕು. ಕ್ರಿಕೆಟ್ ದಿಗ್ಗಜರೆಲ್ಲ ಮೊದಲ ದಿನಗಳಲ್ಲಿ ಜನಸಾಮಾನ್ಯರಂತೆ ಬಸ್, ರೈಲುಗಳಲ್ಲಿ ಓಡಾಡಿದ್ದಾರೆ. ಉಚಿತವಾಗಿ ಊಟ ಸಿಗುತ್ತದೆಂದರೆ ಆಗೆಲ್ಲ ನಾವೂ ದೌಡಾಯಿಸಿದ್ದೇವೆ. ನಡೆದು ಬಂದ ದಾರಿಯನ್ನು ಮರೆಯಬಾರದು’ ಎಂದು ಶ್ರೀಕಾಂತ್ ಹೇಳಿದರು.

ಅದಕ್ಕೆ ಪ್ರತಿಕ್ರಿಯಿಸಿದ ಸುಗತ ಶ್ರೀನಿವಾಸರಾಜು, ‘ಮಾನವೀಯತೆ, ಭಾಷಣ ಚಾತುರ್ಯವೆಲ್ಲವೂ ವಾಜಪೇಯಿ ವ್ಯಕ್ತಿತ್ವವಾಗಿದೆ. ಆದರೆ, ಆರ್‌ಎಸ್‌ಎಸ್ ಸಿದ್ಧಾಂತದಿಂದ ಪ್ರೇರಿತವಾಗಿದ್ದ ಅವರೆಂದಿಗೂ ಮಾತೃ ಸಂಸ್ಥೆಯನ್ನು ಬಿಟ್ಟು ಕೊಟ್ಟಿರಲಿಲ್ಲ. ಚರಣ್‌ಸಿಂಗ್, ಚಂದ್ರಶೇಖರ್, ವಿ.ಪಿ.ಸಿಂಗ್, ಎಚ್.ಡಿ.ದೇವೇಗೌಡ ಸೂಕ್ಷ್ಮ ಅರ್ಥಶಾಸ್ತ್ರಜ್ಞರು. ಅವರ ಕೊಡುಗೆಗಳನ್ನು ಯಾರೂ ಸ್ಮರಿಸದಿರುವುದು ವಿಪರ್ಯಾಸ. ಟಿಪ್ಪು ಸುಲ್ತಾನ್‌ನಂತೆ ದೇವೇಗೌಡರನ್ನೂ ತಪ್ಪಾಗಿ ಅರ್ಥೈಸಿಕೊಳ್ಳಲಾಗಿದೆ. ತಮ್ಮ ಧಾರ್ಮಿಕ ಶ್ರದ್ಧೆಯನ್ನು ರಾಜಕಾರಣಕ್ಕೆ ಅವರೆಂದೂ ಬಳಸಿಕೊಂಡಿಲ್ಲ’ ಎಂದು ಪ್ರತಿಪಾದಿಸಿದರು.

‘ದೇವೇಗೌಡ ಅಧಿಕಾರದಲ್ಲಿದ್ದದ್ದು ಕೆಲವೇ ವರ್ಷಗಳಷ್ಟೇ. ಆದರೆ, ಅವರನ್ನು ಬಾಂಗ್ಲಾ, ಕಾಶ್ಮೀರ, ಪಂಜಾಬ್‌ನ ಜನರು ನಿತ್ಯ ಸ್ಮರಿಸುತ್ತಾರೆ. ಮಾಸ್ ಲೀಡರ್‌ಗಳ ಮಾಸ್ ಲೀಡರ್ ದೇವೇಗೌಡ. ಹೀಗಾಗಿಯೇ ಅವರನ್ನು ಮುಖ್ಯಮಂತ್ರಿ, ಪ್ರಧಾನಿ ಹುದ್ದೆಗಳಿಗೆ ಬಿಜು ಪಟ್ನಾಯಕ್ ಸೂಚಿಸಿದ್ದರು’ ಎಂದರು. ರವಿ ಜೋಶಿ ಸಂವಾದ ನಡೆಸಿಕೊಟ್ಟರು.

‘ನೆನಪು ಅನಂತ’ ಬಿಡುಗಡೆ: ಎಸ್ತರ್ ಅನಂತಮೂರ್ತಿ ಅವರ ‘ನೆನಪು ಅನಂತ’ ಕೃತಿಯನ್ನು ಪ್ರೊ.ವಿ.ಕೆ. ನಟರಾಜ್ ಬಿಡುಗಡೆ ಮಾಡಿದರು. ಇತಿಹಾಸಕಾರ ಡಾ.ಪೃಥ್ವಿದತ್ತ ಚಂದ್ರ ಶೋಭಿ ಸಂವಾದ ನಡೆಸಿಕೊಟ್ಟರು.

> ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿಯೇ ಲೈಂಗಿಕ ಅಲ್ಪಸಂಖ್ಯಾತರ ವಿಚಾರಗಳನ್ನು ಚರ್ಚಿಸಿಲ್ಲ. ಇಲ್ಲಿ ಈ ಕುರಿತು ಗೋಷ್ಠಿ ಆಯೋಜಿಸಿರುವ ಸಂಘಟಕರನ್ನು ಅಭಿನಂದಿಸುವೆ
>
> **ವಸುಧೇಂದ್ರ,** ಲೇಖಕ



ಹರಪನಹಳ್ಳಿ ಸಮೀಪದ ಬೆಂಡಿಗೇರಿ ರಸ್ತೆಯ ಕಣವಿ ಬಳಿ ಪಲ್ಟಿಯಾದ ಡೀಸೆಲ್ ಟ್ಯಾಂಕರ್ ಹೊತ್ತಿ ಉರಿಯಿತು

ಡೀಸೆಲ್ ಟ್ಯಾಂಕರ್‌ಗೆ ಬೆಂಕಿ: ಒಬ್ಬ ಸಜೀವ ದಹನ

ಪ್ರಜಾವಾಣಿ ವಾರ್ತೆ

ಹರಪನಹಳ್ಳಿ (ವಿಜಯನಗರ ಜಿಲ್ಲೆ): ಪಟ್ಟಣದ ಸಮೀಪದ ಬೆಂಡಿಗೇರಿ ರಸ್ತೆಯ ಕಣವಿ ಬಳಿ ಭಾನುವಾರ ಡೀಸೆಲ್ ತುಂಬಿದ್ದ ಟ್ಯಾಂಕರ್ ಪಲ್ಟಿಯಾಗಿ ಬೆಂಕಿ ಹೊತ್ತಿಕೊಂಡಿದ್ದರಿಂದ ಟ್ಯಾಂಕರ್ ಹಿಂದೆ ಬರುತ್ತಿದ್ದ ಬೈಕ್ ಸವಾರ ಸಜೀವವಾಗಿ ದಹನವಾಗಿದ್ದು, ಇಬ್ಬರು ಗಾಯಗೊಂಡಿದ್ದಾರೆ.

ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮೋರಿಗೇರಿ ನಾಗರಾಜ್ (33) ಮೃತಪಟ್ಟವರು. ಲಾರಿ ಚಾಲಕ ಮಹಾದೇವಪ್ಪ ಮತ್ತು ಬೈಕ್‌ನ ಹಿಂಬದಿ ಸವಾರ ಚಂದ್ರು ಗಾಯಗೊಂಡಿದ್ದಾರೆ. ಚಂದ್ರು ಅವರ ಸ್ಥಿತಿ ಗಂಭೀರವಾಗಿದ್ದು, ದಾವಣಗೆರೆ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಹರಪನಹಳ್ಳಿ ಕಡೆಗೆ ಬರುತ್ತಿದ್ದ ಟ್ಯಾಂಕರ್ ಗುಡ್ಡದ ಇಳಿಜಾರಿನ ತಿರುವಿನಲ್ಲಿ ಪಲ್ಟಿಯಾಗಿದೆ. ಆಗ ಡೀಸೆಲ್ ಸೋರಿಕೆಯಾಗಿ ಬೆಂಕಿ ಹೊತ್ತಿಕೊಂಡಿದ್ದು, ಟ್ಯಾಂಕರ್ ಹಿಂದೆ ಬರುತ್ತಿದ್ದ ನಾಗರಾಜ್ ಅವರಿಗೆ ಬೆಂಕಿ ತಗುಲಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಿಟಿಡಿ–ಸಾ.ರಾ.ಮಹೇಶ್ ಭೇಟಿ

ಪ್ರಜಾವಾಣಿ ವಾರ್ತೆ

ಮೈಸೂರು: ಜೆಡಿಎಸ್‌ನಿಂದ ಅಂತರ ಕಾಯ್ದುಕೊಂಡಿರುವ ಇಲ್ಲಿನ ಪ್ರಭಾವಿ ಮುಖಂಡ ಮತ್ತು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅವರನ್ನು ಶಾಸಕ ಸಾ.ರಾ.ಮಹೇಶ್ ಭಾನುವಾರ ಭೇಟಿಯಾಗಿ ಚರ್ಚಿಸಿರುವುದು ಕುತೂಹಲ ಮೂಡಿಸಿದೆ.

‘ಜಲದರ್ಶಿನಿ’ ಅತಿಥಿಗೃಹದಲ್ಲಿ ಭೇಟಿಯಾದ ಮಹೇಶ್, ಜುಲೈ 31ರಂದು ನಡೆಯಲಿರುವ ಕೆಂಪೇಗೌಡ ಜಯಂತಿಗೆ ಆಗಮಿಸುವಂತೆ ಆಹ್ವಾನಪತ್ರಿಕೆ ನೀಡುವ ನೆಪದಲ್ಲಿ ರಾಜಕೀಯ ಬೆಳವಣಿಗೆಗಳ ಬಗ್ಗೆ ಚರ್ಚಿಸಿದ್ದಾರೆ. ಇತರ ಮುಖಂಡರನ್ನು ಹೊರಕಳುಹಿಸಿ ಎರಡು ಗಂಟೆವರೆಗೆ ಪ್ರತ್ಯೇಕವಾಗಿ ಮಾತುಕತೆ ನಡೆಸಿದ್ದಾರೆ.

‘ನನ್ನ ರಾಜಕೀಯ ನಡೆಯನ್ನು 2–3 ತಿಂಗಳಲ್ಲಿ ತಿಳಿಸುತ್ತೇನೆ’ ಎಂದು ದೇವೇಗೌಡ ಈಚೆಗೆ ತಿಳಿಸಿದ್ದರು. ಈ ನಡುವೆ, ಮಹೇಶ್ ಚರ್ಚಿಸಿರುವುದು ಚರ್ಚೆಗೆ ಕಾರಣವಾಗಿದೆ. ‘ಪಕ್ಷದ ನಾಯಕರೊಂದಿಗೆ ಮುನಿಸಿಕೊಂಡು, ಸಂಘಟನೆಯ ಚಟುವಟಿಕೆಗಳಿಂದ ದೂರ ಉಳಿದಿದ್ದ ಅವರ ಮನವೊಲಿಸುವಲ್ಲಿ ಮಹೇಶ್ ಯಶಸ್ವಿಯಾಗಿದ್ದಾರೆ’ ಎನ್ನಲಾಗುತ್ತಿದೆ.

‘ಚಾಮುಂಡೇಶ್ವರಿಯಿಂದ ಜಿಟಿಡಿ ಹಾಗೂ ಅವರ ಪುತ್ರ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಅವರಿಗೆ ಹುಣಸೂರು ಕ್ಷೇತ್ರದಿಂದ ಟಿಕೆಟ್ ಭರವಸೆ ಕೊಟ್ಟಿದ್ದಾರೆ’ ಎನ್ನಲಾಗಿದೆ.

‘ಕೆಂಪೇಗೌಡ ಜಯಂತಿಗೆ ಆಹ್ವಾನಿಸಲು ಮಹೇಶ್ ಭೇಟಿಯಾಗಿದ್ದರು. ಸಮಾಜದವರೆಲ್ಲರೂ ಸೇರೋಣ ಎಂದರು. ಜೆಡಿಎಸ್‌ನಲ್ಲೇ ಇರುವಂತೆ ಕೇಳಿದ್ದು ನಿಜ. ಆದರೆ, ರಾಜಕೀಯ ನಿಲುವನ್ನು 2–3 ತಿಂಗಳಲ್ಲಿ ತಿಳಿಸುತ್ತೇನೆ ಎಂದು ಸ್ಪಷ್ಟವಾಗಿ ತಿಳಿಸಿದ್ದೇನೆ’ ಎಂದು ಜಿಟಿಡಿ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ದುಡ್ಡು ಕೊಟ್ಟು ರಾಡಿ ನೀರು ಕುಡಿಯುವ ಸ್ಥಿತಿ ಬಂದೊದಗಿದೆ– ಜನರ ಅಳಲು

ಮಳೆಯಾದರೆ ಕುಡಿಯಲು ಕೆಸರು ನೀರೇ ಗತಿ!

ಪ್ರಜಾವಾಣಿ ವಾರ್ತೆ

ಮಳೆ ಕಥೆ– ವ್ಯಥೆ

ಮಂಗಳೂರು / ಬೆಳಗಾವಿ / ಮೈಸೂರು/ಕಲಬುರಗಿ: ಮಳೆಗಾಲದ ಆರಂಭವಾದರೆ ಸಾಕು ರಾಜ್ಯದ ಹಲವೆಡೆ ಶುದ್ಧ ಕುಡಿಯುವ ನೀರಿಗಾಗಿ ಜನರ ಪರದಾಟವೂ ಶುರುವಾಗುತ್ತದೆ.

ಮಳೆಗಾಲದಲ್ಲಿ ಕಲುಷಿತ ನೀರು ಕುಡಿದು ಜನರು ಕಾಯಿಲೆ ಬೀಳುವುದು ಪ್ರತಿವರ್ಷದ ಸಾಮಾನ್ಯ ಸಂಗತಿ. ಅದಕ್ಕೆ ಇನ್ನೂ ಪರಿಹಾರ ಸಿಕ್ಕಿಲ್ಲ. ಈ ಬಾರಿಯೂ ದಕ್ಷಿಣ ಕನ್ನಡ, ಬೆಳಗಾವಿ ಮತ್ತು ಕಲಬುರಗಿ ಜಿಲ್ಲೆಗಳ ಜನರಿಗೆ ಕುಡಿಯಲು ಕೆಸರುಮಿಶ್ರಿತ ರಾಡಿ ನೀರೇ ಗತಿ!

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ತಗ್ಗು ಪ್ರದೇಶಗಳಿಗೆ ಪೂರೈಕೆಯಾಗುವ ಕೆಂಪು ಬಣ್ಣದ ರಾಡಿ ನೀರು ಕುಡಿಯಲು ಯೋಗ್ಯವಾಗಿಲ್ಲ.'ದುಡ್ಡು ಕೊಟ್ಟು ರಾಡಿ ನೀರು ಕುಡಿಯುವ ಸ್ಥಿತಿ ಬಂದಿದೆ' ಎನ್ನುವುದು ಇಲ್ಲಿಯ ಜನರ ಅಳಲು.

ತುಂಬೆ ಅಣೆಕಟ್ಟೆಯ ಮಂಗಳೂರು ನಗರಕ್ಕೆ ಪೂರೈಕೆಯಾಗುವ ನೀರು ತಗ್ಗುಪ್ರದೇಶಗಳಲ್ಲಿ ಕೆಸರು ಮಿಶ್ರಿತವಾಗಿರುತ್ತದೆ. ಉಪ್ಪಿನಂಗಡಿ, ಬಿ.ಸಿ. ರೋಡ್ ಮತ್ತಿತರ ಕಡೆ ಚರಂಡಿ ನೀರು, ಮಾಂಸಾಹಾರದ ತ್ಯಾಜ್ಯ ನೇತ್ರಾವತಿ ನದಿ ಒಡಲು ಸೇರುತ್ತಿದೆ. ಈ ನೀರನ್ನೇ ಜನರು ಕುಡಿಯಲು ಬಳಸುತ್ತಾರೆ. ಅದನ್ನು ಬಿಟ್ಟರೆ ಬೇರೆ ಮಾರ್ಗ ಇಲ್ಲ.

ಬಂಟ್ವಾಳ ತಾಲ್ಲೂಕಿನ ಸಜಿಪಮುನ್ನೂರು ಗ್ರಾಮದ ಹಾಲಾಡಿ ಭಾಗದ ಮನೆಗಳಿಗೆ ಶುದ್ಧೀಕರಣವಾಗದ ನೇತ್ರಾವತಿಯ ನೀರು ನೇರವಾಗಿ ಸರಬರಾಜಾಗುತ್ತಿದೆ. ಈ ನೀರನ್ನು ಮನುಷ್ಯರು ಕುಡಿಯಲು ಸಾಧ್ಯವಿಲ್ಲ.

ಮೂರು ನದಿ ಇದ್ದರೂ ಕುಡಿಯಲು ನೀರಿಲ್ಲ: ಬೆಳಗಾವಿ ಜಿಲ್ಲೆಯಲ್ಲಿ ಕೃಷ್ಣಾ, ಮಲಪ್ರಭಾ ಹಾಗೂ ಘಟಪ್ರಭಾದಂತಹ ಮೂರು ಪ್ರಮುಖ ನದಿ ಹರಿದರೂ ಕೆಲವೆಡೆ ಶುದ್ಧ ಕುಡಿಯುವ ನೀರು ಮರೀಚಿಕೆಯಾಗಿದೆ. ಮಳೆಯಾದ ನಂತರ ನದಿ ತೀರದ ಗ್ರಾಮಗಳಿಗೆ ಕುಡಿಯಲು ಕೆಮ್ಮಣ್ಣು ರಾಡಿ ನೀರೇ ಅನಿವಾರ್ಯ. ಬೆಳಗಾವಿ, ಸವದತ್ತಿ, ಕಾಗವಾಡ ತಾಲ್ಲೂಕಿನ ಜುಗೂಳ, ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ, ಚನ್ನಮ್ಮನ ಕಿತ್ತೂರು ತಾಲ್ಲೂಕಿನ ಎಂ.ಕೆ. ಹುಬ್ಬಳ್ಳಿ, ಬೈಲಹೊಂಗಲ ತಾಲ್ಲೂಕಿನ ನಯಾನಗರ, ಗೋಕಾಕ ತಾಲ್ಲೂಕಿನ ಲೋಳಸೂರ ಸೇರಿದಂತೆ 140ಕ್ಕೂ ಹೆಚ್ಚು ಗ್ರಾಮಗಳಲ್ಲಿ ರಾಡಿ ನೀರು ಪೂರೈಕೆಯಾಗುತ್ತಿದೆ.

ಹಾವೇರಿ ಜಿಲ್ಲೆಯ 772 ಗ್ರಾಮಗಳ ಶುದ್ಧ ನೀರಿನ ಘಟಕಗಳ ಪೈಕಿ 30 ಹಳ್ಳಿಗಳಲ್ಲಿ ಕೆಟ್ಟುನಿಂತಿವೆ. ಜನರು ನಲ್ಲಿ ನೀರನ್ನು ಸೋಸಿ ಕುಡಿಯುತ್ತಾರೆ. ಗದಗ ಜಿಲ್ಲೆಯಲ್ಲಿ ಅಸಮರ್ಪಕ ನೀರು ಪೂರೈಕೆಯಿಂದ ಜನರು ಪರದಾಡುವಂತಾಗಿದೆ.

ಮಳೆಯಾದರೆ ರಾಡಿ ನೀರು: ಭೀಮಾ ನದಿ ಕಲಬುರಗಿ ನಗರಕ್ಕೆ ಪ್ರಮುಖ ನೀರಿನ ಮೂಲ. ಜಿಲ್ಲೆಯ ಕೆಲವು ಗ್ರಾಮಗಳಿಗೆ ಕೃಷ್ಣಾ ನದಿ ನೀರು ಜೀವಜಲ. ಕಲಬುರಗಿ ನಗರದ ಕೆಲವು ಭಾಗಗಳಲ್ಲಿ ಚರಂಡಿ ಕಲುಷಿತ ನೀರು ಮತ್ತು ಕೆಸರು ಮಿಶ್ರಿತ ನೀರು ಸರಬರಾಜು ಆಗುತ್ತಿದೆ.

ಚಿತ್ತಾಪುರ ತಾಲ್ಲೂಕಿನ ವಾಡಿ, ರಾವೂರ, ಯಾದಗಿರಿ ಜಿಲ್ಲೆಯ ಶಹಾಪುರ ನಗರಸಭೆ ವ್ಯಾಪ್ತಿಯ ವಾರ್ಡ್‌ಗಳಲ್ಲಿಯೂ ಮಳೆಗಾಲದಲ್ಲಿ ಕೃಷ್ಣಾ ನದಿಯ ಕಾಲುವೆಗಳಿಂದ ಪೂರೈಕೆಯಾಗುವ ನೀರು ಕಲುಷಿತವಾಗಿರುತ್ತದೆ.

'ಫಿಲ್ಟರ್ ಬೆಡ್‌ನಲ್ಲಿ ಸೂಕ್ತ ಪ್ರಮಾಣದಲ್ಲಿ ಬ್ಲೀಚಿಂಗ್ ಪೌಡರ್ ಹಾಕುತ್ತಿಲ್ಲ. ನಗರಕ್ಕೆ ನೀರು ಪೂರೈಸುವ ಬಹುತೇಕ ಪೈಪ್‌ಲೈನ್ ಹಳತಾಗಿದ್ದು ಒಡೆದು ಹೋಗಿವೆ. ಅಲ್ಲಿ ಕೊಳಚೆ ನೀರು ಸೇರಿಕೊಳ್ಳುತ್ತದೆ. ಪೂರ್ಣಪ್ರಮಾಣದಲ್ಲಿ ಹೊಸ ಪೈಪ್‌ಲೈನ್ ಅಳವಡಿಸಬೇಕಿದೆ' ಎನ್ನುತ್ತಾರೆ ಅಧಿಕಾರಿಗಳು.

'ಸಂಸದ ಡಾ.ಉಮೇಶ ಜಾಧವ ಸ್ವಗ್ರಾಮ ಬೆಡಸೂರು ತಾಂಡಾ ಇರುವ ಕಾಳಗಿ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಕೆಳದಂಡೆ ಮುಲ್ಲಾಮಾರಿ ಯೋಜನೆಯ ನೀರು ಶುದ್ಧೀಕರಣವಾಗದೆ ಸರಬರಾಜು ಆಗುತ್ತಿದೆ' ಎಂದು ಚಂದನಕೇರಾದ ಹಣಮಂತ ಪೂಜಾರಿ ಆರೋಪಿಸುತ್ತಾರೆ.

ದಾಹ ನೀಗಿಸಿದ ಮಳೆ: ಮೈಸೂರು, ಹಾಸನ, ಮಂಡ್ಯ,ಚಾಮರಾಜನಗರ, ಕೊಡಗು ಜಿಲ್ಲೆಯಲ್ಲಿ ಬಿದ್ದ ಭಾರಿ ಮಳೆ ಜನರ ಕುಡಿಯುವ ನೀರಿನ ದಾಹ ನೀಗಿಸಿದೆ. ತೆರೆದಬಾವಿಗಳಲ್ಲಿ ಕೈಗೆಟಕುವ ಅಂತರದಲ್ಲಿ ನೀರು ಲಭ್ಯವಾಗತೊಡಗಿದೆ.



ಚಿಕ್ಕೋಡಿ ತಾಲ್ಲೂಕಿನ ಮಾಂಜರಿ ಗ್ರಾಮದ ಚರಂಡಿ ನೀರು ಕೃಷ್ಣಾ ನದಿಗೆ ಸೇರುತ್ತಿದೆ ಪ್ರಜಾವಾಣಿ ಚಿತ್ರ

> ಮಳೆಗಾಲ ಆರಂಭವಾದಾಗಿನಿಂದ ಕಲುಷಿತ ನೀರು ಸರಬರಾಜು ಆಗುತ್ತಿರುವ ಕಾರಣ ರೋಗ ಭೀತಿ ಕಾಡುತ್ತಿದೆ
> **ಉದಯ್‌ಕುಮಾರ್,** ಮಂಗಳೂರು ನಿವಾಸಿ

> ಮೈಸೂರಿನ ಗ್ರಾಮಾಂತರ ಭಾಗದಲ್ಲಿ ಕಳೆದೆರಡು ತಿಂಗಳಿನಿಂದ ಕುಡಿಯುವ ನೀರಿನ ಸಮಸ್ಯೆ ಕುರಿತಂತೆ ದೂರು ಬಂದಿಲ್ಲ. ಮಳೆಯಿಂದ ಅಂತರ್ಜಲ ಹೆಚ್ಚಾಗಿದ್ದು ತೆರೆದಬಾವಿ, ಕೊಳವೆಬಾವಿಗಳಲ್ಲಿ ಒರತೆ ಹೆಚ್ಚಾಗಿದೆ
> **ಬಿ.ಆರ್. ಪೂರ್ಣಿಮಾ,** ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿ, ಮೈಸೂರು

> ಗ್ರಾಮೀಣ ಭಾಗದಲ್ಲಿ ಕೆಲವೆಡೆ ಕೊಳವೆಬಾವಿಗಳಿಂದ ನೀರು ಪೂರೈಸಲಾಗುತ್ತಿದ್ದು, ತೊಂದರೆ ಎದುರಾಗಿಲ್ಲ. ಸಂಸ್ಕರಣೆ ಮಾಡಿ, ಶುದ್ಧ ಕುಡಿಯುವ ನೀರು ಪೂರೈಸಲಾಗುತ್ತಿದೆ
> **ಕಾಂತರಾಜು,** ಸಿಇಒ, ಜಿಲ್ಲಾ ಪಂಚಾಯಿತಿ, ಹಾಸನ

> ಬೆಳಗಾವಿ ನಗರಕ್ಕೆ ಪೂರೈಕೆಯಾಗುವ ನೀರು ಶುದ್ಧೀಕರಣ ಆಗುತ್ತಿಲ್ಲ ಎಂದು ಹಲವು ದೂರುಗಳು ಬಂದಿವೆ. ಈ ಬಗ್ಗೆ ಎಲ್ ಆ್ಯಂಡ್ ಟಿ ಕಂಪನಿಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ
> **ಉಮೇಶ ಶೀಗಿಹಳ್ಳಿ,** ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್, ಜಲಮಂಡಳಿ, ಬೆಳಗಾವಿ

ಸುದ್ದಿ 2 ನಿಮಿಷ

'ಸಂಸ್ಕರಿಸದ ಕೊಳಚೆ ನೀರು ಗಂಗಾ ನದಿ ಸೇರುವುದು ನಿಂತಿಲ್ಲ'

ನವದೆಹಲಿ: ದಶಕಗಳ ಕಾಲ ಮೇಲ್ವಿಚಾರಣೆ ನಡೆಸುತ್ತಿದ್ದರೂ, ಕೊಳಚೆ ನೀರು ಹಾಗೂ ಸಂಸ್ಕರಿಸದ ತ್ಯಾಜ್ಯಗಳು ಗಂಗಾ ನದಿಗೆ ಸೇರುತ್ತಲೇ ಇವೆ ಎಂದು ರಾಷ್ಟ್ರೀಯ ಹಸಿರು ನ್ಯಾಯ ಪೀಠ (ಎನ್‌ಜಿಟಿ) ಅಸಮಾಧಾನ ವ್ಯಕ್ತಪಡಿಸಿದೆ.

ಗಂಗಾ ನದಿಗೆ ಕೊಳಚೆ ನೀರು, ತ್ಯಾಜಗಳು ಸೇರುವುದನ್ನು ತಡೆಗಟ್ಟಲು ಕೈಗೊಂಡ ಕ್ರಮಗಳ ಬಗ್ಗೆ ಮುಂದಿನ ವಿಚಾರಣೆ ಒಳಗಾಗಿ ವರದಿ ಸಲ್ಲಿಸಬೇಕು ಎಂದು ಎನ್‌ಜಿಟಿ ಅಧ್ಯಕ್ಷ ನ್ಯಾಯಮೂರ್ತಿ ಆದೇಶಕುಮಾರ್ ಗೋಯಲ್ ನೇತೃತ್ವದ ಪೀಠ ರಾಷ್ಟ್ರೀಯ ಗಂಗಾ ಮಂಡಳಿಗೆ (ಎನ್‌ಜಿಸಿ) ಸೂಚಿಸಿತು. ವಿಚಾರಣೆಯನ್ನು ಅಕ್ಟೋಬರ್ 14ಕ್ಕೆ ಮುಂದೂಡಿತು.

ಗಂಗಾ ನದಿ ನೀರಿನ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ರಾಷ್ಟ್ರೀಯ ಸ್ವಚ್ಛ ಗಂಗಾ ಮಿಷನ್‌ನಡಿ (ಎನ್‌ಎಂಸಿಜಿ) ಕಠಿಣ ಕ್ರಮಗಳನ್ನು ಕೈಗೊಂಡಂತೆ ತೋರುತ್ತಿಲ್ಲ. ನದಿ ನೀರನ್ನು ಸ್ನಾನಕ್ಕೆ ಮಾತ್ರವಲ್ಲ ಧಾರ್ಮಿಕ ವಿಧಿಗೂ ಬಳಸಲಾಗುತ್ತದೆ. ಹೀಗಾಗಿ, ಮಾರ್ಗಸೂಚಿಗಳಲ್ಲಿ ಹೇಳಿರುವಂತೆ ಗಂಗಾ ನದಿ ನೀರು ಸ್ವಚ್ಛವಾಗಿರಬೇಕು ಎಂದು ನ್ಯಾಯಮೂರ್ತಿ ಗೋಯಲ್ ಹೇಳಿದರು.

ಐಸಿಎಸ್‌ಇ: ರಾಜ್ಯದ 15ಕ್ಕೂ ವಿದ್ಯಾರ್ಥಿಗಳಿಗೆ ಮೊದಲ 3 ಸ್ಥಾನ

ಬೆಂಗಳೂರು: ಐಸಿಎಸ್‌ಇ 12ನೇ ತರಗತಿಯ ಫಲಿತಾಂಶ ಭಾನುವಾರ ಪ್ರಕಟಗೊಂಡಿದ್ದು, ರಾಜ್ಯದ 15ಕ್ಕೂ ಹೆಚ್ಚು ವಿದ್ಯಾರ್ಥಿಗಳು ರಾಷ್ಟ್ರೀಯಮಟ್ಟದಲ್ಲಿ ಮೊದಲ ಮೂರು ಸ್ಥಾನಗಳಲ್ಲಿ ಕಾಣಿಸಿಕೊಂಡಿದ್ದಾರೆ.

ದೇಶದಾದ್ಯಂತ 154 ವಿದ್ಯಾರ್ಥಿಗಳು ಮೊದಲ ಮೂರು ಸ್ಥಾನಗಳನ್ನು ಹಂಚಿಕೊಂಡಿದ್ದಾರೆ. ಬೆಂಗಳೂರಿನ ಸೇಂಟ್ ಜೋಸೆಫ್ಸ್ ಗಂಡು ಮಕ್ಕಳ ಪ್ರೌಢಶಾಲೆಯ ಸನಾ ಜೋಸ್, ಕ್ರೈಸ್ಟ್ ಅಕಾಡೆಮಿ ಐಸಿಎಸ್‌ಇ ಶಾಲೆಯ ನಿವೇದಿತ್ ಎಸ್. ವಾರಿಯರ್, ಸೇಂಟ್ ಫ್ರಾನ್ಸಿಸ್ ಡಿ ಸಾಲೆಸ್ ಪಬ್ಲಿಕ್ ಶಾಲೆಯ ಸ್ನೇಹಾ ಎನ್. ಶಾಸ್ತ್ರಿ ಈ ವಿದ್ಯಾರ್ಥಿಗಳಲ್ಲಿ ಸೇರಿದ್ದಾರೆ. ಈ ವಿದ್ಯಾರ್ಥಿಗಳು ರಾಜ್ಯಮಟ್ಟದಲ್ಲಿ ಮೊದಲ ಸ್ಥಾನ (ಶೇ 99.50) ಪಡೆದಿದ್ದಾರೆ.

ಎಂಟು ವಿದ್ಯಾರ್ಥಿಗಳು, ದಿ. ಫ್ರಾಂಕ್ ಆಂಥೋನಿ ಪಬ್ಲಿಕ್ ಶಾಲೆಯ ಆದಿತ್ಯ ಚಾಂದ್ನಾ, ಸೋಫಿಯಾ ಪ್ರೌಢ ಶಾಲೆಯ ಕೃತಿಕಾ ಕಣ್ಣನ್, ಸೇಂಟ್ ಜೋಸೆಫ್ಸ್ ಗಂಡು ಮಕ್ಕಳ ಪ್ರೌಢ ಶಾಲೆಯ ಸಯ್ಯದ್ ವಹಾಜ್ ಹಸ್ಸನ್, ಮಲ್ಯ ಅದಿತಿ ಇಂಟರ್‌ನ್ಯಾಷನಲ್ ಶಾಲೆ ಜೈವೀರ್ ಸಂದೀಪ್, ವೇದಾ ಮೆನನ್ ಮತ್ತು ನಿಶಾಂತ್, ಹೆಬ್ಬಾಳ ವಿದ್ಯಾನಿಕೇತನ ಶಾಲೆಯ ಕೆ.ಸಿ. ಸುರಭಿ, ಯಲಹಂಕ ವಿದ್ಯಾಶಿಲ್ಪಾ ಅಕಾಡೆಮಿಯ ಹಿತಾ ಚಿಟ್ಟೂರು ಶೇ 99.25 ಅಂಕ ಪಡೆದು ದ್ವಿತೀಯ ಸ್ಥಾನ ಪಡೆದಿದ್ದಾರೆ. ವಿದ್ಯಾಶಿಲ್ಪಾ ಅಕಾಡೆಮಿಯ ಮೃಥಿಕಾ ಭಾಸ್ಕರ್, ಕ್ರೈಸ್ಟ್ ಅಕಾಡೆಮಿ ಐಸಿಎಸ್‌ಇ ಶಾಲೆಯ ನವ್ಯಾ ಟಿ. ಜಿ ಮತ್ತು ಬೆಥನಿ ಪ್ರೌಢ ಶಾಲೆಯ ಮಾನಸ್ ನೀಲೇಶ್ ಎಂಬವರು ಶೇ 99ರಷ್ಟು ಅಂಕ ಗಳಿಸಿ ಮೂರನೇ ಸ್ಥಾನ ಗಳಿಸಿದ್ದಾರೆ.

'ಅಪಾಯದಲ್ಲಿರುವವರು ಸಂಬಂಧಿಕರ ಮನೆಗೆ ಹೋಗಲಿ'

ಮಡಿಕೇರಿ: ತಾಲ್ಲೂಕಿನ ಮದೆನಾಡು ಸಮೀಪದ ಸೀಮೆಹುಲ್ಲು ಕಜೆ ಗುಡ್ಡದ ಬದಿ ಕುಸಿದಿರುವ ಪ್ರದೇಶಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ. ನಾಗೇಶ್ ಭಾನುವಾರ ಭೇಟಿ ನೀಡಿ ವೀಕ್ಷಿಸಿದರು. 'ಅಪಾಯದಲ್ಲಿರುವ ಮೂರು ಕುಟುಂಬಗಳ ಸದಸ್ಯರು ತಮ್ಮ ಸಂಬಂಧಿಕರ ಮನೆಗೆ ತೆರಳಬೇಕು' ಎಂದು ಕೋರಿದರು.

'ಸಂಬಂಧಿಕರು ಸೇರಿದಂತೆ ಇಡೀ ಕುಟುಂಬಕ್ಕೆ ಅಗತ್ಯವಿರುವಷ್ಟು ಪಡಿತರ ನೀಡಲಾಗುವುದು. ಕುಸಿತಕ್ಕೆ ಕಾರಣವೇನು ಎಂಬ ಬಗ್ಗೆ ತಜ್ಞರಿಂದ ವರದಿ ಪಡೆದುಕೊಳ್ಳಲಾಗುವುದು. ಸದ್ಯ, ಈ ಜಾಗದಲ್ಲಿ ಯಾವುದೇ ಅಪಾಯ ಇಲ್ಲ' ಎಂದರು.

ಇಲ್ಲಿನ ಕುಸಿತಕ್ಕೆ ಸಂಬಂಧಿಸಿದಂತೆ ಮಹಿಳೆಯೊಬ್ಬರು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿರುವ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿ, 'ಭೂಮಿ ಕಂಪಿಸಿದಾಗಲೇ ಅಧ್ಯಯನಕ್ಕಾಗಿ ತಜ್ಞರನ್ನು ಕರೆಸಲಾಗಿತ್ತು. ಯಾವುದೇ ಅಧ್ಯಯನ ಪೂರ್ಣಗೊಳ್ಳಲು ಮಳೆ ನಿಲ್ಲಬೇಕು' ಎಂದು ಹೇಳಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.64	15,112	12,035
ಹಾರಂಗಿ	2,859	2,856.26	3,760	2,800
ಕಬಿನಿ	2,284	2,283.76	12,549	8,000
ಹೇಮಾವತಿ	2,922	2,921.70	4,145	1,855
ಲಿಂಗನಮಕ್ಕಿ	1,819	1,797.95	12,638	3,450.8
ಸೂಪಾ (ಮೀ)	564	541.51	3,572	2,656
ಮಾಣಿ	594	583.80	1,713	-
ತುಂಗಭದ್ರಾ	1,633	1633	4491	29740
ಮಲಪ್ರಭಾ	2079.5	2068.40	1,576	194
ಘಟಪ್ರಭಾ	2175	2153.50	5,727	169
ಭದ್ರಾ	186	184.7	8,822	2,816
ಆಲಮಟ್ಟಿ (ಮೀ)	519.6	517.99	25,802	14,576
ನಾರಾಯಣಪುರ (ಮೀ)	492.25	491.48	6,000	8,000

* ನೆಲಮಟ್ಟದಿಂದ

ದೆಹಲಿಯಲ್ಲೂ ಮಂಕಿಪಾಕ್ಸ್ ಪತ್ತೆ

ದೇಶದಲ್ಲಿ 4ಕ್ಕೇರಿದ ಪ್ರಕರಣಗಳು: ಕೇಂದ್ರ ಸರ್ಕಾರದಿಂದ ಉನ್ನತಮಟ್ಟದ ಸಭೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಶ್ಚಿಮ ದೆಹಲಿಯ 34 ವರ್ಷದ ವ್ಯಕ್ತಿಯಲ್ಲಿ ಮಂಕಿಪಾಕ್ಸ್ ವೈರಸ್ ಇರುವುದು ಭಾನುವಾರ ದೃಢಪಟ್ಟಿದ್ದು, ದೇಶದಲ್ಲಿ ಪ್ರಕರಣಗಳ ಸಂಖ್ಯೆ ನಾಲ್ಕಕ್ಕೆ ಏರಿಕೆಯಾಗಿದೆ.

ರೋಗ ಲಕ್ಷಣಗಳು ಕಾಣಿಸಿದ ನಂತರ ವ್ಯಕ್ತಿಯನ್ನು ಮೂರು ದಿನಗಳ ಹಿಂದೆಯೇ ಇಲ್ಲಿನ ಲೋಕ ನಾಯಕ ಜಯಪ್ರಕಾಶ ಆಸ್ಪತ್ರೆಯಲ್ಲಿ ಪ್ರತ್ಯೇಕವಾಗಿರಿಸಿ, ಚಿಕಿತ್ಸೆ ನೀಡಲಾಗುತ್ತಿದೆ. ಈ ವ್ಯಕ್ತಿಯಲ್ಲಿನ ಮಾದರಿ ಸಂಗ್ರಹಿಸಿ, ಪುಣೆಯ ರಾಷ್ಟ್ರೀಯ ವೈರಾಣು ಸಂಸ್ಥೆಗೆ (ಎನ್‌ಐವಿ) ರವಾನಿಸಲಾಗಿತ್ತು. ಪರೀಕ್ಷೆಯಲ್ಲಿ ಸೋಂಕು ದೃಢಪಟ್ಟಿದೆ.

'ಈ ವ್ಯಕ್ತಿಗೆ ವಿದೇಶ ಪ್ರಯಾಣದ ಹಿನ್ನೆಲೆಯಿರಲಿಲ್ಲ. ಆದರೆ, ಇತ್ತೀಚೆಗೆ ಹಿಮಾಚಲಪ್ರದೇಶದ ಮನಾಲಿಯಲ್ಲಿ ನಡೆದ ಪುರುಷರ ಸಂತೋಷಕೂಟದಲ್ಲಿ ಪಾಲ್ಗೊಂಡಿದ್ದರು. ಸೋಂಕಿತನ ನಿಕಟ ಸಂಪರ್ಕದಲ್ಲಿದ್ದವರನ್ನು ಗುರುತಿಸಿ, ಪ್ರತ್ಯೇಕ ವಾಸಕ್ಕೆ ಕ್ರಮ ಕೈಗೊಳ್ಳಲಾಗಿದೆ. ಸೋಂಕಿನ ಲಕ್ಷಣಗಳಿರುವ ವ್ಯಕ್ತಿಗಳ ಆರೋಗ್ಯ ತಪಾಸಣೆ ತೀವ್ರಗೊಳಿಸಲಾಗಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

ಮಂಕಿಪಾಕ್ಸ್ ವೈರಸ್‌ನ ಮೊದಲ ಮೂರು ಪ್ರಕರಣಗಳೂ ಕೇರಳದಲ್ಲಿ ವರದಿಯಾಗಿದ್ದವು.

ಮಂಕಿಪಾಕ್ಸ್ ಸೋಂಕಿತರಿಗೆ ಲೋಕ ನಾಯಕ ಜಯಪ್ರಕಾಶ ಆಸ್ಪತ್ರೆಯಲ್ಲಿ ಪ್ರತ್ಯೇಕವಾದ ಐಸೋಲೇಷನ್ ವಾರ್ಡ್ ತೆರೆಯಲಾಗಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ತಿಳಿಸಿದ್ದಾರೆ.

ಉನ್ನತಮಟ್ಟದ ಸಭೆ: ಮಂಕಿಪಾಕ್ಸ್ ಪ್ರಕರಣಗಳ ಅಪಾಯ ತಗ್ಗಿಸಲು ಕೇಂದ್ರ ಸರ್ಕಾರ ಭಾನುವಾರ ಉನ್ನತಮಟ್ಟದ ಪರಿಶೀಲನಾ ಸಭೆ ನಡೆಸಿದೆ.

ಆರೋಗ್ಯ ಸೇವೆಗಳ ಮಹಾನಿರ್ದೇಶಕ (ಡಿಜಿಎಚ್‌ಎಸ್) ಅತುಲ್ ಗೋಯೆಲ್ ಅವರು, ಸಭೆ ನಡೆಸಿ, ರೋಗ ನಿಯಂತ್ರಣದ ರಾಷ್ಟ್ರೀಯ ಕೇಂದ್ರಕ್ಕೆ (ಎನ್‌ಸಿಡಿಸಿ) ಸಾಂಕ್ರಾಮಿಕ ರೋಗಗಳ ಪ್ರಕರಣ ಸಂಬಂಧ ಸಮಗ್ರವಾಗಿ ಪರಿಶೀಲಿಸಲು ಸೂಚಿಸಿದರು.

ಅಂತರರಾಷ್ಟ್ರೀಯ ಪ್ರಯಾಣ ಮಾಡಿದ ಎಲ್ಲರನ್ನೂ ಕಟ್ಟುನಿಟ್ಟಿನ ತಪಾಸಣೆಗೆ ಒಳಪಡಿಸಲು ವಿಮಾನ ನಿಲ್ದಾಣ ಮತ್ತು ಬಂದರು ಆರೋಗ್ಯಾಧಿಕಾರಿಗಳು ಮತ್ತು ಆರೋಗ್ಯ ಸಚಿವಾಲಯದ ಪ್ರಾದೇಶಿಕ ಕಚೇರಿ ಅಧಿಕಾರಿಗಳಿಗೆ ಅವರು ಸೂಚಿಸಿದರು ಎಂದು ಮೂಲಗಳು ತಿಳಿಸಿವೆ.

ತೀವ್ರ ಕಣ್ಗಾವಲಿಗೆ ಡಬ್ಲ್ಯುಎಚ್‌ಒ ಸೂಚನೆ: 'ಮಂಕಿಪಾಕ್ಸ್ ವೇಗವಾಗಿ ಹರಡುತ್ತಿದೆ. ಈ ಮೊದಲು ಕಾಣಿಸದ ಅನೇಕ ದೇಶಗಳಿಗೆ ಅದು ಹರಡುತ್ತಿದೆ. ತೀವ್ರ ಕಣ್ಗಾವಲು ಮತ್ತು ಸಾರ್ವಜನಿಕ ಆರೋಗ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಬೇಕು' ಎಂದು ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ಆಗ್ನೇಯ ಏಷ್ಯಾ ವಲಯದ ಪ್ರಾದೇಶಿಕ ನಿರ್ದೇಶಕಿ ಡಾ. ಪೂನಂ ಖೇತ್ರಪಾಲ್ ಸಿಂಗ್ ಅವರು ಸದಸ್ಯ ರಾಷ್ಟ್ರಗಳಿಗೆ ಭಾನುವಾರ ಕರೆ ನೀಡಿದ್ದಾರೆ.

ಮಂಕಿಪಾಕ್ಸ್ ಭೀತಿ ಬೇಡ: ತಜ್ಞರ ಸಲಹೆ

ನವದೆಹಲಿ (ಪಿಟಿಐ); 'ಮಂಕಿಪಾಕ್ಸ್ ಅತೀ ಕಡಿಮೆ ಪ್ರಸರಣದ ಮತ್ತು ವಿರಳ ಮರಣ ಸಂಭವದ ಸೋಂಕು ಆಗಿದೆ. ಈ ಸೋಂಕಿಗೆ ಜನರು ಆತಂಕಪಡಬೇಕಾಗಿಲ್ಲ' ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ ಪ್ರಮುಖ ಸಂಸ್ಥೆಯಾದ ಪುಣೆಯ ರಾಷ್ಟ್ರೀಯ ವೈರಾಣು ಸಂಸ್ಥೆಯ (ಎನ್‌ಐವಿ) ತಜ್ಞರು ಭಾನುವಾರ ಹೇಳಿದ್ದಾರೆ.

ಎನ್‌ಐವಿಯ ಹಿರಿಯ ವಿಜ್ಞಾನಿ ಡಾ.ಪ್ರಗ್ಯಾ ಯಾದವ್, 'ಮಂಕಿಪಾಕ್ಸ್ ವೈರಾಣು, ಕಡಿಮೆ ತೀವ್ರತೆಯ ಪಶ್ಚಿಮ ಆಫ್ರಿಕಾದ ವಂಶವಾಹಿನಿಯ ವೈರಸ್ ಎನಿಸಿದೆ. ಈ ಹಿಂದೆ ವರದಿಯಾದ ಕಾಂಗೋ ವಂಶಾವಳಿಗಿಂತ ಕಡಿಮೆ ತೀವ್ರತೆ ಹೊಂದಿದೆ. ಭಾರತದಲ್ಲಿ ವರದಿಯಾದ ಪ್ರಕರಣಗಳೂ ಕಡಿಮೆ ತೀವ್ರತೆಯ ಪಶ್ಚಿಮ ಆಫ್ರಿಕಾದ ವಂಶಾವಳಿಯ ಪ್ರಕರಣಗಳಾಗಿವೆ' ಎಂದು ಹೇಳಿದ್ದಾರೆ.

ಸಾಂಕ್ರಾಮಿಕ ರೋಗಗಳ ತಜ್ಞ ಡಾ.ಚಂದ್ರಕಾಂತ್ ಲಹಾರಿಯಾ 'ಮಂಕಿಪಾಕ್ಸ್ ಹೊಸ ವೈರಾಣು ಅಲ್ಲ. ಐದು ದಶಕಗಳ ಹಿಂದೆಯೇ ಕಾಣಿಸಿದೆ. ಉಸಿರಾಟದ ಸಮಸ್ಯೆ. ಇದು ಸೋಂಕಿತರೊಂದಿಗೆ ವೈಯಕ್ತಿಕವಾಗಿ ನಿಕಟ ಸಂಪರ್ಕದಲ್ಲಿದ್ದಾಗ ಮಾತ್ರ ಹರಡುವಂತದ್ದು' ಎಂದು ಹೇಳಿದ್ದಾರೆ.

ಎನ್‌ಟಿಎಜಿಐನ ಕೋವಿಡ್ ವರ್ಕಿಂಗ್ ಗ್ರೂಪ್ ಮುಖ್ಯಸ್ಥ ಡಾ.ಎನ್. ಜೆ. ಅರೋರಾ ಅವರು, 'ಇದರಿಂದ ಸಾವು ಸಂಭವಿಸುವುದು ಸಹ ವಿರಳ. ಸೋಂಕಿತರನ್ನು ಮತ್ತು ಸೋಂಕಿತರ ಸಂಪರ್ಕಿತರನ್ನು ಪತ್ತೆ ಹಚ್ಚಿ, ಪ್ರತ್ಯೇಕವಾಗಿರಿಸುವುದು, ಬಲವಾದ ಕಣ್ಗಾವಲಿನಿಂದ ಈ ವೈರಾಣು ಹರಡುವುದನ್ನು ತಡೆಗಟ್ಟಬಹುದು' ಎಂದು ಹೇಳಿದ್ದಾರೆ.

ಗುಡುಗು ಸಹಿತ ಮಳೆ ಮುಂದುವರಿಕೆ

ಬೆಂಗಳೂರು: ಕರಾವಳಿ ಮತ್ತು ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಕೆಲವೆಡೆ ಎರಡು ದಿನ ಗುಡುಗು ಸಹಿತ ಮಳೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಒಳನಾಡಿನ ಕೆಲವೆಡೆ 48 ಗಂಟೆಗಳು ಮಳೆಯಾಗಲಿದೆ. ಇದೇ 27 ಮತ್ತು 28ಕ್ಕೆ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಹಾಗೂ ಕೊಡಗು ಜಿಲ್ಲೆಯಲ್ಲಿ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಈ ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದೆ. ಉಳಿದೆಡೆ ಸಾಧಾರಣ ಮಳೆಯಾಗಲಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಕೆಲವು ಕಡೆಗಳಲ್ಲಿ ಸಾಧಾರಣ ಮಳೆಯಾಗಲಿದೆ. ಮುಂದಿನ 48 ಗಂಟೆಗಳಲ್ಲಿ ಹವಾಮಾನದಲ್ಲಿ ಗಮನಾರ್ಹವಾದ ಬದಲಾವಣೆಯಿಲ್ಲ ಎಂದು ತಿಳಿಸಲಾಗಿದೆ.

'ಔದ್ಯಮಿಕ ವಾತಾವರಣ ಉತ್ತೇಜಿಸಲು ಒತ್ತು ನೀಡಿ'

ನವದೆಹಲಿ (ಪಿಟಿಐ): 'ರಾಜ್ಯಗಳಲ್ಲಿ ಔದ್ಯಮಿಕ ವಾತಾವರಣ ಉತ್ತೇಜಿಸಲು ಒತ್ತು ನೀಡಬೇಕು. ಗತಿಶಕ್ತಿ, ಹರ್ ಘರ್ ಜಲ್‌ನಂತಹ ಪ್ರಮುಖ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಶ್ರಮಿಸಬೇಕು' ಎಂದು ಬಿಜೆಪಿ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಸೂಚಿಸಿದರು.

18 ರಾಜ್ಯಗಳ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳ ಜೊತೆ ಭಾನುವಾರ ಸುಮಾರು 4 ಗಂಟೆ ಸಭೆ ನಡೆಸಿದ ಅವರು ಹಲವು ವಿಚಾರಗಳ ಕುರಿತು ಚರ್ಚಿಸಿದರು.

'ಔದ್ಯಮಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ದಿಸೆಯಲ್ಲಿ ಕೇಂದ್ರ ಸರ್ಕಾರ ಕೈಗೊಂಡಿರುವ ಹಲವು ಉಪಕ್ರಮಗಳ ಕುರಿತು ಮಾಹಿತಿ ನೀಡಿದ ಅವರು ಉದ್ಯಮಶೀಲತೆಯ ಮಹತ್ವವನ್ನೂ ಮನವರಿಕೆ ಮಾಡಿಕೊಟ್ಟರು' ಎಂದು ಬಿಜೆಪಿ ಪ್ರಕಟಣೆ ತಿಳಿಸಿದೆ.

ಕ್ರೀಡೆಗೆ ಹೆಚ್ಚಿನ ಒತ್ತು ನೀಡಬೇಕು. ಅದಕ್ಕೆ ಅಗತ್ಯವಿರುವ ಅತ್ಯಾಧುನಿಕ ಮೂಲ ಸೌಕರ್ಯಗಳನ್ನು ಕಲ್ಪಿಸಬೇಕು. ಆ ಮೂಲಕ ಯುವಕರು ಕ್ರೀಡಾ ಚಟುವಟಿಕೆಗಳಲ್ಲಿ ಹೆಚ್ಚಾಗಿ ತೊಡಗಿಕೊಳ್ಳುವಂತೆ ಮಾಡಬೇಕು ಎಂದೂ ಸಲಹೆ ನೀಡಿದ್ದಾಗಿ ಪ್ರಕಟಣೆ ವಿವರಿಸಿದೆ.

ಕರ್ನಾಟಕದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಕೇಂದ್ರ ಸಚಿವ ಭೂಪೇಂದರ್ ಯಾದವ್ ಮತ್ತು ಉತ್ತಮ ಆಡಳಿತ ಘಟಕದ ಮುಖ್ಯಸ್ಥ ವಿನಯ್ ಸಹಸ್ರಬುದ್ಧೆ ಅವರು ಸಭೆಯಲ್ಲಿ ಭಾಗವಹಿಸಿದ್ದರು.

'ಕರ್ನಾಟಕದ ಐದು ಯೋಜನೆಗಳಿಗೆ ಮೆಚ್ಚುಗೆ'

ನವದೆಹಲಿ: 'ಕರ್ನಾಟಕ ಸರ್ಕಾರ ಜಾರಿಗೊಳಿಸಿದ ಐದಾರು ಯೋಜನೆಗಳ ಬಗ್ಗೆ ಬಿಜೆಪಿ ಮುಖ್ಯಮಂತ್ರಿಗಳ ಸಭೆಯಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬಿಜೆಪಿ ಆಡಳಿತದಲ್ಲಿರುವ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳ ಜೊತೆ ಪ್ರಧಾನಿ ನರೇಂದ್ರ ಮೋದಿ ಅವರು ನವದೆಹಲಿಯ ಪಕ್ಷದ ಮುಖ್ಯ ಕಚೇರಿಯಲ್ಲಿ ಭಾನುವಾರ ಸಭೆ ನಡೆಸಿದರು.

ಸಭೆಯ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಬೊಮ್ಮಾಯಿ, 'ಬಿಜೆಪಿ ಮುಖ್ಯಮಂತ್ರಿಗಳ ಸಭೆ ನಿಯಮಿತವಾಗಿ ನಡೆಯುತ್ತದೆ. ಕೇಂದ್ರ ಸರ್ಕಾರದ ಪ್ರಾಯೋಜಿತ ಕಲ್ಯಾಣ ಯೋಜನೆಗಳ ಕುರಿತು ಚರ್ಚಿಸಲಾಗುತ್ತದೆ. ಮುಂದಿನ ಸಭೆ ಅಕ್ಟೋಬರ್‌ನಲ್ಲಿ ನಡೆಯಲಿದೆ' ಎಂದರು.

'ಕಿಸಾನ್ ಸಮ್ಮಾನ್ ಯೋಜನೆ, ನೂತನ ರಾಷ್ಟ್ರೀಯ ಶಿಕ್ಷಣ ನೀತಿ, ಐಟಿಐ ಮೇಲ್ದರ್ಜೆಗೆ ಏರಿಸಿರುವುದಕ್ಕೆ ಮೆಚ್ಚುಗೆ ವ್ಯಕ್ತವಾಯಿತು. ಎಲ್ಲ ಯೋಜನೆಗಳ ಬಗ್ಗೆ ಪ್ರಧಾನಿ ಅವರು ಮಾಹಿತಿ ಪಡೆದರು' ಎಂದರು.

'ಸೋಮವಾರ ಬೆಳಿಗ್ಗೆ ನಡೆಯುವ ರಾಷ್ಟ್ರಪತಿಯವರ ಪ್ರಮಾಣವಚನ ಸಮಾರಂಭದಲ್ಲಿ ಭಾಗವಹಿಸುತ್ತೇನೆ. ಬಳಿಕ ಕ್ರೀಡಾ ಸಚಿವರು, ವಾಣಿಜ್ಯ ಮತ್ತು ಕೈಗಾರಿಕೆ ಸಚಿವರು, ಅರಣ್ಯ ಹಾಗೂ ಪರಿಸರ ಸಚಿವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಲಾಗುವುದು' ಎಂದು ಅವರು ಹೇಳಿದರು.

ರಾಷ್ಟ್ರಪತಿ ಮುರ್ಮು ಪ್ರಮಾಣ ಇಂದು


ನವದೆಹಲಿ (ಪಿಟಿಐ): ದ್ರೌಪದಿ ಮುರ್ಮು ಅವರು ಭಾರತದ 15ನೇ ರಾಷ್ಟ್ರಪತಿಯಾಗಿ ಸೋಮವಾರ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಬೆಳಿಗ್ಗೆ 10.15ಕ್ಕೆ ಪ್ರಮಾಣವಚನ ಕಾರ್ಯಕ್ರಮ ನಡೆಯಲಿದೆ. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರು ಪ್ರಮಾಣವಚನ ಬೋಧಿಸಲಿದ್ದಾರೆ. ಪ್ರಮಾಣವಚನದ ಬಳಿಕ ಮುರ್ಮು ಅವರು ದೇಶವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಪ್ರಮಾಣವಚನಕ್ಕೂ ಮುನ್ನ 21 ಸುತ್ತು ಗುಂಡು ಹಾರಾಟ ನಡೆಸಿ ಗೌರವ ವಂದನೆ ಸಲ್ಲಿಸಲಾಗುವುದು.

ಪ್ರಮಾಣವಚನಕ್ಕೆ ಮುನ್ನ, ನಿರ್ಗಮಿತ ರಾಷ್ಟ್ರಪತಿ ರಾಮನಾಥ ಕೋವಿಂದ್ ಮತ್ತು ನೂತನ ರಾಷ್ಟ್ರಪತಿ ಮುರ್ಮು ಅವರು ವಿಧಿಯುಕ್ತ ಮೆರವಣಿಗೆಯಲ್ಲಿ ಸಂಸತ್ತಿಗೆ ಬರಲಿದ್ದಾರೆ.

ವಿದಾಯ ಭಾಷಣದಲ್ಲಿ ರಾಷ್ಟ್ರಪತಿ ಕೋವಿಂದ್ ಕರೆ

'ಮುಂದಿನ ತಲೆಮಾರುಗಳಿಗಾಗಿ ಪ್ರಕೃತಿ ರಕ್ಷಿಸಿ'



ಕೋವಿಂದ್

ನವದೆಹಲಿ (ಪಿಟಿಐ): ನಿಸರ್ಗ ಮಾತೆಯು ದಟ್ಟ ನೋವಿನಲ್ಲಿದ್ದಾಳೆ. ಹವಾಮಾನ ಬಿಕ್ಕಟ್ಟು ಈ ಗ್ರಹದ ಭವಿಷ್ಯಕ್ಕೆ ಗಂಡಾಂತರ ತರಬಹುದು ಎಂದು ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ತಮ್ಮ ವಿದಾಯ ಭಾಷಣದಲ್ಲಿ ಭಾನುವಾರ ಹೇಳಿದ್ದಾರೆ. ಮುಂದಿನ ತಲೆಮಾರುಗಳಿಗಾಗಿ ನಿಸರ್ಗವನ್ನು ರಕ್ಷಿಸುವಂತೆ ಅವರು ಕರೆ ನೀಡಿದ್ದಾರೆ.

21ನೇ ಶತಮಾನವನ್ನು ಭಾರತದ ಶತಮಾನವಾಗಿಸಲು ದೇಶವು ಸಜ್ಜಾಗುತ್ತಿದೆ ಎಂದು ಅವರು ಹೇಳಿದ್ದಾರೆ. ಆರೋಗ್ಯ, ಶಿಕ್ಷಣ ಕ್ಷೇತ್ರಗಳ ಜತೆಗೆ ಆರ್ಥಿಕ ಸುಧಾರಣೆಗಳಿಂದಾಗಿ ಜನರು ತಮ್ಮ ಸಾಮರ್ಥ್ಯವನ್ನು ಕಂಡುಕೊಂಡು ಸಂತಸವಾಗಿ ಇರುವುದು ಸಾಧ್ಯವಾಗುತ್ತದೆ ಎಂದರು.

ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮೂಲಸೌಕರ್ಯವನ್ನು ಸುಧಾರಿಸುವ ಅಗತ್ಯ ಇದೆ ಎಂಬುದನ್ನು ಸಾಂಕ್ರಾಮಿಕವು ನಮಗೆ ತೋರಿಸಿಕೊಟ್ಟಿದೆ. ಸರ್ಕಾರವು ಈ ವಿಚಾರಕ್ಕೆ ಆದ್ಯತೆ ಕೊಟ್ಟಿದೆ ಎಂಬುದು ಸಂತಸದ ವಿಚಾರ ಎಂದರು.

ಭಾರತದ ಯುವ ಜನರು ಅವರ ಪರಂಪರೆಯ ಜತೆಗೆ ನಂಟು ಹೊಂದುವಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯು ಕೆಲಸ ಮಾಡಲಿದೆ. 21ನೇ ಶತಮಾನದಲ್ಲಿ ಬಲವಾಗಿ ಕಾಲೂರಲು ಇದು ಅವರಿಗೆ ನೆರವಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವು ಅಮೂರ್ತ ಎಂದು ಭಾವಿಸಬಾರದು. ಅವು ಅತ್ಯುಚ್ಚ, ಉನ್ನತ ಮತ್ತು ಉದ್ಧಾರಕವಾದುದು ಎಂದರು.

'ತಮ್ಮ ಕಠಿಣ ಶ್ರಮ ಮತ್ತು ಸೇವಾ ಮನೋಭಾವದ ಮೂಲಕ ನಮ್ಮ ಹಿಂದಿನವರು ಮತ್ತು ಆಧುನಿಕ ದೇಶದ ಸಂಸ್ಥಾಪಕರು ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಅರ್ಥಗಳನ್ನು ವಿಸ್ತರಿಸಿದ್ದಾರೆ. ಅವರು ಹಾಕಿಕೊಟ್ಟ ಹಾದಿಯಲ್ಲಿ ನಾವು ನಡೆದರೆ ಸಾಕು. ಸಾಮಾನ್ಯ ಪ್ರಜೆಗೆ ಈ ತತ್ವಗಳು ಯಾವ ಅರ್ಥವನ್ನು ಕೊಡುತ್ತವೆ? ಜೀವನದಲ್ಲಿ ಸಂತಸವನ್ನು ಕಂಡುಕೊಳ್ಳುವುದೇ ಮುಖ್ಯ ಗುರಿ ಎಂದು ನನ್ನ ಭಾವನೆ. ಅದಕ್ಕೆ ಬೇಕಾದ ಮೂಲಭೂತ ಅಗತ್ಯಗಳನ್ನು ಪೂರೈಸುವ ದಿಸೆಯಲ್ಲಿ ಕೆಲಸ ಮಾಡಬೇಕು' ಎಂದು ಕೋವಿಂದ್ ಹೇಳಿದ್ದಾರೆ.

ನೆನಪುಗಳ ಮೆಲುಕು

ಹಿಂದಿನ ನೆನಪುಗಳನ್ನು ಕೋವಿಂದ್ ಅವರು ಮೆಲುಕು ಹಾಕಿದರು. ದೇಶವು ಸ್ವಾತಂತ್ರ್ಯ ಪಡೆದುಕೊಂಡ ನಂತರದ ದಿನಗಳ ಬಗ್ಗೆ ಮಾತನಾಡಿದರು. 'ಆಗ, ದೇಶ ಕಟ್ಟುವುದಕ್ಕಾಗಿ ಹೊಸ ಚೈತನ್ಯ ಚಿಮ್ಮುತ್ತಿತ್ತು. ಹೊಸ ಕನಸುಗಳಿದ್ದವು. ನನ್ನಲ್ಲೂ ಕನಸುಗಳಿದ್ದವು. ದೇಶ ಕಟ್ಟುವ ಪ್ರಕ್ರಿಯೆಯಲ್ಲಿ ನಾನೂ ಒಂದಲ್ಲ ಒಂದು ದಿನ ಭಾಗಿಯಾಗಬೇಕು ಎಂಬುದು ನನ್ನ ಕನಸಾಗಿತ್ತು' ಎಂದರು.

'ಮಣ್ಣಿನ ಮನೆಯಲ್ಲಿರುವ ಹುಡುಗನಿಗೆ ಗಣರಾಜ್ಯದ ಅತ್ಯುನ್ನತ ಸಾಂಸ್ಥಿಕ ಹುದ್ದೆಯ ಬಗ್ಗೆ ಯಾವ ಗ್ರಹಿಕೆಯೂ ಇರಲಿಲ್ಲ. ಆದರೆ, ಯಾವುದೇ ಪ್ರಜೆಯು ನಮ್ಮೆಲ್ಲರ ಸಾಮೂಹಿಕ ಭವಿಷ್ಯ ಕಟ್ಟುವ ಕೆಲಸದಲ್ಲಿ ಭಾಗಿಯಾಗಲು ಅವಕಾಶವಿದೆ ಮತ್ತು ಅದುವೇ ನಮ್ಮ ಪ್ರಜಾಪ್ರಭುತ್ವದ ಶಕ್ತಿಯ ಪ್ರತೀಕ' ಎಂದು ಅವರು ವಿವರಿಸಿದರು.

> **ಗ್ರಾಮಪ್ರಮುಖನಾಗಿದ್ದ ಆ ರಾಮನಾಥ ಇಂದು ನಿಮ್ಮ ಮುಂದೆ ಮಾತನಾಡಲು ಸಾಧ್ಯವಾಗಿದ್ದಕ್ಕೆ ಚೈತನ್ಯಶೀಲ ಪ್ರಜಾಪ್ರಭುತ್ವ ಸಂಸ್ಥೆಗಳ ಶಕ್ತಿಯೇ ಕಾರಣ**
> **ರಾಮನಾಥ ಕೋವಿಂದ್**
> ನಿರ್ಗಮಿತ ರಾಷ್ಟ್ರಪತಿ

ಸಂಕ್ಷಿಪ್ತ ಸುದ್ದಿ

ವೈವಾಹಿಕ ಅತ್ಯಾಚಾರ: ಹೈಕೋರ್ಟ್ ಆದೇಶಕ್ಕೆ 'ಸುಪ್ರೀಂ' ತಡೆ

ನವದೆಹಲಿ: 'ಪತ್ನಿ ಮೇಲೆ ಅತ್ಯಾಚಾರ ನಡೆಸಿದ್ದಕ್ಕಾಗಿ ಪತಿಯನ್ನು ವಿಚಾರಣೆಗೆ ಒಳಪಡಿಸಬಹುದು ಹಾಗೂ ಐಪಿಸಿ ಸೆಕ್ಷನ್ 375ರ ಅಡಿ ಪತಿಗೆ ನೀಡಿರುವ ವಿನಾಯಿತಿ ಪ್ರಶ್ನಾರ್ಹವಲ್ಲ' ಎಂಬ ಕರ್ನಾಟಕ ಹೈಕೋರ್ಟ್‌ನ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ಕೊಟ್ಟಿದೆ.

ಮುಖ್ಯ ನ್ಯಾಯಮೂರ್ತಿ ಎನ್. ವಿ.ರಮಣ, ನ್ಯಾಯಮೂರ್ತಿಗಳಾದ ಕೃಷ್ಣ ಮುರಾರಿ ಮತ್ತು ಹಿಮಾ ಕೊಹ್ಲಿ ಅವರಿದ್ದ ಪೀಠವು, ಕರ್ನಾಟಕ ಹೈಕೋರ್ಟ್ ಇದೇ ವರ್ಷದ ಮಾರ್ಚ್ 23ರಂದು ನೀಡಿದ ಅಂತಿಮ ತೀರ್ಪು ಅಪ್ರಸ್ತುತ.

ಈ ಪ್ರಕರಣ ಸಂಬಂಧ ಮತ್ತೊಂದು ಆದೇಶ ನೀಡುವವರೆಗೂ, ಹೈಕೋರ್ಟ್ ತೀರ್ಪು ಜಾರಿಯಾಗುವಂತಿಲ್ಲ ಎಂದು ಮಧ್ಯಂತರ ತಡೆ ನೀಡಿದೆ.

ಕಾಂಗ್ರೆಸ್ ನಾಯಕರಿಗೆ ಸ್ಮೃತಿ ಇರಾನಿ ಲೀಗಲ್ ನೋಟಿಸ್

ನವದೆಹಲಿ (ಪಿಟಿಐ): ತಮ್ಮ ಮಗಳು ಝೋಯಿಶ್ ಇರಾನಿ ವಿರುದ್ಧದ ಆಧಾರ ರಹಿತ ಮತ್ತು ಸುಳ್ಳು ಆರೋಪಗಳಿಗೆ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ನಾಯಕರಾದ ಜೈರಾಂ ರಮೇಶ್ ಮತ್ತು ಪವನ್ ಖೇರಾ ಅವರಿಗೆ ಕೇಂದ್ರ ಸಚಿವೆ ಸ್ಮೃತಿ ಇರಾನಿ ಲೀಗಲ್ ನೋಟಿಸ್ ಕಳುಹಿಸಿದ್ದಾರೆ.

ಆರೋಪಗಳನ್ನು ಬೇಷರತ್ ವಾಪಸ್ ಪಡೆದು, ಕ್ಷಮೆಯಾಚಿಸದಿದ್ದಲ್ಲಿ ಅವರ ವಿರುದ್ಧ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದಾಗಿ ನೋಟಿಸ್‌ನಲ್ಲಿ ತಿಳಿಸಲಾಗಿದೆ.

'ಎಎಪಿ ಸರ್ಕಾರದ ಕಾರ್ಯಕ್ರಮ ಹೈಜಾಕ್ ಮಾಡಲು ಕೇಂದ್ರ ಯತ್ನ'

ನವದೆಹಲಿ (ಪಿಟಿಐ): 'ಅಸೋಲಾ ವನ್ಯಜೀವಿ ಅಭಯಾರಣ್ಯದಲ್ಲಿ ದೆಹಲಿಯ ಎಎಪಿ ನೇತೃತ್ವದ ಸರ್ಕಾರ ಆಯೋಜಿಸಿದ್ದ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರ ಹೈಜಾಕ್ ಮಾಡಲು ಪ್ರಯತ್ನಿಸುತ್ತಿದೆ. ಕಾರ್ಯಕ್ರಮ ನಿಗದಿಯಾದ ಸ್ಥಳದಲ್ಲಿ ಕಳೆದ ರಾತ್ರಿ ಪೊಲೀಸರು ಪ್ರಧಾನಿ ನರೇಂದ್ರ ಮೋದಿ ಅವರಿರುವ ಬ್ಯಾನರ್‌ಗಳನ್ನು ಅಳವಡಿಸಿದ್ದಾರೆ' ಎಂದು ಪರಿಸರ ಸಚಿವ ಗೋಪಾಲ್ ರೈ ಭಾನುವಾರ ಆರೋಪಿಸಿದರು.

ಕಾರ್ಯಕ್ರಮದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಭಾಗಿಯಾಗಬೇಕಿತ್ತು. ಆದರೆ ಈಗ ಅವರು ಪಾಲ್ಗೊಳ್ಳದಿರಲು ನಿರ್ಧರಿಸಿದ್ದಾರೆ ಎಂದು ತಿಳಿಸಿದರು.

ಎಎಪಿ ಸರ್ಕಾರದ ಬ್ಯಾನರ್‌ಗಳನ್ನು ಹರಿದು ಹಾಕಿ, ಪ್ರಧಾನಿ ಮೋದಿ ಅವರಿರುವ ಬ್ಯಾನರ್‌ಗಳನ್ನು ಅಳವಡಿಸಿದ್ದಾರೆ. ಪ್ರಧಾನಿ ಮೋದಿ ಭಾವಚಿತ್ರವಿರುವ ಬ್ಯಾನರ್‌ಗಳನ್ನು ಮುಟ್ಟದಂತೆ ಜನರಿಗೆ ಎಚ್ಚರಿಕೆ ನೀಡಿದ್ದಾರೆ. ದೆಹಲಿ ಪೊಲೀಸರು ಪ್ರಧಾನಿ ಕಾರ್ಯಾಲಯದ ನಿರ್ದೇಶನದಂತೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂದರು.

ಬಾರದ ಫಲಿತಾಂಶ: ಆಕ್ರೋಶ

ಒಂದನೇ ಪುಟದಿಂದ

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಗೆಜೆಟೆಡ್ ಪ್ರೊಬೇಷನರಿ ('ಎ' ಮತ್ತು 'ಬಿ' ವೃಂದದ ಹುದ್ದೆಗಳು) 500ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ. 2017ನೇ ಸಾಲಿನ 106 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳದೆ, ಈ ಖಾಲಿ ಹುದ್ದೆಗಳ ಭರ್ತಿಗೆ ಹೊಸತಾಗಿ ಅಧಿಸೂಚನೆ ಪ್ರಕಟವಾಗುವುದಿಲ್ಲ.

'ಕೆಎಎಸ್ (ಉಪ ವಿಭಾಗಾಧಿಕಾರಿ) ವೃಂದದಲ್ಲಿ 540 ಹುದ್ದೆಗಳಲ್ಲಿ ಶೇ25ರಷ್ಟು ಖಾಲಿ ಇದೆ. ತಹಶೀಲ್ದಾರ್ ವೃಂದದಲ್ಲಿ ಶೇ 20ಕ್ಕೂ ಹೆಚ್ಚು ಖಾಲಿ ಇವೆ. ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಇಡೀ ನೇಮಕಾತಿ ಪ್ರಕ್ರಿಯೆಯನ್ನು ವೇಳಾ ಪಟ್ಟಿಯಂತೆ, ಕೇವಲ ಒಂದು ವರ್ಷದಲ್ಲಿ ಪೂರ್ಣಗೊಳಿಸಿ ಫಲಿತಾಂಶ ಪ್ರಕಟಿಸುತ್ತದೆ. ಆದರೆ, ನಮ್ಮಲ್ಲಿ ಯಾಕೆ ಆಗುತ್ತಿಲ್ಲ ಎನ್ನುವುದು ದೊಡ್ಡ ಪ್ರಶ್ನೆ' ಎಂದು ಕೆಎಎಸ್ ಸಂಘದ ಅಧ್ಯಕ್ಷ ರವಿ ಎಂ. ತಿರ್ಲಾಪುರ ಹೇಳಿದರು.

ಕೆಪಿಎಸ್‌ಸಿ ಮುಂಭಾಗದಲ್ಲಿ ಬಿಜೆಪಿ ಶಾಸಕ ಸುರೇಶ್ ಕುಮಾರ್ ನೇತೃತ್ವದಲ್ಲಿ ಮೇ 31ರಂದು ನಡೆದ ಪ್ರತಿಭಟನೆಯ ವೇಳೆ, '106 ಹುದ್ದೆಗಳಿಗೆ ನಡೆದ ಮುಖ್ಯ ಪರೀಕ್ಷೆ ಫಲಿತಾಂಶವನ್ನು ಜೂನ್ ಒಳಗೆ ಪ್ರಕಟಿಸಲಾಗುವುದು. ಇತರ ಹುದ್ದೆಗಳ ನೇಮಕಾತಿಗೆ ನಡೆದ ಪರೀಕ್ಷೆಗಳ ಫಲಿತಾಂಶ ಸೇರಿದಂತೆ ಮಾಹಿತಿಗಳನ್ನು ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗುವುದು' ಎಂದು ಕೆಪಿಎಸ್‌ಸಿ ಅಧ್ಯಕ್ಷ ಮತ್ತು ಕಾರ್ಯದರ್ಶಿ ಆಶ್ವಾಸನೆ ನೀಡಿದ್ದರು.

'ರೈಲು, ಬಸ್ಸಿಗೆ ಬೆಂಕಿ ಹಚ್ಬೇಕಾ....'

'ಮೌಲ್ಯಮಾಪನ ಮಾಡಿ ಎಂದು ಕೈ ಮುಗಿದಿದ್ದಾಯ್ತು. ಫಲಿತಾಂಶ ಕೊಡಿ ಎಂದು ಕಾಲು ಹಿಡಿದಿದ್ದಾಯ್ತು, ಶಾಸಕ ಸುರೇಶ್‌ಕುಮಾರ್‌ರಂಥ ಹಿರಿಯರು ಬೀದಿಯಲ್ಲಿ ನಿಂತದ್ದು ಆಯಿತು. ಕೆಪಿಎಸ್‌ಸಿ ಮಾತು ಕೊಟ್ಟು ತಪ್ಪಿದ್ದೂ ಆಯಿತು. ನಾವೆಲ್ಲ ಏನ್ಮಾಡ್ಬೇಕು? ಬಿಹಾರ ಥರ ರೈಲು, ಬಸ್ಸಿಗೆ ಬೆಂಕಿ ಹಚ್ಬೇಕಾ..., ನಾವೇ ಬೆಂಕಿ ಹಚ್ಕೋಬೇಕಾ?' ಎಂದು ಪ್ರಶ್ನಿಸಿ, ನೂರಾರು ಅಭ್ಯರ್ಥಿಗಳು ಸಾಮಾಜಿಕ ಜಾಲತಾಣಗಳಲ್ಲಿ ಅಭಿಯಾನವನ್ನೇ ಆರಂಭಿಸಿದ್ದಾರೆ. 'ಹಿಂದೆ ಪ್ರಧಾನಿ ಹತ್ಯೆಯಾದಾಗಲೂ ಯುಪಿಎಸ್‌ಸಿ (ಐಎಎಸ್, ಐಪಿಎಸ್ ನೇಮಕಾತಿ) ಪರೀಕ್ಷೆ ನಡೆಸಿತ್ತು. ಕೋವಿಡ್ ಬಂದು ಪ್ರಪಂಚವೇ ನಿಂತಿದ್ದಾಗಲೂ ಫಲಿತಾಂಶ ಪ್ರಕಟಿಸಿತ್ತು. ಕೆಪಿಎಸ್‌ಸಿ ಮಾತ್ರ ನೆಪಗಳನ್ನು ಹೇಳಿ ಫಲಿತಾಂಶ ಮುಂದೂಡುತ್ತಿದೆ' ಎಂದು ಅಭ್ಯರ್ಥಿಯೊಬ್ಬರು ಕಿಡಿ ಕಾರಿದ್ದಾರೆ.

ಶಿಕ್ಷಣ



ಮೈಸೂರಿನ ಫುಡ್‌ಕ್ರಾಫ್ಟ್ ಸಂಸ್ಥೆ

‘ಫುಡ್ ಕ್ರಾಫ್ಟ್’ನಲ್ಲಿ ಡಿಪ್ಲೊಮಾ ಕೋರ್ಸ್

ಪ್ರವಾಸೋದ್ಯಮಕ್ಕೆ ವಿಪುಲ ಅವಕಾಶ ಇರುವ ಕಡೆ ಸ್ಥಳೀಯ ಯುವಜನರಿಗೆ ಆಹಾರ ತಯಾರಿಕೆ, ಆತಿಥ್ಯ ವಿಷಯಗಳಲ್ಲಿ ಕೌಶಲ ತರಬೇತಿ ನೀಡಿ ಉದ್ಯೋಗ ಅವಕಾಶ ಕಲ್ಪಿಸುವ ಉದ್ದೇಶದಿಂದ ಸರ್ಕಾರ ಫುಡ್‌ಕ್ರಾಫ್ಟ್ ಸಂಸ್ಥೆಗಳನ್ನು ಆರಂಭಿಸಿದೆ.

ಬೇದ್ರೆ ಮಂಜುನಾಥ

ದೇಶದಲ್ಲಿನ ಪ್ರವಾಸೋದ್ಯಮದ ಯಶಸ್ಸಿಗೆ ಅಲ್ಲಿನ ಹೋಟೆಲ್ ಮತ್ತು ಆತಿಥ್ಯ ವ್ಯವಸ್ಥೆಯೂ ಕಾರಣವಾಗಿದೆ. ಈ ಕಾರಣದಿಂದಾಗಿ ಇತ್ತೀಚಿನ ವರ್ಷಗಳಲ್ಲಿ ಹೋಟೆಲ್ ಆಡಳಿತ ನಿರ್ವಹಣೆ ವಿಷಯದಲ್ಲಿ ಡಿಪ್ಲೊಮಾ, ಪದವಿ ಮತ್ತು ಎಂಬಿಎ ಕೋರ್ಸ್‌ಗಳ ಅಧ್ಯಯನಕ್ಕೆ ಬೇಡಿಕೆಯೂ ಹೆಚ್ಚಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಪ್ರವಾಸೋದ್ಯಮಕ್ಕೆ ವಿಪುಲ ಅವಕಾಶವಿರುವ ಕಡೆ ಸ್ಥಳೀಯ ಯುವಜನರಿಗೆ ಆಹಾರ ತಯಾರಿಕೆ, ಆತಿಥ್ಯ ವಿಷಯಗಳಲ್ಲಿ ಕೌಶಲ ತರಬೇತಿ ನೀಡಿ ಉದ್ಯೋಗ ಅವಕಾಶಕಲ್ಪಿಸುವ ಉದ್ದೇಶದಿಂದ ಸರ್ಕಾರ ಫುಡ್‌ಕ್ರಾಫ್ಟ್ ಸಂಸ್ಥೆಗಳನ್ನು ಆರಂಭಿಸಿದೆ.

ಅಂಥದ್ದೊಂದು ಸರ್ಕಾರಿ ‘ಫುಡ್‌ಕ್ರಾಫ್ಟ್ ಇನ್‌ಸ್ಟಿಟ್ಯೂಟ್’ ಮೈಸೂರು ನಗರದ ವಸ್ತುಪ್ರದರ್ಶನ ಮೈದಾನದಲ್ಲಿದೆ. ಇದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರವಾಸೋದ್ಯಮ ಇಲಾಖೆಗಳ ವ್ಯಾಪ್ತಿಯಲ್ಲಿರುವ ಸ್ವಾಯತ್ತ ಸಂಸ್ಥೆ. ಇಲ್ಲಿ ಆಹಾರ ತಯಾರಿಕೆ, ಬೇಕರಿ ಮತ್ತು ಕನ್‌ಫೆಕ್ಷನರಿ, ಆಹಾರ ಮತ್ತು ಪಾನೀಯ, ಸ್ವಾಗತ ಮತ್ತು ಕಚೇರಿ ನಿರ್ವಹಣೆ (ಫ್ರಂಟ್ ಆಫೀಸ್), ಹೌಸ್‌ಕೀಪಿಂಗ್ ವಿಷಯಗಳಲ್ಲಿ ಡಿಪ್ಲೊಮಾ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ.

ಕೋರ್ಸ್ ಕಾರ್ನರ್

ಒಂದು ವರ್ಷದ ಡಿಪ್ಲೊಮಾ ಜೊತೆಗೆ, ಕೋರ್ಸ್ ಮುಗಿದ ನಂತರ 6 ತಿಂಗಳ ಕಾಲ ಪ್ರತಿಷ್ಠಿತ ಹೋಟೆಲ್, ರೆಸ್ಟೊರೆಂಟ್, ರೆಸಾರ್ಟ್, ಕೇಟರಿಂಗ್, ಪ್ರವಾಸೋದ್ಯಮ ಮತ್ತು ಆತಿಥ್ಯ ಉದ್ಯಮಗಳಲ್ಲಿ ಪ್ರಾಯೋಗಿಕ ತರಬೇತಿ ಮತ್ತು ಶಿಷ್ಯವೃತ್ತಿಯ ಜೊತೆ ಸ್ಟೈಪೆಂಡ್ ಕೂಡ ನೀಡಲಾಗುತ್ತಿದೆ.

ಎಲ್ಲೆಲ್ಲಿ ಉದ್ಯೋಗ?

ಪ್ರವಾಸೋದ್ಯಮವಲ್ಲದೇ, ಅಲ್ಲಲ್ಲೇ ನಡೆಯುವ ಸಭೆ ಸಮಾರಂಭಗಳಲ್ಲಿ ಕೇಟರಿಂಗ್ ವ್ಯವಸ್ಥೆಗೆ ಆದ್ಯತೆ ದೊರೆಯುತ್ತಿದೆ. ಮದುವೆ, ಸಮಾವೇಶಗಳಿಂದ ಹಿಡಿದು ಮನೆ ಮನೆಗಳಲ್ಲಿ ನಡೆಯುವ ಚಿಕ್ಕ ಪುಟ್ಟ ಸಮಾರಂಭಗಳೂ ಕೇಟರಿಂಗ್ ಮೇಲೆ ಅವಲಂಬಿತವಾಗುತ್ತಿವೆ. ಇದರಿಂದ, ಈ ಕೋರ್ಸ್ ಕಲಿತವರಿಗೆ ಸಾಕಷ್ಟು ಉದ್ಯೋಗಾವಕಾಶಗಳು ಲಭ್ಯವಾಗುತ್ತಿವೆ. ಇದರ ಜೊತೆಗೆ, ಈ ಕ್ಷೇತ್ರದಲ್ಲಿ ಪರಿಣತಿ ಸಾಧಿಸಿದವರಿಗೆ ವಿವಿಧ ರೀತಿಯ ಉದ್ಯೋಗಗಳು ಲಭ್ಯವಿವೆ. ಫುಡ್‌ಕ್ರಾಫ್ಟ್ ಸಂಸ್ಥೆಯಲ್ಲಿ ನಡೆಯುವ ಕ್ಯಾಂಪಸ್ ರೆಕ್ರೂಟ್‌ಮೆಂಟ್‌ನಲ್ಲಿಯೇ ಹಲವು ವಿದ್ಯಾರ್ಥಿಗಳು ಉದ್ಯೋಗಕ್ಕೆ ಆಯ್ಕೆಯಾಗಿರುವ ಉದಾಹರಣೆಗಳಿವೆ.

ಚಿತ್ರಗಳು: www.fcimysuru.com

ವಿದ್ಯಾರ್ಹತೆ

ದ್ವಿತೀಯ ಪಿಯುಸಿ/ಐಟಿಐ/ ಡಿಪ್ಲೊಮಾ ತೇರ್ಗಡೆಯಾಗಿರುವ 18 ರಿಂದ 25 ವರ್ಷ ವಯೋಮಿತಿಯಲ್ಲಿರುವ ಅಭ್ಯರ್ಥಿಗಳು ಈ ಕೋರ್ಸ್‌ಗೆ ಸೇರಲು ಅರ್ಹರಾಗಿರುತ್ತಾರೆ. ಯಶಸ್ವಿಯಾಗಿ ಕೋರ್ಸ್ ಪೂರ್ಣಗೊಳಿಸಿದವರಿಗೆ ಉದ್ಯೋಗಾವಕಾಶ ಬಹುತೇಕ ಖಚಿತ. ಮಾತ್ರವಲ್ಲ, ಸ್ವಯಂ ಉದ್ಯೋಗ ಆರಂಭಿಸಲೂ ಈ ತರಬೇತಿಗಳು ಪೂರಕವಾಗಿವೆ.

ಡಿಪ್ಲೊಮಾ ಕೋರ್ಸ್ ರೀತಿಯಲ್ಲಿಯೇ ಆಹಾರ ತಯಾರಿಕೆ ಮತ್ತು ಆಹಾರ ಮತ್ತು ಪಾನೀಯ ಕ್ರಾಫ್ಟ್ಸ್‌ಮನ್ ಸರ್ಟಿಫಿಕೆಟ್ ಕೋರ್ಸ್‌ಗಳನ್ನೂ ಇಲ್ಲಿ ನಡೆಸಲಾಗುತ್ತಿದೆ. ಎಸ್ಸೆಸ್ಸೆಲ್ಸಿ ಪಾಸಾದವರು ಈ ಕೋರ್ಸ್‌ಗೆ ಅರ್ಜಿ ಸಲ್ಲಿಸಬಹುದು.

ಅಲ್ಪಾವಧಿ ತರಬೇತಿ

ಇದರ ಜೊತೆಗೆ ರಾಷ್ಟ್ರೀಯ ವೃತ್ತಿ ತರಬೇತಿ ಪರಿಷತ್ (NCVT) ಆಗಾಗ್ಗೆ ತರಬೇತಿಗಳನ್ನು ನಡೆಸುತ್ತದೆ. ಇದರಲ್ಲಿ ಆಹಾರ ತಯಾರಿಕೆ, ಬೇಕರಿ ಮತ್ತು ಕನ್‌ಫೆಕ್ಷನರಿ, ಆಹಾರ ಮತ್ತು ಪಾನೀಯ, ಸ್ವಾಗತ ಮತ್ತು ಕಚೇರಿ ನಿರ್ವಹಣೆ (ಫ್ರಂಟ್ ಆಫೀಸ್), ಹೌಸ್‌ಕೀಪಿಂಗ್ ವಿಷಯಗಳಲ್ಲಿನ ಅಲ್ಪಾವಧಿಯ ಕೌಶಲ ತರಬೇತಿಗಳೂ (ಕ್ರ್ಯಾಷ್‌ಕೋರ್ಸ್) ಇವೆ. ಈ ತರಬೇತಿಗಳಿಗೆ ವೃತ್ತಿ ನಿರತ ಕಾರ್ಮಿಕರು, ಬೀದಿಬದಿ ಗಾಡಿಗಳಲ್ಲಿ ಕಾಫಿ, ಟೀ, ತಿಂಡಿ, ಊಟದ ಹೋಟೆಲ್ ನಡೆಸುವವರು, ಚಿಕ್ಕಪುಟ್ಟ ಕ್ಯಾಂಟಿನ್, ಹೋಟೆಲ್ ನಿರ್ವಹಿಸುವವರು ಮತ್ತು ಕಾರ್ಮಿಕರು ಹಾಗೂ ಆಸಕ್ತ ಯುವಜನರು ಸೇರಬಹುದು.


ಹಾಗೆಯೇ ಯುವಕ ಸಂಘ, ಯುವತಿ ಮಂಡಳಿ, ಸ್ವಸಹಾಯ ಸಂಘಗಳ ಆಸಕ್ತ ಯುವಜನರು ಕನಿಷ್ಠ 30 ಸಂಖ್ಯೆಯಲ್ಲಿ ಒಟ್ಟು ಸೇರಿ ಆಹಾರ ತಯಾರಿಕೆ ಕ್ಷೇತ್ರಕ್ಕೆ ಸಂಬಂಧಿಸಿದ ತಮ್ಮ ಆಯ್ಕೆಯ ವಿಷಯದಲ್ಲಿ ತರಬೇತಿ ನೀಡಬೇಕೆಂದು ಬೇಡಿಕೆ ಸಲ್ಲಿಸಿದಲ್ಲಿ ಅಂತಹವರಿಗಾಗಿಯೇ ವಿಶೇಷ ಕ್ರ್ಯಾಷ್‌ಕೋರ್ಸ್‌ಗಳನ್ನು ಕೂಡ ಆಯೋಜಿಸಲಾಗುತ್ತಿದೆ. ತರಬೇತಿ ಅವಧಿಯಲ್ಲಿ ಸ್ಟೈಪೆಂಡ್ ಹಾಗೂ ದೂರದಿಂದ ಬರುವವರಿಗೆ ಪ್ರಯಾಣ ಭತ್ಯೆ ನೀಡಲಾಗುತ್ತಿದೆ. ವಯಸ್ಸಿನ ಬೇಧವಿಲ್ಲದೇ ಈ ತರಬೇತಿಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಈ ಜಾಲತಾಣಕ್ಕೆ ಭೇಟಿ ನೀಡಿ: http://fcimysuru.com. ಸಂಪರ್ಕಕ್ಕೆ ದೂರವಾಣಿ ಸಂಖ್ಯೆಗಳು: 0821-2974388 / 2445388 ಮೊಬೈಲ್: 6362018821



ಎಂ.ಎಸ್ಸಿ(ಮನಃಶಾಸ್ತ್ರ) ಉದ್ಯೋಗಾವಕಾಶ ಹೇಗಿದೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್

1. ನಾನು ದ್ವಿತೀಯ ಪಿಯುಸಿ (ಪಿಸಿಎಂಬಿ) ಓದುತ್ತಿದ್ದೇನೆ. ಮುಂದೆ ಬಿಎಸ್ಸಿ (ಮನಃಶಾಸ್ತ್ರ) ಮಾಡಬೇಕು ಎಂದುಕೊಂಡಿದ್ದೇನೆ. ಈ ವಿಷಯವನ್ನು ಬೋಧಿಸುವ ಬೆಂಗಳೂರಿನ ಉತ್ತಮ ಕಾಲೇಜಿನ ಬಗ್ಗೆ ಮಾಹಿತಿ ನೀಡಿ. ಇದೇ ವಿಷಯದಲ್ಲಿ ಎಂ.ಎಸ್ಸಿ ಮಾಡಿದರೆ ಉದ್ಯೋಗಾವಕಾಶಗಳು ಹೇಗಿವೆ ತಿಳಿಸಿ. ಬಿಎಸ್ಸಿ (ಮನಃಶಾಸ್ತ್ರ) ನಾಲ್ಕು ವರ್ಷದ ಕೋರ್ಸ್ ಇದೆ ಎಂದು ಕೇಳಿದ್ದೇನೆ. ಅದಕ್ಕೆ ಸಿಇಟಿ ಬರೆಯಬೇಕೆ? ಎಂಬ ಗೊಂದಲವಿದೆ. ಆ ಬಗ್ಗೆಯೂ ಮಾಹಿತಿ ನೀಡಿ.

ರಶ್ಮಿ, ಬೆಂಗಳೂರು

ಸಾಮಾನ್ಯವಾಗಿ ಬಿ.ಎಸ್ಸಿ (ಮನಃಶಾಸ್ತ್ರ) ಮೂರು ವರ್ಷದ ಕೋರ್ಸ್ ಆಗಿರುತ್ತದೆ. ಪಿಇಎಸ್ ಸೇರಿದಂತೆ ವಿವಿಧ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ನಾಲ್ಕು ವರ್ಷದ ಬಿಎಸ್ಸಿ (ಮನಃಶಾಸ್ತ್ರ-ಆನರ್ಸ್) ಕೋರ್ಸ್ ಮಾಡಬಹುದು. ಕೆಲವು ಕಾಲೇಜುಗಳಲ್ಲಿ ಪಿಯುಸಿ ಫಲಿತಾಂಶದ ಆಧಾರದ ಮೇಲೆ ನೇರವಾಗಿ ಪ್ರವೇಶ ಪಡೆಯಬಹುದು ಮತ್ತು ಕೆಲವು ಪ್ರತಿಷ್ಠಿತ ವಿಶ್ವ ವಿದ್ಯಾಲಯಗಳಲ್ಲಿ ಪ್ರವೇಶ ಪರೀಕ್ಷೆಯಿರುತ್ತದೆ. ಉತ್ತಮ ಕಾಲೇಜುಗಳ ಆಯ್ಕೆ ಪ್ರಕ್ರಿಯೆ ಕುರಿತ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=DmaXk-MuoOI

2. ನಾನು ಬಿಬಿಎ ಮುಗಿಸಿ, ಕೆಎಎಸ್ ಪರೀಕ್ಷೆಗೆ ತಯಾರಿ ನಡೆಸಿದ್ದೇನೆ. ಮುಂದೆ ಸ್ನಾತಕೋತ್ತರ ಪದವಿ ಮಾಡಬೇಕು ಎಂದುಕೊಂಡಿದ್ದೇನೆ. ದೂರಶಿಕ್ಷಣದ ಮೂಲಕ ಎಂಬಿಎ, ಎಂ.ಎ. ಎಂ.ಕಾಂ ಬಿಟ್ಟರೆ ಬೇರೆ ಯಾವ ಕೋರ್ಸ್ ಮಾಡಬಹುದು ತಿಳಿಸಿ.

ಕುಸುಮಾ, ಹಾಸನ

ಈಗ 40ಕ್ಕೂ ಹೆಚ್ಚಿನ ವಿಶ್ವವಿದ್ಯಾಲಯಗಳಲ್ಲಿ ಸುಮಾರು 375 ಪದವಿ ಕೋರ್ಸ್‌ಗಳನ್ನು ದೂರಶಿಕ್ಷಣದ ಮುಖಾಂತರ ಮಾಡಬಹುದು. ಎಂ.ಎ, ಎಂ.ಕಾಂ, ಎಂ.ಬಿ.ಎ, ಎಂ.ಎಸ್ಸಿ, ಎಂ.ಸಿ.ಎ ಮತ್ತಿತರ ಸ್ನಾತಕೋತ್ತರ ಕೋರ್ಸ್‌ಗಳನ್ನು ಈಗ ದೂರಶಿಕ್ಷಣದ ಮುಖಾಂತರ ಮಾಡಲು ಅವಕಾಶವಿದೆ. ಕೋರ್ಸ್ ಆಯ್ಕೆಯ ಮುನ್ನ, ದೂರ ಶಿಕ್ಷಣ ಬ್ಯೂರೊ, ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ), ಮಾನ್ಯತೆ ಇದೆಯೇ ಎಂದು ಪರಿಶೀಲಿಸಿ. ಹೆಚ್ಚಿನ ಮಾಹಿತಿಗಾಗಿ ಗಮನಿಸಿ: https://www.classcentral.com/report/india-online-degrees/

3. ಬಿ.ಟೆಕ್ ದಾಖಲಾದ ಆರಂಭದ ದಿನಗಳನ್ನು ಹೇಗೆ ಸದುಪಯೋಗ ಪಡಿಸಿಕೊಳ್ಳಬೇಕು? ಕಾಲೇಜಿನ ತರಗತಿ ಹೊರತಾಗಿ, ನಮ್ಮ ಪ್ರಯತ್ನ ಹೇಗಿರಬೇಕು ಎಂದು ತಿಳಿಸಿ ಸರ್.

ಅಭಿಷೇಕ್, ಕಲಬುರ್ಗಿ

ಸಕಾರಾತ್ಮಕವಾದ ಆಲೋಚನೆಯಿಂದ ಈ ಪ್ರಶ್ನೆಯನ್ನು ಕೇಳಿರುವ ನಿಮಗೆ ಅಭಿನಂದನೆಗಳು. ಕಾಲೇಜುಗಳಲ್ಲಿ, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಸಂವಹನದ ಕೊರತೆಯಿಂದ ಪ್ರಸ್ತುತ ಕಲಿಕೆಯ ವಿಧಾನಗಳು ಮೇಲ್ನೋಟಕ್ಕೆ ನಿಷ್ಪರಿಣಾಮಕಾರಿ ಎನಿಸುವುದು ಸಹಜ. ವೃತ್ತಿ ಜೀವನದ ನಿಮ್ಮ ಕನಸುಗಳು ನನಸಾಗಬೇಕಾದರೆ, ನಿಮ್ಮ ಕಲಿಕೆ ಪರಿಣಾಮಕಾರಿಯಾಗಬೇಕು. ಹಾಗಾಗಿ, ಈ ಸಲಹೆಗಳನ್ನು ಗಮನಿಸಿ:

- ಪ್ರಶ್ನೆಗಳನ್ನು ಕೇಳುವ ಸಾಮರ್ಥ್ಯ ಪರಿಣಾಮಕಾರಿ ಕಲಿಕೆಯಲ್ಲಿ ನಿರ್ಣಾಯಕವಾಗುತ್ತದೆ. ಏಕೆಂದರೆ, ಪ್ರಶ್ನೆಗಳು ತರಗತಿಗಳಲ್ಲಿ ಚರ್ಚೆಯನ್ನು ಹುಟ್ಟುಹಾಕುತ್ತದೆ ಮತ್ತು ಸ್ವಗತದ ಆಯಾಸವನ್ನು ನಿವಾರಿಸುತ್ತದೆ. ಏಕತಾನತೆ ಮತ್ತು ಮಂದವಾದ ತರಗತಿಯ ಪರಿಸರ ಇದ್ದಕ್ಕಿದ್ದಂತೆ ಜ್ಞಾನೋದಯವನ್ನು ಬೆಳಗಿಸುವ ಉತ್ತೇಜಕ ಪ್ರಯತ್ನವಾಗುತ್ತದೆ. ಅದ್ದರಿಂದ, ಪ್ರಶ್ನೆಗಾರಿಕೆ ನಿಮ್ಮ ಕಲಿಕೆಯ ಪ್ರಮುಖ ತಂತ್ರವಾಗಿರಲಿ.
- ಸಕ್ರಿಯವಾದ ಪ್ರಶ್ನೆಗಾರಿಕೆಯಿಂದ ನಿಮ್ಮ ವಿಮರ್ಶಾತ್ಮಕ ಚಿಂತನಾ ಕೌಶಲ ವೃದ್ಧಿಯಾಗಿ, ಯಾವುದೇ ವಿಷಯದ ಬಗ್ಗೆ ಸ್ಪಷ್ಟವಾದ ಒಳನೋಟ ದೊರಕುತ್ತದೆ.
- ತಂತ್ರಜ್ಞಾನದ ಕೋರ್ಸ್‌ಗಳಲ್ಲಿ ತರಗತಿಯ ಹೊರಗಿನ ಅಧ್ಯಯನ ಮುಖ್ಯವಾಗುತ್ತದೆ. ಹಾಗಾಗಿ, ಕಾಲೇಜಿನ ಗ್ರಂಥಾಲಯದಲ್ಲಿ ಮತ್ತು ಅಂತರ್ಜಾಲದಲ್ಲಿ ಲಭ್ಯವಿರುವ ನಿಯತಕಾಲಿಕೆಗಳು, ಜರ್ನಲ್ಸ್, ಕೇಸ್ ಸ್ಟಡೀಸ್, ಪ್ರಾಜೆಕ್ಟ್ ರಿಪೋರ್ಟ್ಸ್, ಪ್ರಬಂಧಗಳು ಮತ್ತು ಸಂಶೋಧನಾತ್ಮಕ ಗ್ರಂಥಗಳನ್ನು ಅಧ್ಯಯನ ಮಾಡಬೇಕು.
- ಜ್ಞಾನಾರ್ಜನೆಯ ಜೊತೆಗೆ ಕೌಶಲಾಭಿವೃದ್ಧಿಯ ಬಗ್ಗೆಯೂ ಗಮನವಿರಲಿ. ವೃತ್ತಿ ಸಂಬಂಧಿತ ಕೌಶಲಗಳ ಜೊತೆಗೆ ಪ್ರಾಥಮಿಕ ಕೌಶಲಗಳನ್ನು (ಯೋಜನೆ, ಸಮಯದ ನಿರ್ವಹಣೆ, ಸಂವಹನ, ಅಂತರ್-ವೈಯಕ್ತಿಕ ನೈಪುಣ್ಯ, ನಾಯಕತ್ವದ ಕೌಶಲಗಳು ಇತ್ಯಾದಿ) ಬೆಳೆಸಿಕೊಳ್ಳಿ. ಇದರಿಂದ ಕ್ಯಾಂಪಸ್ ನೇಮಕಾತಿ ಸುಲಭವಾಗಿ, ನಿಮ್ಮ ವೃತ್ತಿ ಜೀವನವನ್ನು ಉಜ್ವಲವಾಗಿ ರೂಪಿಸಿಕೊಳ್ಳಬಹುದು.

4. ನಾನು ಪದವಿ ಬಿ.ವೊಕ್ (ಬ್ಯಾಚುಲರ್ ಇನ್ ವೊಕೇಷನಲ್ ಸ್ಟಡೀಸ್) ಮುಗಿಸಿದ್ದು, ಈಗ ನಾನು ಎಂಎಸ್ಸಿ (ಡಯಟಿಕ್ಸ್ ಮತ್ತು ಫುಡ್ ಸರ್ವೀಸ್ ಮ್ಯಾನೇಜ್‌ಮೆಂಟ್)) ಕೋರ್ಸ ಅನ್ನು ಇಗ್ನೊದಿಂದ ಪಡೆಯುತ್ತಿದ್ದೇನೆ. ಮುಂದೆ ಇರುವ ಅವಕಾಶಗಳ ಬಗ್ಗೆ ತಿಳಿಸಿ.

ಹೆಸರು, ಊರು ತಿಳಿಸಿಲ್ಲ

ಜೀವನ ಶೈಲಿ ಮತ್ತು ಅಗತ್ಯಗಳು ಬದಲಾಗಿರುವ ಈ ಕಾಲಘಟ್ಟದಲ್ಲಿ ಸಿದ್ಧಪಡಿಸಿದ ಆಹಾರ ಪದಾರ್ಥಗಳಿಗೆ ಹೆಚ್ಚಿನ ಬೇಡಿಕೆಯಿದ್ದು ಆಹಾರ ವಿಜ್ಞಾನ, ಆರೋಗ್ಯ ಮತ್ತು ಪೌಷ್ಟಿಕಾಂಶ ವಿಜ್ಞಾನ (ನ್ಯೂಟ್ರಿಷನ್) ಮುಂಚೂಣಿಯಲ್ಲಿದೆ. ಎಂ.ಎಸ್ಸಿ ಕೋರ್ಸ್ ನಂತರ, ಸರ್ಕಾರಿ ಮತ್ತು ಖಾಸಗಿ ಕ್ಷೇತ್ರದ ಆಹಾರ ಪದಾರ್ಥ ಮತ್ತು ಪಾನೀಯ ತಯಾರಿಕಾ ಉದ್ದಿಮೆಗಳು, ಹೋಟೆಲ್‌ಗಳು ಮತ್ತು ರೆಸ್ಟೊರೆಂಟ್‌ಗಳು, ಆಸ್ಪತ್ರೆಗಳು, ಫಿಟ್ನೆಸ್ ಸೆಂಟರ್ಸ್, ಶಿಕ್ಷಣ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು, ಆಹಾರ ಪರೀಕ್ಷಾ ಪ್ರಯೋಗಾಲಯಗಳು, ಸಾವಯವ ಉದ್ದಿಮೆಗಳು, ಆಹಾರ ಸಂಬಂಧಿತ (ಸಂರಕ್ಷಕಗಳು, ಬಣ್ಣಗಳು ಮತ್ತು ಸ್ವಾದಗಳು ಇತ್ಯಾದಿ) ಉದ್ದಿಮೆಗಳು ಸೇರಿದಂತೆ ಹಲವು ಕಡೆ ವಿಪುಲ ಉದ್ಯೋಗಾವಕಾಶಗಳಿವೆ.

ಇನ್ನಷ್ಟು ಪ್ರಶ್ನೋತ್ತರಗಳಿಗೆ www. prajavani.net/Shikshana ಇಲ್ಲಿಗೆ ಭೇಟಿ ನೀಡಿ.

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ದ ರೋಡ್ಸ್ ಸ್ಕಾಲರ್‌ಷಿಪ್ಸ್ ಫಾರ್ ಇಂಡಿಯಾ 2022-23

ವಿದ್ಯಾರ್ಥಿ ವೇತನ ಕೈಪಿಡಿ

ವಿವರ: ಪದವೀಧರರಿಗೆ ಆರ್ಥಿಕ ನೆರವು ನೀಡುವುದು ರೋಡ್ಸ್ ಟ್ರಸ್ಟ್‌ನ (ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ) ಒಂದು ಉಪಕ್ರಮವಾಗಿದೆ. ಇದು ಜಾಗತಿಕ ಸವಾಲುಗಳೊಂದಿಗೆ ಸ್ಪರ್ಧಿಗಿಳಿಯುವ, ಇತರರ ಸೇವೆಗೆ ಬದ್ಧರಾಗಿರುವ ವಿದ್ಯಾರ್ಥಿಗಳಿಗೆ ನೀಡುವ ಆರ್ಥಿಕ ನೆರವು.

ವಿದ್ಯಾರ್ಹತೆ: ಕನಿಷ್ಠ 18 ವರ್ಷ ವಯಸ್ಸಾಗಿರಬೇಕು. ಅಭ್ಯರ್ಥಿಗಳು 10 ಅಥವಾ 12ನೇ ತರಗತಿ ಪಾಸಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು ಅಥವಾ ಅಂತಿಮ ವರ್ಷದಲ್ಲಿರಬೇಕು. ಇಲ್ಲವೇ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಲ್ಲಿ ಪದವಿ ಪೂರೈಸಿರಬೇಕು. ಜುಲೈ 2023 ರೊಳಗೆ ಪದವಿ ಪೂರ್ಣ ಗೊಳಿಸುವವರು ಅರ್ಜಿ ಸಲ್ಲಿಸಬಹುದು. ಅಭ್ಯರ್ಥಿಗಳು ವಿಶ್ವವಿದ್ಯಾಲಯದ ಗುಣಮಟ್ಟ ಅಥವಾ ಉನ್ನತ ಮಟ್ಟದ ಪ್ರಕಾರದಲ್ಲಿ ಇಂಗ್ಲಿಷ್ ಭಾಷಾ ಪ್ರಾವೀಣ್ಯ ಪ್ರದರ್ಶಿಸಲು ಶಕ್ತರಾಗಿರಬೇಕು.


ಆರ್ಥಿಕ ನೆರವು: ಪೂರ್ಣ ಸಮಯದ ಸ್ನಾತಕೋತ್ತರ ಅಧ್ಯಯನಕ್ಕಾಗಿ ಸಂಪೂರ್ಣ ಅನುದಾನಿತ ವಿದ್ಯಾರ್ಥಿವೇತನ

ಅರ್ಜಿ ಸಲ್ಲಿಕೆಗೆ ಕೊನೆ ದಿನ: ಆಗಸ್ಟ್ 1, 2022

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ www.b4s.in/praja/TRS2 ಲಿಂಕ್ ನೋಡಿ.

ಕೃಪೆ: buddy4study.com

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಸದ್ಗುಣ ಮತ್ತು ದುರ್ಗುಣಗಳ ವ್ಯತ್ಯಾಸ ತಿಳಿಯದಾದಾಗ ನಮ್ಮ ಬೆಳವಣಿಗೆ ನಿಲ್ಲುತ್ತದೆ.

– ಮಹಾತ್ಮ ಗಾಂಧಿ

ಉಪನೋಂದಣಿ ಕಚೇರಿಗಳಲ್ಲಿನ ಅಕ್ರಮಗಳಿಗೆ ಕಡಿವಾಣ ಬೀಳಲಿ

ಬೆಂಗಳೂರು ನಗರದ ವ್ಯಾಪ್ತಿಯಲ್ಲಿರುವ 43 ಉಪನೋಂದಣಿ ಕಚೇರಿಗಳಲ್ಲಿ ಇತ್ತೀಚೆಗೆ ದಿಢೀರ್ ತಪಾಸಣೆ ನಡೆಸಿರುವ ಲೋಕಾಯುಕ್ತ ಪೊಲೀಸ್ ವಿಭಾಗದ ಅಧಿಕಾರಿಗಳು, ಅಲ್ಲಿ ಹಲವು ಬಗೆಯ ಅಕ್ರಮಗಳು ಮತ್ತು ಭ್ರಷ್ಟಾಚಾರ ನಡೆಯುತ್ತಿರುವುದನ್ನು ಪತ್ತೆಹಚ್ಚಿದ್ದಾರೆ. ಪ್ರತೀ ಉಪನೋಂದಣಿ ಕಚೇರಿಯಲ್ಲಿ ಕಂಡುಬಂದಿರುವ ಅಕ್ರಮ ಹಾಗೂ ನಿಯಮ ಉಲ್ಲಂಘನೆ ಕುರಿತು ವಿಸ್ತೃತ ವಿವರಗಳೊಂದಿಗೆ ತನಿಖಾ ತಂಡವು ಲೋಕಾಯುಕ್ತರಿಗೆ ವರದಿ ಸಲ್ಲಿಸಿದೆ. ಈ ವರದಿ ಆಧರಿಸಿ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಅಡಿಯಲ್ಲಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ಲೋಕಾಯುಕ್ತ, ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರು ವಿಚಾರಣೆ ಆರಂಭಿಸಿದ್ದಾರೆ. ರಾಜ್ಯ ರಾಜಧಾನಿಯ ವ್ಯಾಪ್ತಿಯಲ್ಲಿರುವ ಉಪ ನೋಂದಣಿ ಕಚೇರಿಗಳು ಭ್ರಷ್ಟಾಚಾರ ಮತ್ತು ಅಕ್ರಮದ ಕೂಪಗಳಾಗಿದ್ದು, ಬಹುಪಾಲು ಕಚೇರಿಗಳು ದಲ್ಲಾಳಿಗಳ ಹಿಡಿತದಲ್ಲೇ ಇವೆ ಎಂಬುದನ್ನು ಲೋಕಾಯುಕ್ತ ಪೊಲೀಸರ ವರದಿ ಜಾಹೀರುಗೊಳಿಸಿದೆ. ತಪಾಸಣೆಯ ಅವಧಿಯಲ್ಲೇ ಹಲವು ಉಪನೋಂದಣಿ ಅಧಿಕಾರಿಗಳ ಕಚೇರಿಗಳ ಒಳಗೆ ದಲ್ಲಾಳಿಗಳು ಹಾಜರಿದ್ದರು, ಅವರ ಬಳಿ ಅನ್ಯ ವ್ಯಕ್ತಿಗಳಿಗೆ ಸಂಬಂಧಿಸಿದ ಕಡತಗಳು ಇದ್ದವು ಎಂಬುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ. ರಿಯಲ್ ಎಸ್ಟೇಟ್ ಉದ್ಯಮಿಗಳು ಮತ್ತು ಉದ್ಯಮಗಳ ಪರವಾಗಿ ಕೆಲಸ ಮಾಡುವ ದಲ್ಲಾಳಿಗಳು ತರುವ ದಾಖಲೆಗಳನ್ನು ಆದ್ಯತೆಯ ಮೇಲೆ ನೋಂದಣಿ ಮಾಡಲಾಗುತ್ತಿದೆ. ಜನಸಾಮಾನ್ಯರು ಉಪನೋಂದಣಿ ಕಚೇರಿಗಳ ಬಾಗಿಲಲ್ಲಿ ಕಾದು ಹೈರಾಣಾಗಬೇಕಾದ ಸ್ಥಿತಿ ಇದೆ ಎಂಬ ಉಲ್ಲೇಖವೂ ವರದಿಯಲ್ಲಿದೆ. ಬಹುತೇಕ ಉಪನೋಂದಣಿ ಕಚೇರಿಗಳಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಯು ಹಾಜರಾತಿ ಕಡತಕ್ಕೆ ಸಹಿ ಹಾಕುತ್ತಿಲ್ಲ, ಹೊರಗುತ್ತಿಗೆ ಸಿಬ್ಬಂದಿಗೆ ಹಾಜರಾತಿ ವಹಿಯೇ ಇಲ್ಲ, ನಗದು ಘೋಷಿಸುವ ವ್ಯವಸ್ಥೆಯು ಕಾಟಾಚಾರಕ್ಕೆ ಪಾಲನೆಯಾಗುತ್ತಿದೆ, ಈ ಕಚೇರಿಗಳಲ್ಲಿ ಸಿ.ಸಿ ಟಿ.ವಿ ಕ್ಯಾಮೆರಾಗಳ ಕಣ್ಗಾವಲು ಇಲ್ಲ, ಕಚೇರಿಯಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಯು ಗುರುತಿನ ಚೀಟಿ ಧರಿಸದೇ ಕಾರ್ಯನಿರ್ವಹಿಸುತ್ತಾರೆ ಎಂದು ತನಿಖಾ ತಂಡದ ವರದಿ ಹೇಳಿದೆ. ನೋಂದಣಿ ಪ್ರಕ್ರಿಯೆಯಲ್ಲಿ 'ಪ್ಯಾನ್' ಸಂಖ್ಯೆ ನಮೂದಿಸದೇ ಆದಾಯ ತೆರಿಗೆ ವಂಚನೆಗೆ ಸರ್ಕಾರಿ ಅಧಿಕಾರಿಗಳೇ ಸಹಕರಿಸುತ್ತಿರುವುದು ಪತ್ತೆಯಾಗಿದೆ. 'ಆಡಳಿತ ವೆಚ್ಚ'ದ ಹೆಸರಿನಲ್ಲಿ ಜನರಿಂದ ಹಣ ವಸೂಲಿ ಮಾಡುತ್ತಿರುವುದು, ಬೆಂಗಳೂರು ನಗರದ ವ್ಯಾಪ್ತಿಯ ಯಾವುದೇ ಭಾಗದ ಆಸ್ತಿಯನ್ನು ಯಾವುದೇ ಉಪನೋಂದಣಿ ಕಚೇರಿಯಲ್ಲಿ ನೋಂದಣಿ ಮಾಡಬಹುದಾದ ಅವಕಾಶವನ್ನು ದುರ್ಬಳಕೆ ಮಾಡುತ್ತಿರುವುದು, ಅಗತ್ಯ ದಾಖಲೆಗಳೇ ಇಲ್ಲದೆ ಕಂದಾಯ ನಿವೇಶನಗಳನ್ನು ನೋಂದಣಿ ಮಾಡುತ್ತಿರುವುದು ಸೇರಿದಂತೆ ಹಲವು ಬಗೆಯ ಅಕ್ರಮಗಳು ನಿರಂತರವಾಗಿ ನಡೆಯುತ್ತಿವೆ ಎಂಬುದನ್ನು ಲೋಕಾಯುಕ್ತ ಪೊಲೀಸರ ತಪಾಸಣಾ ವರದಿ ತೆರೆದಿಟ್ಟಿದೆ. ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಸರ್ವರ್ ಪದೇ ಪದೇ ಡೌನ್ ಆಗುತ್ತಿರುವುದರ ಬಗ್ಗೆಯೂ ತನಿಖಾ ತಂಡ ಸಂಶಯ ವ್ಯಕ್ತಪಡಿಸಿದೆ.



ಉಪನೋಂದಣಿ ಕಚೇರಿಗಳಿಗೆ ಕಾಲಿಡಲು ಜನರು ಭಯಪಡಬೇಕಾದ ಪರಿಸ್ಥಿತಿ ಇದೆ

ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ರಾಜ್ಯ ಸರ್ಕಾರದ ಪ್ರಮುಖ ವರಮಾನ ಮೂಲಗಳಲ್ಲಿ ಒಂದು. ಸ್ಥಿರಾಸ್ತಿಗಳ ಖರೀದಿ, ಜನರಲ್ ಪವರ್ ಆಫ್ ಅಟಾರ್ನಿ (ಜಿಪಿಎ), ಕ್ರಯ ಒಪ್ಪಂದ, ದಾನಪತ್ರಗಳ ನೋಂದಣಿ, ವಿವಾಹ ನೋಂದಣಿ, ಋಣಭಾರ ಪ್ರಮಾಣಪತ್ರ (ಇಸಿ) ವಿತರಣೆ ಈ ಇಲಾಖೆಯ ಮೂಲಕ ನಡೆಯುತ್ತದೆ. ರಾಜ್ಯ ಸರ್ಕಾರದ ಒಟ್ಟು ವರಮಾನದ ಶೇಕಡ 11ರಷ್ಟನ್ನು ಈ ಇಲಾಖೆಯಿಂದಲೇ ಸಂಗ್ರಹಿಸುವ ಗುರಿ ಇದೆ. ಇಂತಹ ಮಹತ್ವದ ಇಲಾಖೆಯು ಅತ್ಯಂತ ಜನಸ್ನೇಹಿಯಾಗಿ, ಸುಲಭವಾಗಿ ಸರ್ಕಾರಿ ಸೇವೆಗಳನ್ನು ಜನರಿಗೆ ಒದಗಿಸಬೇಕಿತ್ತು. ಆದರೆ, ಉಪನೋಂದಣಿ ಕಚೇರಿಗಳಿಗೆ ಕಾಲಿಡಲು ಜನರು ಭಯಪಡಬೇಕಾದ ಪರಿಸ್ಥಿತಿ ಇದೆ. ಈ ಕಚೇರಿಗಳು ಸುಲಿಗೆಯ ತಾಣಗಳಾಗಿದ್ದು, ಜನರನ್ನು ಪೀಡಿಸಿ, ನರಕಯಾತನೆ ನೀಡುತ್ತಿರುವುದು ಗುಟ್ಟಾಗಿ ಉಳಿದಿಲ್ಲ. ನೋಂದಣಿ ಪ್ರಕ್ರಿಯೆಯಲ್ಲಿನ ಲೋಪಗಳಿಂದ ವ್ಯಾಜ್ಯಗಳೂ ಸೃಷ್ಟಿಯಾಗಿ, ಜನರು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಈ ಸ್ಥಿತಿ ಬೆಂಗಳೂರಿನ 43 ಉಪನೋಂದಣಿ ಕಚೇರಿಗಳಿಗೆ ಮಾತ್ರ ಸೀಮಿತವಾಗಿಲ್ಲ. ರಾಜ್ಯದಾದ್ಯಂತ ಇದೇ ಪರಿಸ್ಥಿತಿ ಇದೆ. ನೋಂದಣಿ ಮತ್ತು ಮುದ್ರಾಂಕ ಇಲಾಖೆಯನ್ನು ಸರ್ಕಾರ ವರಮಾನದ ಮೂಲವಾಗಿ ಮಾತ್ರ ನೋಡುತ್ತಿರುವುದು ಸರಿಯಲ್ಲ. ಇಲಾಖೆಯಲ್ಲಿ ತಂತ್ರಜ್ಞಾನದ ಬಳಕೆ ಬರೀ ಬಾಯುಪಚಾರದ ಮಾತಾಗಿ ಉಳಿದಿದೆ. ಕೆಲವು ವರ್ಷಗಳಿಂದ ಈಚೆಗೆ ಹಲವು ಯೋಜನೆಗಳನ್ನು ಜಾರಿಗೊಳಿಸಿದ್ದು, ಯಾವುವೂ ಈ ಇಲಾಖೆಯ ಸಮಸ್ಯೆಗೆ ಪರಿಹಾರ ಒದಗಿಸಿಲ್ಲ. ಹೀಗಾಗಿ ದಲ್ಲಾಳಿಗಳ ಕಪಿಮುಷ್ಟಿಯಿಂದ ನೋಂದಣಿ ಇಲಾಖೆ ಹೊರಬರಲು ಸಾಧ್ಯವಾಗಿಲ್ಲ. ನೂತನ ತಂತ್ರಜ್ಞಾನವನ್ನು ಪರಿಪೂರ್ಣವಾಗಿ ಅಳವಡಿಸಿಕೊಂಡು ಜನಸ್ನೇಹಿಯಾದ ಮತ್ತು ಭ್ರಷ್ಟಾಚಾರಕ್ಕೆ ಅವಕಾಶವಿಲ್ಲದಂತಹ ಕ್ರಮಗಳನ್ನು ಇಲಾಖೆಯು ತಕ್ಷಣ ಅಳವಡಿಸಿಕೊಳ್ಳಬೇಕಿದೆ. ನೋಂದಣಿ ಇಲಾಖೆಯ ವಹಿವಾಟನ್ನು ಸಂಪೂರ್ಣ ಪಾರದರ್ಶಕಗೊಳಿಸುವ ಮೂಲಕ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕಿದೆ. ಇಲಾಖೆಯ ಎಲ್ಲ ಹಂತಗಳಲ್ಲಿ ಮೇಲುಸ್ತುವಾರಿ ಮತ್ತು ನಿಗಾ ವ್ಯವಸ್ಥೆ ಮಾಡಬೇಕು. ಎಲ್ಲ ಕಚೇರಿಗಳನ್ನೂ ಸಿ.ಸಿ. ಟಿ.ವಿ ಕ್ಯಾಮೆರಾ ಕಣ್ಗಾವಲಿಗೆ ತರುವ ಮೂಲಕ ದಲ್ಲಾಳಿಗಳನ್ನು ಹೊರಹಾಕುವ ಕೆಲಸ ಮಾಡಬೇಕು. ನೋಂದಣಿ ಕಚೇರಿಗಳಲ್ಲಿ ಜನಸ್ನೇಹಿ ಮತ್ತು ಭ್ರಷ್ಟಾಚಾರರಹಿತ ಆಡಳಿತ ಎಂಬುದು ಬರೀ ಮಾತಿಗೆ ಸೀಮಿತವಾಗದಂತೆ ನಡೆದುಕೊಳ್ಳುವ ಬದ್ಧತೆಯನ್ನು ರಾಜ್ಯ ಸರ್ಕಾರ ಪ್ರದರ್ಶಿಸಬೇಕು.

ದಿನದ ಟ್ವೀಟ್

ಒತ್ತಡಕ್ಕೆ ಒಳಗಾಗಲಿಲ್ಲ



ನಾನು ಒಲಿಂಪಿಕ್ ಚಾಂಪಿಯನ್ ಎಂಬ ಸಂಗತಿಯಿಂದ ಒತ್ತಡಕ್ಕೆ ಒಳಗಾಗಲಿಲ್ಲ. ಮೂರನೇ ಥ್ರೋ ನಂತರವೂ ನಾನು ಉತ್ತಮ ಸಾಮರ್ಥ್ಯ ತೋರುವ ವಿಶ್ವಾಸವಿತ್ತು. ಅದರಲ್ಲಿ ಯಶಸ್ವಿಯಾದೆ. ಆದ್ದರಿಂದ ಬೆಳ್ಳಿ ಪದಕ ಒಲಿಯಿತು. ಇದೊಂದು ಒಳ್ಳೆಯ ಅನುಭವ. ಮುಂದಿನ ಬಾರಿ ಪದಕದ ಬಣ್ಣವನ್ನು ಬದಲಿಸಲು ಯತ್ನಿಸುವೆ.

ನೀರಜ್ ಚೋಪ್ರಾ, ವಿಶ್ವ ಅಥ್ಲೆಟಿಕ್ಸ್ ಬೆಳ್ಳಿ ಪದಕ ವಿಜೇತ

ಕಿಡಿನುಡಿ



ಬಿಜೆಪಿ ಮೊನ್ನೆ ಹುಟ್ಟಿರುವ ಪಕ್ಷ. ಆ ಪಕ್ಷದವರನ್ನು ನೋಡಿ ನಾವು ಶಿಸ್ತು, ನೀತಿ, ನಿಯಮ ಕಲಿಯಬೇಕೇ? ಆರೇಳು ರಾಜ್ಯಗಳಲ್ಲಿ ಜನರು ನಮ್ಮ ಪಕ್ಷಕ್ಕೆ ಬೆಂಬಲ ಕೊಟ್ಟಿದ್ದರೂ ಶಾಸಕರನ್ನು ಖರೀದಿಸಿ ಅವರೇ ಸರ್ಕಾರ ಮಾಡಿದ್ದಾರೆ. ಇಂಥವರಿಂದ ನಾವು ಪಾಠ ಕಲಿಯಬೇಕೇ?

ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆ ವಿರೋಧಪಕ್ಷದ ನಾಯಕ

25 ವರ್ಷಗಳ ಹಿಂದೆ

ಶುಕ್ರವಾರ, 25-7-1997

- **ಕ್ಷಮಾದಾನ ನೀಡದಿದ್ದರೆ ಒತ್ತೆಯಾಳು ಕೊಲ್ಲುವೆ– ವೀರಪ್ಪನ್ ಬೆದರಿಕೆ**

ಚೆನ್ನೈ, ಜುಲೈ 24 (ಯುಎನ್ಐ, ಪಿಟಿಐ)– ತನಗೆ ಹಾಗೂ ತನ್ನ ತಂಡದ ಇತರ ಸದಸ್ಯರಿಗೆ ಕ್ಷಮಾದಾನ ನೀಡದಿದ್ದಲ್ಲಿ ಅಪಹರಿಸಿರುವ ಕರ್ನಾಟಕದ ಒಂಬತ್ತು ಮಂದಿ ಅರಣ್ಯ ಸಿಬ್ಬಂದಿಯನ್ನು ಕೊಲ್ಲುವುದಾಗಿ ಕುಖ್ಯಾತ ನರಹಂತಕ ವೀರಪ್ಪನ್ ಪಟ್ಟು ಹಿಡಿದಿದ್ದಾನೆ.

ಹತ್ತು ದಿನದೊಳಗೆ ನಿರ್ಧಾರ ಕೈಗೊಳ್ಳದಿದ್ದಲ್ಲಿ ತಾನು ಅಪಹರಿಸಿರುವ ಒತ್ತೆಯಾಳುಗಳನ್ನು ಒಬ್ಬೊಬ್ಬರಾಗಿ ಕೊಲೆ ಮಾಡುವುದಾಗಿ ವೀರಪ್ಪನ್ ಗಡುವು ನೀಡಿದ್ದಾನೆ.

ತಮಿಳುನಾಡು ಸರ್ಕಾರದ ಸಂಧಾನಕಾರರಾಗಿ ಅರಣ್ಯಕ್ಕೆ ತೆರಳಿದ್ದ ತಮಿಳು ಪತ್ರಕರ್ತ ಆರ್.ಆರ್. ಗೋಪಾಲ್ ಅವರಿಗೆ ವೀರಪ್ಪನ್ ತನ್ನ ನಿಲುವನ್ನು ಸ್ಪಷ್ಟಪಡಿಸಿದ್ದಾನೆ.

ವೀರಪ್ಪನ್ ತಂಡ ಕಳೆದ 12ರಂದು ಅಪಹರಿಸಿದ ಕರ್ನಾಟಕದ ಒಂಬತ್ತು ಮಂದಿ ಅರಣ್ಯ ಸಿಬ್ಬಂದಿ ಸುರಕ್ಷಿತವಾಗಿರುವುದನ್ನು ಚಿತ್ರಿಸಿರುವ ವಿಡಿಯೋ ಕ್ಯಾಸೆಟ್ ಅನ್ನು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಗೋಪಾಲ್ ಪತ್ರಕರ್ತರಿಗೆ ಪ್ರದರ್ಶಿಸಿದರು. ಸೋಮವಾರ ಬೆಳಿಗ್ಗೆ ತಾವು ಒತ್ತೆಯಾಳುಗಳನ್ನು ಭೇಟಿ ಮಾಡಿದ್ದಾಗಿ ಗೋಪಾಲ್ ವಿವರಿಸಿದರು.

- **ಮಹಾಶ್ವೇತಾ ದೇವಿಗೆ ಮ್ಯಾಗ್ಸೆಸ್ಸೆ ಪ್ರಶಸ್ತಿ**

ಮನಿಲಾ, ಜುಲೈ 24 (ಎಪಿ)– ಖ್ಯಾತ ಬಂಗಾಳಿ ಲೇಖಕಿ ಮಹಾಶ್ವೇತಾ ದೇವಿ ಅವರಿಗೆ ಸಾಹಿತ್ಯಕ್ಕಾಗಿ ನೀಡುವ ಮ್ಯಾಗ್ಸೆಸ್ಸೆ ಪ್ರಶಸ್ತಿ ದೊರೆತಿದೆ.

ಮಹಾಶ್ವೇತಾ ಅವರು ಹೋರಾಟ ಮತ್ತು ತಮ್ಮ ಬರಹಗಳ ಮೂಲಕ ಆದಿವಾಸಿ ಜನರಿಗೆ ದೇಶದ ರಾಷ್ಟ್ರೀಯ ವಾಹಿನಿಯಲ್ಲಿ ಮಹತ್ವದ ಸ್ಥಾನ ದೊರಕಿಸಿಕೊಟ್ಟಿದ್ದಾರೆ ಎಂದು ಮ್ಯಾಗ್ಸೆಸ್ಸೆ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

50 ವರ್ಷಗಳ ಹಿಂದೆ

ಮಂಗಳವಾರ, 25-7-1972

- **ನಗರ ಆಸ್ತಿ ಮಾರಾಟಕ್ಕೆ ನಿಷೇಧ: ಶೀಘ್ರವೇ ರಾಜ್ಯದಲ್ಲಿ ಸುಗ್ರೀವಾಜ್ಞೆ?**

ಬೆಂಗಳೂರು, ಜುಲೈ 24– ನಗರ ಆಸ್ತಿಗಳ ಮಾರಾಟ ವ್ಯವಹಾರಗಳನ್ನು ನಿಷೇಧಿಸುವ ಸುಗ್ರೀವಾಜ್ಞೆಯನ್ನು ಹೊರಡಿಸುವ ಸಾಧ್ಯತೆಯನ್ನು ರಾಜ್ಯ ಸರ್ಕಾರ ಪರಿಶೀಲಿಸುತ್ತಿದೆ.

ಭೂ ಮಿತಿ ಕುರಿತ ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ಭಾಗವಹಿಸಿ, ದೆಹಲಿಯಿಂದ ಇಂದು ಹಿಂದಿರುಗಿದ ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ಈ ವಿಷಯವನ್ನು ತಮ್ಮನ್ನು ಭೇಟಿಯಾದ ವರದಿಗಾರರಿಗೆ ತಿಳಿಸಿದರು.

ಈ ವರ್ಷದ ಅಂತ್ಯದೊಳಗೆ ನಗರ ಆಸ್ತಿ ಪರಿಮಿತಿ ಬಗ್ಗೆ ಅಂತಿಮ ಸಲಹೆಗಳ ನಿರ್ಧಾರವಾಗಬೇಕು ಎಂದು ತಾವು ಕೇಂದ್ರ ನಾಯಕರಿಗೆ ಮನವರಿಕೆ ಮಾಡಿಕೊಟ್ಟಿರುವುದಾಗಿ ಅವರು ಹೇಳಿದರು.

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಆಡಳಿತದಲ್ಲಿ ಸುಧಾರಣೆ ತರುವುದು ಹೇಗೆ?

ಬ್ಯಾಂಕ್, ವಂಚನೆ ಮತ್ತು ಖಾಸಗೀಕರಣ



ವಿಶ್ಲೇಷಣೆ

ಅರುಣ್ ಸಿನ್ಹಾ

ದೇಶದ ಇಬ್ಬರು ಪ್ರಮುಖ ಅರ್ಥಶಾಸ್ತ್ರಜ್ಞರಾದ ಅರವಿಂದ ಪನಗರಿಯಾ ಮತ್ತು ಪೂನಮ್ ಗುಪ್ತ ಅವರು ನೀತಿ ನಿರೂಪಣೆಗೆ ಸಂಬಂಧಿಸಿದ ವರದಿಯೊಂದರಲ್ಲಿ, 'ಭಾರತೀಯ ಸ್ಟೇಟ್ ಬ್ಯಾಂಕ್ ಹೊರತುಪಡಿಸಿ, ದೇಶದ ಸರ್ಕಾರಿ ಸ್ವಾಮ್ಯದ ಎಲ್ಲ ಬ್ಯಾಂಕ್‌ಗಳನ್ನು ಖಾಸಗಿಯವರಿಗೆ ಮಾರಾಟ ಮಾಡಬೇಕು' ಎಂದು ಶಿಫಾರಸು ಮಾಡಿದ್ದಾರೆ.

ಪನಗರಿಯಾ ಅವರು ನೀತಿ ಆಯೋಗದ ಮಾಜಿ ಉಪಾಧ್ಯಕ್ಷ. ಪೂನಮ್ ಅವರು ಪ್ರಧಾನ ಮಂತ್ರಿಯವರ ಆರ್ಥಿಕ ಸಲಹಾ ಮಂಡಳಿಯ ಸದಸ್ಯೆ. ಕೇಂದ್ರ ಸರ್ಕಾರವು ಅವರ ಮಾತುಗಳನ್ನೆಲ್ಲ ಕೇಳಿಸಿಕೊಳ್ಳುತ್ತದೆ ಎಂದಾದರೆ ಅವರು ಎಸ್‌ಬಿಐ ಅನ್ನೂ ಖಾಸಗಿಯವರಿಗೆ ಮಾರಾಟ ಮಾಡಿ ಎಂದು ಹೇಳುತ್ತಿದ್ದರೇನೋ. 'ಭಾರತದ ಆರ್ಥಿಕ ಚೌಕಟ್ಟಿನ ಮಿತಿಯಲ್ಲಿ, ದೇಶದ ರಾಜಕೀಯ ಮೌಲ್ಯಗಳ ವ್ಯಾಪ್ತಿಯಲ್ಲಿ ಯಾವ ಸರ್ಕಾರವೂ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಒಂದೂ ಇಲ್ಲದಂತೆ ಮಾಡಿಕೊಳ್ಳಲು ಬಯಸುವುದಿಲ್ಲ' ಎಂದು ಅವರು ವರದಿಯಲ್ಲಿ ಹೇಳಿದ್ದಾರೆ.

ಪನಗರಿಯಾ ಮತ್ತು ಪೂನಮ್ ಅವರು ಮುಕ್ತ ಮಾರುಕಟ್ಟೆ ವ್ಯವಸ್ಥೆಯ, ಮಾರುಕಟ್ಟೆಯ ದಿನನಿತ್ಯದ ಚಟುವಟಿಕೆಗಳಲ್ಲಿ ಸರ್ಕಾರದ ಹಸ್ತಕ್ಷೇಪ ಇರಲೇಬಾರದು ಎನ್ನುವ ತತ್ವದ ಬಹುದೊಡ್ಡ ಪ್ರತಿಪಾದಕರು. ಹೀಗಾಗಿ, ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳನ್ನು ಖಾಸಗಿಯವರಿಗೆ ಮಾರಾಟ ಮಾಡಬೇಕು ಎಂದು ಅವರು ಹೇಳುವುದರಲ್ಲಿ ವಿಶೇಷವೇನೂ ಇಲ್ಲ. ಆದರೆ, ಬ್ಯಾಂಕ್‌ಗಳ ಖಾಸಗೀಕರಣದ ವಿಚಾರದಲ್ಲಿ ಅವರ ವಾದವು ಅತ್ಯಂತ ದುರ್ಬಲ ನೆಲೆಗಟ್ಟನ್ನು ಹೊಂದಿದೆ.

ಅವರ ಮೊದಲ ವಾದ ಹೀಗಿದೆ: ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ವಂಚನೆ ಆಗುವ ಸಾಧ್ಯತೆ ಇರುತ್ತದೆ. ಅವರಿಗೆ ನಮ್ಮ ಪ್ರಶ್ನೆ ಹೀಗಿದೆ: ಬ್ಯಾಂಕ್‌ಗಳನ್ನು ಖಾಸಗಿಯವರಿಗೆ ಮಾರಾಟ ಮಾಡಿದರೆ ವಂಚನೆ ಆಗುವ ಸಾಧ್ಯತೆ ಇರುವುದಿಲ್ಲವೇ? ಖಾಸಗಿ ಬ್ಯಾಂಕ್‌ಗಳಲ್ಲಿ ವಂಚನೆ ನಡೆದಿಲ್ಲವೇ? ಪನಗರಿಯಾ ಅವರು ಬೋಧನೆಯ ವೃತ್ತಿಯಲ್ಲಿ ತೊಡಗಿಕೊಂಡಿರುವುದು ಅಮೆರಿಕದಲ್ಲಿ. ಅದು ಮುಕ್ತ ಮಾರುಕಟ್ಟೆ ವ್ಯವಸ್ಥೆಯ ಬಹುದೊಡ್ಡ ಸಾಮ್ರಾಜ್ಯ. ಅಲ್ಲಿನ ಖಾಸಗಿ ಹಣಕಾಸು ಸಂಸ್ಥೆಗಳಲ್ಲಿ ಸರಿಸುಮಾರು ಹದಿನೈದು ವರ್ಷಗಳ ಹಿಂದೆ ಬಹುದೊಡ್ಡ ಪ್ರಮಾಣದ ವಂಚನೆ ನಡೆಯಿತು. ಆ ವಂಚನೆಯು ಜಾಗತಿಕ ಹಣಕಾಸು ವ್ಯವಸ್ಥೆಯನ್ನು ಅಸ್ಥಿರಗೊಳಿಸಿತು. ಆಗ ಬಿದ್ದ ಏಟಿನಿಂದ ಜಗತ್ತು ಇನ್ನೂ ಚೇತರಿಸಿಕೊಂಡಿಲ್ಲ. ಅಂದಹಾಗೆ ನಾವು ಇಲ್ಲಿ ಅಮೆರಿಕದ ಖಾಸಗಿ ಬ್ಯಾಂಕಿಂಗ್ ವ್ಯವಸ್ಥೆಯ ಬಗ್ಗೆ ಮಾತನಾಡುತ್ತಿಲ್ಲ. ಯೆಸ್ ಬ್ಯಾಂಕ್‌ನ ಮಾಜಿ ವ್ಯವಸ್ಥಾಪಕ ನಿರ್ದೇಶಕ ರಾಣಾ ಕಪೂರ್ ಎಸಗಿದ ವಂಚನೆ ನಮಗೆ ನೆನಪಿಲ್ಲವೇ? ರಿಯಾಲ್ಟಿ ವಲಯದ ಒಂದು ಕಂಪನಿಗೆ ಸಾಲ ಮಂಜೂರು ಮಾಡಿ, ದೆಹಲಿಯಲ್ಲಿ ₹ 400 ಕೋಟಿ ಮೌಲ್ಯದ ಆಸ್ತಿಯನ್ನು ತಮ್ಮ ಪತ್ನಿಯ ಹೆಸರಿನಲ್ಲಿ ಪಡೆದುಕೊಂಡಿದ್ದ ಆರೋಪ ಅವರ ಮೇಲಿದೆ.

ಐಸಿಐಸಿಐ ಬ್ಯಾಂಕ್‌ನ ಸಿಇಒ ಆಗಿದ್ದ ಚಂದಾ ಕೊಚ್ಚರ್ ಅವರು ಎಸಗಿದ ವಂಚನೆ ನಮಗೆ ನೆನಪಿಲ್ಲವೇ? ಚಂದಾ ಅವರು ವೇಣುಗೋಪಾಲ್ ಧೂತ್ ಅವರ ವಿಡಿಯೊಕಾನ್ ಇಂಟರ್‌ನ್ಯಾಷನಲ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಕಂಪನಿಗೆ ಎಲ್ಲ ನಿಯಮಗಳನ್ನು ಉಲ್ಲಂಘಿಸಿ ₹ 300 ಕೋಟಿ ಸಾಲ ಮಂಜೂರು ಮಾಡಿದರು. ನಂತರ ಧೂತ್ ಅವರು ನ್ಯೂಪವರ್ ರಿನಿವೆಬಲ್ಸ್ ಪ್ರೈ.ಲಿ. ಕಂಪನಿಗೆ ₹ 64 ಕೋಟಿ ವರ್ಗಾವಣೆ ಮಾಡಿದರು ಎಂಬ ಆರೋಪ ಇದೆ. ನ್ಯೂಪವರ್ ಕಂಪನಿಯು ಚಂದಾ ಅವರ ಪತಿ ದೀಪಕ್ ಕೊಚ್ಚರ್ ಅವರಿಗೆ ಸೇರಿದ್ದು. ಚಂದಾ ಅವರು ಅಧಿಕಾರದಲ್ಲಿದ್ದ ಅವಧಿಯಲ್ಲಿ ಹಲವು ಸಾಲಗಳ ಮಂಜೂರಾತಿ ಪ್ರಕ್ರಿಯೆಯಲ್ಲಿ ನಿಯಮ ಉಲ್ಲಂಘಿಸಿದ್ದಾರೆ ಎಂಬುದನ್ನು ತನಿಖಾ ಸಂಸ್ಥೆಗಳು ಪತ್ತೆ ಮಾಡಿವೆ.

ಪನಗರಿಯಾ ಮತ್ತು ಪೂನಮ್ ಅವರು ಹೇಳುತ್ತಿರುವ ಎರಡನೆಯ ಅಂಶ, ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ಕಾರ್ಪೊರೇಟ್ ಆಡಳಿತ ಚೆನ್ನಾಗಿಲ್ಲ ಎಂಬುದು. ಹಾಗಾದರೆ, ಚಂದಾ ಕೊಚ್ಚರ್ ಪ್ರಕರಣವು ಐಸಿಐಸಿಐ ಬ್ಯಾಂಕ್‌ನಲ್ಲಿನ ಹಾಗೂ ರಾಣಾ ಕಪೂರ್ ಪ್ರಕರಣವು ಯೆಸ್ ಬ್ಯಾಂಕ್‌ನಲ್ಲಿನ ಕಾರ್ಪೊರೇಟ್ ಆಡಳಿತವು ಬಹಳ ಚೆನ್ನಾಗಿತ್ತು ಎಂದು ಹೇಳುತ್ತಿವೆಯೇ? ವಾಸ್ತವದಲ್ಲಿ, ಅತ್ಯುನ್ನತ ಅಧಿಕಾರಿಗಳು ಹಾಗೂ ಕಿಡಿಗೇಡಿ ಸಾಲಗಾರರ ನಡುವೆ ಹೊಂದಾಣಿಕೆ ಇದ್ದ ಪಕ್ಷದಲ್ಲಿ ಖಾಸಗಿ ಬ್ಯಾಂಕ್‌ಗಳಲ್ಲಿಯೂ ವಿವೇಕ, ದಕ್ಷತೆ ಎಂಬ ಗುಣಗಳು ಕಾಣೆಯಾಗಬಹುದು ಎನ್ನುವುದನ್ನು ಈ ಪ್ರಕರಣಗಳು ತೋರಿಸಿಕೊಟ್ಟಿವೆ. ಅದೃಷ್ಟದ ಸಂಗತಿಯೆಂದರೆ, ಯೆಸ್ ಬ್ಯಾಂಕ್ ಹಾಗೂ ಐಸಿಐಸಿಐ ಬ್ಯಾಂಕ್‌ಗಳಲ್ಲಿ ನಡೆದ ಅಕ್ರಮಗಳು ಆ ಬ್ಯಾಂಕ್‌ಗಳನ್ನು ದಿವಾಳಿಯೆಡೆಗೆ ಒಯ್ಯುವಷ್ಟು ದೊಡ್ಡ ಪ್ರಮಾಣದಲ್ಲಿ ಇರಲಿಲ್ಲ. ಆದರೆ, ಖಾಸಗಿ ವಲಯದ ಗ್ಲೋಬಲ್ ಟ್ರಸ್ಟ್ ಬ್ಯಾಂಕ್ ಹಾಗೂ ಲಕ್ಷ್ಮೀ ವಿಲಾಸ ಬ್ಯಾಂಕ್‌ನಲ್ಲಿ ನಡೆದ ಅಕ್ರಮಗಳು ಆ ಬ್ಯಾಂಕ್‌ಗಳು ಕುಸಿದುಬೀಳುವಂತೆ ಮಾಡಿದವು.

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿನ ಎನ್‌ಪಿಎ ಪ್ರಮಾಣವು ಖಾಸಗಿ ಬ್ಯಾಂಕ್‌ಗಳಲ್ಲಿನ ಎನ್‌ಪಿಎ ಪ್ರಮಾಣಕ್ಕಿಂತ ಹೆಚ್ಚಿತ್ತು ಎಂಬುದು ನಿಜ. 2017ರ ಡಿಸೆಂಬರ್ ವೇಳೆಗೆ ಕೊಟ್ಟ ಸಾಲದ ಮೊತ್ತಕ್ಕೆ ಪ್ರತಿಯಾಗಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿನ ಎನ್‌ಪಿಎ ಪ್ರಮಾಣ ಶೇಕಡ 13.5ರಷ್ಟಿತ್ತು. ಈ ಪ್ರಮಾಣವು ಖಾಸಗಿ ಬ್ಯಾಂಕ್‌ಗಳಲ್ಲಿ ಶೇ 3.8ರಷ್ಟಿತ್ತು. ಎರಡೂ ವಲಯಗಳ ಬ್ಯಾಂಕ್‌ಗಳಲ್ಲಿಯೂ ಎನ್‌ಪಿಎ ಇದೆ. ಆದರೆ ಅದರ ಪ್ರಮಾಣವು ಸರ್ಕಾರಿ ಬ್ಯಾಂಕ್‌ಗಳಲ್ಲಿ ಹೆಚ್ಚಿದೆ. ಅಂದರೆ, ಸರ್ಕಾರಿ ಬ್ಯಾಂಕ್‌ಗಳಲ್ಲಿನ ಆಡಳಿತ ವ್ಯವಸ್ಥೆಯನ್ನು ಇನ್ನಷ್ಟು ಉತ್ತಮಪಡಿಸಬೇಕು ಎಂಬುದನ್ನು ಇದು ಹೇಳುತ್ತದೆ. ವ್ಯವಸ್ಥೆಯನ್ನು ಉತ್ತಮಪಡಿಸುವ ಕೆಲಸವನ್ನು ಅವುಗಳನ್ನು ಖಾಸಗಿಯವರಿಗೆ ಮಾರದೆಯೂ ಮಾಡಬಹುದು. ಅಂದಹಾಗೆ, 2022ರ ಮಾರ್ಚ್ ವೇಳೆಗೆ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಒಟ್ಟು ಎನ್‌ಪಿಎ ಪ್ರಮಾಣವು ಶೇ 5.9ಕ್ಕೆ ಇಳಿಕೆಯಾಗಿದೆ.



ಹೀಗಿದ್ದರೂ, ಇವರು ಮಾತ್ರವೇ ಅಲ್ಲದೆ, ನರೇಂದ್ರ ಮೋದಿ ನೇತೃತ್ವದ ಸರ್ಕಾರ ಕೂಡ ಬ್ಯಾಂಕ್‌ಗಳ ಖಾಸಗೀಕರಣದ ಬಗ್ಗೆ ಮಾತನಾಡುತ್ತಿದೆ. 2021–22ನೆಯ ಸಾಲಿನ ಬಜೆಟ್ ಮಂಡನೆ ವೇಳೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸರ್ಕಾರಿ ಸ್ವಾಮ್ಯದ ಎರಡು ಬ್ಯಾಂಕ್‌ಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವ ಘೋಷಣೆಯನ್ನು ಮಾಡಿದರು. ಬ್ಯಾಂಕ್‌ಗಳು ಯಾವುವು ಎಂಬುದನ್ನು ಅವರು ಹೇಳಲಿಲ್ಲ. ಖಾಸಗೀಕರಣಕ್ಕೆ ಸಂಬಂಧಿಸಿದ ಮಸೂದೆಯು ಮುಂಗಾರು ಅಧಿವೇಶನದಲ್ಲಿ ಮಂಡನೆ ಆಗಬೇಕಿತ್ತು. ಆದರೆ ನಿರ್ಮಲಾ ಅವರು ಅದನ್ನು ಮುಂದಕ್ಕೆ ಹಾಕಿರುವಂತೆ ಕಾಣುತ್ತಿದೆ.

ಮೋದಿ ಅವರ ವ್ಯಕ್ತಿತ್ವವು ದಕ್ಷ ಆಡಳಿತದ ಜೊತೆ ಬೆಸೆದುಕೊಂಡಿದೆ. ಅಂದರೆ, ಭ್ರಷ್ಟಾಚಾರಕ್ಕೆ ಅವಕಾಶ ಇಲ್ಲದ, ಸೇವೆಗಳನ್ನು ಪರಿಣಾಮಕಾರಿಯಾಗಿ ಒದಗಿಸುವ ಆಡಳಿತ ಅದು. ಅವರ ಆಡಳಿತ ಈ ರೀತಿ ಇದೆ ಎಂದಾದರೆ, ಮೋದಿ ನೇತೃತ್ವದ ಸರ್ಕಾರವು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿನ ಆಡಳಿತ ವ್ಯವಸ್ಥೆಯನ್ನು ಸುಧಾರಿಸಬಾರದೇಕೆ? ಬೃಹತ್ ಗಾತ್ರದ ಸರ್ಕಾರವನ್ನು ದಕ್ಷವಾಗಿ ನಡೆಸಲು ಸಾಧ್ಯವಾಗುತ್ತದೆ, ಹನ್ನೆರಡು ಸರ್ಕಾರಿ ಬ್ಯಾಂಕ್‌ಗಳನ್ನು ಚೆನ್ನಾಗಿ ನಡೆಸಲು ಸಾಧ್ಯವಿಲ್ಲ ಎನ್ನಲಾದೀತೇ?

ಬ್ಯಾಂಕ್‌ಗಳಲ್ಲಿ ಒಳ್ಳೆಯ ಆಡಳಿತ ಅಂದರೆ, ದುರುದ್ದೇಶ ಹೊಂದಿರುವ ಯಾವುದೇ ಸಾಲಗಾರನ ಬೇಡಿಕೆಗಳಿಗೆ ಮಣಿಯಲು ಬ್ಯಾಂಕ್‌ನ ಯಾವುದೇ ಭ್ರಷ್ಟ ಅಧಿಕಾರಿಗೆ ಸಾಧ್ಯವಾಗದಂತೆ ನಿಯಮಗಳನ್ನು ರೂಪಿಸಿ, ಅನುಷ್ಠಾನಕ್ಕೆ ತರುವುದು. ಅಂದರೆ, ಬ್ಯಾಂಕ್‌ನ ಅಧ್ಯಕ್ಷ ಸ್ಥಾನಕ್ಕೆ ಅರ್ಹತೆಯ ಆಧಾರದಲ್ಲಿ ನೇಮಕಾತಿ ನಡೆಸುವುದು. ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳನ್ನು ಕೂಡ ಅರ್ಹತೆಯನ್ನು ಆಧರಿಸಿ ನೇಮಿಸುವುದು. ಬ್ಯಾಂಕ್‌ನ ಆಡಳಿತ ಮಂಡಳಿಗಳಿಗೆ ಪ್ರಾಮಾಣಿಕರನ್ನು ನಿರ್ದೇಶಕರನ್ನಾಗಿ ನೇಮಿಸುವುದು. ಬ್ಯಾಂಕ್‌ನ ಲೆಕ್ಕಪತ್ರ ನಿರ್ವಹಣೆಯನ್ನು ಪ್ರಾಮಾಣಿಕವಾಗಿ ನಡೆಸುವುದು.

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಗೆ ಮುಖ್ಯಸ್ಥರನ್ನು ನೇಮಕ ಮಾಡಲು ಕೇಂದ್ರ ಸರ್ಕಾರವು ಸ್ವಾಯತ್ತ ಸಂಸ್ಥೆಯೊಂದನ್ನು – ಹಣಕಾಸು ಸೇವಾ ಸಂಸ್ಥೆಗಳ ಬ್ಯೂರೊ ರಚಿಸಿದೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ನಾಯಕತ್ವ ಬೆಳೆಸಲು ಇಂಡಿಯನ್ ಬ್ಯಾಂಕ್ ಅಸೋಸಿಯೇಷನ್ ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುತ್ತಿದೆ. ವಂಚನೆಗಳಿಂದ ಪಾಠ ಕಲಿತಿರುವ ಆರ್‌ಬಿಐ, ಆಂತರಿಕ ಹಾಗೂ ಬಾಹ್ಯ ನಿಯಂತ್ರಣ ಕ್ರಮಗಳನ್ನು ಜಾರಿಗೆ ತಂದಿದೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಆಡಳಿತದಲ್ಲಿ ಸುಧಾರಣೆ ಆಗುತ್ತಿದೆ. ಬ್ಯಾಂಕ್‌ಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವ ಬದಲು ಕೇಂದ್ರ ಸರ್ಕಾರವು ಬ್ಯಾಂಕ್ ಆಡಳಿತ ಸುಧಾರಣೆಗೆ ಒತ್ತಾಸೆಯಾಗಿ ನಿಲ್ಲಬೇಕು.

ಚುರುಮುರಿ



ಆಫ್ಟರ್ ಮಿ...

• ಆನಂದ

'ತಂದೆ-ತಾಯಿ ಮಕ್ಕಳಿಗೆ ತಮ್ಮ ಆಸ್ತಿ ಬಿಟ್ಟು ಕೊಟ್ಟಂತೆ ಈಗ ಜನ ತಮ್ಮ ಕ್ಷೇತ್ರ ಬಿಟ್ಟು ಕೊಡೋದಿಕ್ಕೆ ಹೊರಟಿದಾರೆ ನೋಡ್ರೀ' ಎಂದಳು ಶ್ರೀಮತಿ.

'ಏನು ಹಾಗಂದರೆ?'

'ಅದೇ ಯಡಿಯೂರಪ್ಪನವರು ಮಗನಿಗೆ ತಮ್ಮ ಶಿಕಾರಿಪುರ ಕ್ಷೇತ್ರ, ಯತೀಂದ್ರ ತಂದೆಗೆ ವರುಣ ಕ್ಷೇತ್ರ, ಕೋಳಿವಾಡರು ಪುತ್ರನಿಗೆ ರಾಣೆಬೆನ್ನೂರು ಕ್ಷೇತ್ರ ಬಿಟ್ಟುಕೊಡಲಿದ್ದಾರೆ'.

'ಹೋ! ಹಾಗಿದ್ದರೆ ಪಕ್ಷದ ವರಿಷ್ಠರಿಗೆ ಕ್ಷೇತ್ರ ಅಲಾಟ್ ಮಾಡೊ ಕೆಲಸ ಕಡಿಮೆ ಆಗುತ್ತೆ. ನಿವೃತ್ತರಾಗುವ ಶಾಸಕರು ಮಕ್ಕಳಿಗೆ ತಮ್ಮ ಕ್ಷೇತ್ರ ಬಿಟ್ಟುಕೊಟ್ಟ ಮೇಲೆ ಉಳಿದ ಕಡೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದರೆ ಆಯಿತು...'

'ಅಂದರೆ ಅಂತಹ ಕ್ಷೇತ್ರಗಳು ಅವರು ಮಾಡಿದ ಆಸ್ತಿ ತರಹಾ ವಂಶಪಾರಂಪರ್ಯನೇ? ಅಲ್ಲಿ ಬೇರೆ ಅರ್ಹರು ಇರೋಲ್ಲವೆ?'

'ಇದ್ದರೂ ಇವರಿಗೆ ಆ ಕ್ಷೇತ್ರದ ಬಗ್ಗೆ ಅಷ್ಟು ಅಭಿಮಾನ. ತಮ್ಮ ಕುಟುಂಬದವರೇ ಅಲ್ಲಿನ ಜನರ ಸೇವೆ ಮಾಡಬೇಕೆಂಬ ಆಸೆ'.

'ಅಲ್ರೀ ನಾಳೆ ಇದೇ ಪ್ರವೃತ್ತಿ ಹಬ್ಬಿದರೆ?'

'ಏನು ಹಾಗೆಂದರೆ?'

'ನಾನು ರೆವಿನ್ಯೂ ಮಂತ್ರಿ ಆಗಿದ್ದೆ, ನನ್ನ ಮಗನಿಗೂ ಅದೇ ಖಾತೆ ಕೊಡಬೇಕು ಎಂದು ಒತ್ತಡ ತರಬಹುದು. ಅಥವಾ ನಾನು ರಿಟೈರ್ ಆಗೋ ಟೈಂನಲ್ಲಿ ಬಿಡಿಎ ಚೇರ್ಮನ್ ಆಗಿದ್ದರಿಂದ ನನ್ನ ಮಗನಿಗೂ ಅದೇ ಹುದ್ದೆ ಕೊಡಬೇಕು ಅಂದರೆ?'

'ಯು ಹ್ಯಾವ್ ಎ ಪಾಯಿಂಟ್. ಕ್ರಿಕೆಟ್ ತಂಡದ ನಾಯಕ, ನಾನು ನಿವೃತ್ತಿ ಘೋಷಿಸಿದ ನಂತರ ನನ್ನ ಮಗನನ್ನೇ ಕ್ಯಾಪ್ಟನ್ ಮಾಡಬೇಕು ಅಂದರೆ?'

'ಕೊಹ್ಲಿಗೆ ಮಾಡೋದಿಕ್ಕೆ ಆಗ್ತಾ ಇಲ್ಲ ಬಿಡಿ. ಅವರ ಮಗ ಇನ್ನೂ ಅಂಬೆಗಾಲಿಡ್ತಾ ಇದಾನೆ'.

'ಸಿನಿಮಾ ಹೀರೊ ಆಫ್ಟರ್ ಮಿ ಮೈ ಸನ್ ಎಂದು ಘೋಷಿಸಿದರೆ?'

'ಅಪ್ಪ ಪ್ರೊಡ್ಯೂಸರ್ ಆದರೆ ಹಾಗೆ ನಡೆಯಲೂಬಹುದು'.

'ಅಮಿತಾಭ್ ಬಚ್ಚನ್ ಹಾಗೆ ಹೇಳದಿದ್ದರೂ ಅವರ ಮಗ ಹೀರೊ ಆದ. ನಮ್ಮ ಶಾಸಕರು ಜಾಗ ತ್ಯಾಗ ಮಾಡಿದರೆ ಮಕ್ಕಳು ಗೆಲ್ಲುವರೆ?'

'ಕಾದು ನೋಡಬೇಕು'.

ಸಂಗತ

ಶಿಕ್ಷಣ ಮುಂದುವರಿಕೆಯ ಸವಾಲು

ಸ್ಪಷ್ಟ ಕಣ್ಗಾವಲು ಮತ್ತು ಉತ್ತರದಾಯಿ ವ್ಯವಸ್ಥೆ ಜಾರಿಗೆ ತರುವುದು ತುರ್ತು ಅಗತ್ಯ

• ಡಾ. ಎಚ್.ಬಿ.ಚಂದ್ರಶೇಖರ್

ತಂದೆ ಮತ್ತು ಮಗ ಬೇಸರ, ದುಃಖ, ನೋವಿನ ಭಾವಗಳಿಂದ ನನ್ನ ಮುಂದೆ ನಿಂತಿದ್ದರು. ಮಗ ಪ್ರಥಮ ಪಿಯುಸಿಯಲ್ಲಿ ಒಂದು ವಿಷಯದಲ್ಲಿ ಅನುತ್ತೀರ್ಣನಾಗಿದ್ದ. ಒಂದು ವರ್ಷ ವ್ಯರ್ಥವಾಗುತ್ತದಲ್ಲಾ ಎಂಬ ನೋವು ಇಬ್ಬರಲ್ಲೂ ಇತ್ತು. ಮುಂದಿನ ಹಾದಿಯ ಬಗ್ಗೆ ಮಾರ್ಗದರ್ಶನ ಬಯಸಿ ಬಂದಿದ್ದರು. ಒಂದಷ್ಟು ಮಾತುಕತೆಯ ನಂತರ ತಿಳಿದಿದ್ದೆಂದರೆ ಪ್ರಥಮ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಪರೀಕ್ಷೆ ಬರೆದ ಬಳಿಕ ನಾಲ್ಕು ವಿಷಯಗಳಲ್ಲಿ ಅನುತ್ತೀರ್ಣನಾಗಿದ್ದ. ಕಾಲೇಜು ಹಂತದಲ್ಲಿ ನಡೆದ ಪೂರಕ ಪರೀಕ್ಷೆಯಲ್ಲಿ ಮೂರು ವಿಷಯಗಳಲ್ಲಿ ಉತ್ತೀರ್ಣನಾಗಿ, ಇನ್ನೊಂದು ವಿಷಯದಲ್ಲಿ ಮತ್ತೊಮ್ಮೆ ಅನುತ್ತೀರ್ಣನಾಗಿದ್ದ. ಇವನು ಓದುತ್ತಿದ್ದ ಕಾಲೇಜಿನಲ್ಲಿ ಇತರೆ 140 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದ ವಿಷಯ ತಿಳಿಯಿತು.


ಕೋವಿಡ್ ಸಂಕಷ್ಟದ ನಡುವೆ ವಿದ್ಯಾರ್ಥಿಗಳ ಕಲಿಕೆಯ ಹಿನ್ನಡೆ ಹಾಗೂ ಅದರಿಂದ ಉದ್ಭವಿಸುವ ನೋವು, ಹತಾಶೆಗಳ ಸ್ವರೂಪದ ಉದಾಹರಣೆಗಳು ನಮ್ಮ ಮುಂದಿವೆ. ಒಂದಷ್ಟು ಆಲೋಚನೆ ನಡೆಸಿದ ನಾನು, ವಿಜ್ಞಾನ ವಿಷಯದ ಕಲಿಕೆಯನ್ನು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಓಪನ್ ಸ್ಕೂಲಿಂಗ್ (ಎನ್.ಐ.ಒ.ಎಸ್) ಮೂಲಕ ಮುಂದುವರಿಸಬಹುದು ಎಂಬ ಮಾಹಿತಿ ತಿಳಿಸಿ, ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಪದವಿ ಪೂರ್ವ ಶಿಕ್ಷಣ ಇಲಾಖೆಯ ಕಚೇರಿ ಪ್ರಾಂಗಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಎನ್.ಐ.ಒ.ಎಸ್‌ನ ಪ್ರಾಂತೀಯ ಕಚೇರಿಯನ್ನು ಸಂಪರ್ಕಿಸಲು ತಿಳಿಸಿದೆ. ಒಂದು ದಿನದ ನಂತರ ಎನ್.ಐ.ಒ.ಎಸ್ ಮೂಲಕ 12ನೇ ತರಗತಿ ವಿಜ್ಞಾನ ಶಿಕ್ಷಣವನ್ನು ಮುಂದುವರಿಸುವ ಬಗ್ಗೆ ತಂದೆ ಸಂತಸದಿಂದ ಕರೆ ಮಾಡಿ ತಿಳಿಸಿದರು. 'ನಾನು ಹೇಗೆ ಓದಿ ತೋರಿಸುತ್ತೇನೆ ನೋಡು' ಎಂದು ಮಗ ಉತ್ಸಾಹದಿಂದ ತಿಳಿಸಿದ್ದನ್ನೂ ತಂದೆ ನನ್ನೊಂದಿಗೆ ಹಂಚಿಕೊಂಡರು.

ಮಕ್ಕಳು ಶಾಲೆ ಬಿಡುವುದು ಮತ್ತು ತರಗತಿಗಳಲ್ಲಿ ಅನುತ್ತೀರ್ಣತೆಯ ಸಂಗತಿಗಳು ಶಿಕ್ಷಣ ಕ್ಷೇತ್ರದಲ್ಲಿ ಸಂಭವಿಸುವ ಅಪವ್ಯಯದ ಬಹು ಮುಖ್ಯ ಕಾರಣಗಳು. ಒಂದು ಸಣ್ಣ ವಿಶ್ಲೇಷಣೆ ಮಾಡುವುದಾದರೆ 2006- 07ರಲ್ಲಿ ರಾಜ್ಯದಲ್ಲಿ ಒಂದನೇ ತರಗತಿಯಲ್ಲಿ ವಿದ್ಯಾರ್ಥಿಗಳ ಒಟ್ಟು ದಾಖಲಾತಿ 11,89,635 ಇತ್ತು. ಹತ್ತು ವರ್ಷಗಳ ನಂತರ 2015-16ರಲ್ಲಿ ಹತ್ತನೇ ತರಗತಿಯ ಪರೀಕ್ಷೆಯನ್ನು ಬರೆದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ 8,37,357. ಇದರಲ್ಲಿ ಉತ್ತೀರ್ಣರಾದವರು 6,85,156 ಮಂದಿ. 2015-16ರಲ್ಲಿ ಪ್ರಥಮ ಪಿಯುಸಿಗೆ ದಾಖಲಾದ ಒಟ್ಟು ವಿದ್ಯಾರ್ಥಿಗಳು 6,48,877. ಸಾಧಾರಣವಾಗಿ ಪ್ರಥಮ ಪಿಯುಸಿಯಲ್ಲಿ ವಾರ್ಷಿಕ ಒಟ್ಟು ಒಂದು ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಾರೆ.

ಹತ್ತು ವರ್ಷಗಳಲ್ಲಿ 3,52,278 ಅಂದರೆ ಶೇ 30ರಷ್ಟು ವಿದ್ಯಾರ್ಥಿಗಳು ತಮ್ಮ ಶಾಲಾ ಶಿಕ್ಷಣದ ವಿವಿಧ ತರಗತಿಗಳಲ್ಲಿ ಶಾಲೆ ಬಿಡುತ್ತಾ ಹೋಗಿರುವುದನ್ನು ಗಮನಿಸಬಹುದು. ಹತ್ತನೇ ತರಗತಿಯೆಂಬ ಶಿಕ್ಷಣದ ಪ್ರಮುಖ ಘಟ್ಟವನ್ನು ಪೂರೈಸುವ ಮಕ್ಕಳ ಸಂಖ್ಯೆ ಶೇ 60ರಷ್ಟು ಮಾತ್ರ ಎಂಬುದು ಆಘಾತಕಾರಿ. ದ್ವಿತೀಯ ಪಿಯುಸಿಯ ಘಟ್ಟವನ್ನು ಪೂರೈಸುವ ಮಕ್ಕಳ ಸಂಖ್ಯೆ ಶೇ 50ಕ್ಕಿಂತ ಕಡಿಮೆ.

ವಿವಿಧ ಕಾರಣಗಳಿಂದ ಶಾಲೆಯನ್ನು ಮಧ್ಯೆ ತೊರೆಯುವ ಸನ್ನಿವೇಶ ನಿರ್ಮಾಣವಾಗುತ್ತದೆ. ಪ್ರತೀ ವಿದ್ಯಾರ್ಥಿಯ ದಾಖಲಾತಿ, ಕಲಿಕೆ, ಶಿಕ್ಷಣದ ಮುಂದುವರಿಕೆಯ ಪ್ರಗತಿಯ ಮೇಲೆ ಕಣ್ಗಾವಲಿಡಲು ತಂತ್ರಜ್ಞಾನದ ನೆರವು ಪಡೆಯಲಾಗುತ್ತಿದೆ. ತಂತ್ರಜ್ಞಾನಕ್ಕೂ ಮಿತಿಗಳಿವೆ. ಸರ್ವರ್ ಸಮಸ್ಯೆ, ಬಳಕೆದಾರರು ಸಮರ್ಪಕವಾದ ವಿಶ್ಲೇಷಣೆ ಮಾಡದಿರುವುದು ಮುಂತಾದ ಸವಾಲುಗಳು ಎದುರಾಗುತ್ತವೆ.

ಈ ಸವಾಲುಗಳಿಗೆ ಸೂಕ್ತ ಪರಿಹಾರವೆಂದರೆ ಗ್ರಾಮ– ವಾರ್ಡ್ ಮಟ್ಟದಲ್ಲಿ ಮಕ್ಕಳ ದಾಖಲಾತಿ, ಹಾಜರಾತಿ, ಕಲಿಕೆಯ ಪ್ರಗತಿ, ಶಿಕ್ಷಣದ ಮುಂದುವರಿಕೆಯ ಕುರಿತಾದ ಸ್ಪಷ್ಟ ಕಣ್ಗಾವಲು ಮತ್ತು ಉತ್ತರದಾಯಿ ವ್ಯವಸ್ಥೆ ಜಾರಿಗೆ ತರುವುದು. ಇದರ ಜೊತೆ ಔಪಚಾರಿಕ ಶಿಕ್ಷಣ ವ್ಯವಸ್ಥೆಗೆ ಎನ್.ಐ.ಒ.ಎಸ್.ನಂತಹ ಅನೌಪಚಾರಿಕ ಶಿಕ್ಷಣ ವ್ಯವಸ್ಥೆಗಳ ಜಾಲವು ದೊಡ್ಡ ಮಟ್ಟದಲ್ಲಿ ವಿಸ್ತರಣೆಯಾಗುವ ಅಗತ್ಯ ಇದೆ.



ಎನ್.ಐ.ಒ.ಎಸ್. ಅಡಿ ಪಡೆಯಲಾಗುವ ಶಿಕ್ಷಣಕ್ಕೆ ಶಾಲೆ, ಕಾಲೇಜುಗಳಿಗೆ ದಾಖಲಾಗಿ ಪಡೆಯುವಷ್ಟೇ ಮಾನ್ಯತೆ ಇದೆ ಎಂಬ ಜಾಗೃತಿಯನ್ನು ಸಾರ್ವಜನಿಕರಿಗೆ ಮೂಡಿಸಬೇಕಿದೆ. ಎನ್.ಐ.ಒ.ಎಸ್. ಅಡಿ 10ನೇ ತರಗತಿಗೆ ದಾಖಲಾಗಲು 14 ವರ್ಷ ಪೂರೈಸಿದ್ದು, 8ನೇ ತರಗತಿಯ ಪಾಸಾದವರು ದಾಖಲಾಗಬಹುದು. 8ನೇ ತರಗತಿ ಪೂರ್ವ ವಿದ್ಯಾರ್ಹತೆ ಇಲ್ಲದವರೂ ಸಹ ತಾನು ಹತ್ತನೇ ತರಗತಿಯನ್ನು ಓದಲು ಶಕ್ತನಿದ್ದೇನೆ ಎಂಬ ದೃಢೀಕರಣ ನೀಡಿಯೂ ಹತ್ತನೇ ತರಗತಿಗೆ ದಾಖಲಾಗಬಹುದು. ಹತ್ತನೇ ತರಗತಿ ಪಾಸಾಗಿ, 15 ವರ್ಷ ಪೂರೈಸಿದವರು ನೇರವಾಗಿ 12ನೇ ತರಗತಿಗೆ ಸೇರಿ, ತಮ್ಮ ಇಚ್ಛೆಯ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಓದಬಹುದು. ಎನ್.ಐ.ಒ.ಎಸ್. ಮೂಲಕ 12ನೇ ತರಗತಿ ಪಾಸಾದವರು ಜೆ.ಇ.ಇ., ನೀಟ್, ಕರ್ನಾಟಕ ಸಿ.ಇ.ಟಿ., ಲಾ ಸ್ಕೂಲ್ ಪರೀಕ್ಷೆಗಳನ್ನು ಎದುರಿಸಿ, ತಮ್ಮ ಇಚ್ಛೆಯ ಕೋರ್ಸ್‌ಗಳನ್ನು ಪೂರೈಸಲು ಅವಕಾಶವಿದೆ. ವಿವರಗಳಿಗೆ ಎನ್.ಐ.ಒ.ಎಸ್. ಜಾಲತಾಣ https://www.nios.ac.in ನೋಡಬಹುದು.

ಲೇಖಕ: ಹಿರಿಯ ಉಪನ್ಯಾಸಕ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಬೆಂಗಳೂರು ನಗರ ಜಿಲ್ಲೆ

ವಾಚಕರ ವಾಣಿ

ಮರಗಳನ್ನು ಬೆಳೆಸಲು ಉತ್ತೇಜಿಸಿ

ಹೆಚ್ಚುತ್ತಿರುವ ನಗರೀಕರಣವು ಪರಿಸರಕ್ಕೆ ಗಂಭೀರ ಅಪಾಯ ತಂದೊಡ್ಡುತ್ತಿದೆ. ನಗರಗಳಲ್ಲಿ ಹಸಿರು ದಿನೇ ದಿನೇ ಕಣ್ಮರೆಯಾಗುತ್ತಿರುವುದೇ ಇದಕ್ಕೆ ಕಾರಣ. ಇದನ್ನು ತಡೆಯುವುದು ಅಗತ್ಯ. ಜಾರ್ಖಂಡ್ ರಾಜ್ಯ ಸರ್ಕಾರವು ಮರಗಳನ್ನು ಬೆಳೆಸಿದವರಿಗೆ ಐದು ಯೂನಿಟ್ ವಿದ್ಯುತ್ ಅನ್ನು ಉಚಿತವಾಗಿ ಪೂರೈಸುವುದಾಗಿ ಘೋಷಿಸಿದೆ. ಇದು ಅನುಕರಣೀಯ ಮಾದರಿ. ನಮ್ಮ ರಾಜ್ಯ ಸರ್ಕಾರ ಕೂಡ ಈ ದಿಸೆಯಲ್ಲಿ ಯೋಚಿಸಬೇಕು.

ಪರಿಸರ ಸಂರಕ್ಷಣೆಗೆ ಪೂರಕವಾಗಿ ಒದಗಿಬರುವ ಮರಗಳನ್ನು ಬೆಳೆಸಿದವರಿಗೆ ಮಾತ್ರ ಈ ಕೊಡುಗೆ ಅನ್ವಯಿಸುತ್ತದೆ ಎಂದು ಜಾರ್ಖಂಡ್ ಸರ್ಕಾರ ಹೇಳಿದೆ. ಈ ಅಂಶವನ್ನು ಕೂಡ ಗಮನದಲ್ಲಿ ಇರಿಸಿಕೊಳ್ಳುವುದು ಉಚಿತ.

ವಿಜಯಕುಮಾರ್ ಎಚ್.ಕೆ., ರಾಯಚೂರು

ಅಸ್ತಿತ್ವಕ್ಕೇ ಕುತ್ತು ಎದುರಾಗಿರುವಾಗ...

ನೆಹರೂ– ಗಾಂಧಿ ಕುಟುಂಬವೂ ಸೇರಿ ಕಾಂಗ್ರೆಸ್ ನಾಯಕರ ಬೇರನ್ನೇ ಕತ್ತರಿಸುತ್ತಿರುವ ವಿದ್ಯಮಾನಗಳು ನಡೆಯುತ್ತಿರುವ ಸಂದರ್ಭದಲ್ಲಿ ಆ ಪಕ್ಷದ ರಾಜ್ಯ ನಾಯಕರು ಮುಖ್ಯಮಂತ್ರಿ ಗಾದಿಗಾಗಿ ವಾಗ್ವಾದಗಳಲ್ಲಿ ತೊಡಗಿರುವುದು ಸರಿಯಲ್ಲ. ಪಕ್ಷ ಬಹುಮತ ಪಡೆದರೆ ಅಲ್ಲವೇ ಮುಂದಿನ ಸ್ಥಾನಮಾನ?

ಕಾಂಗ್ರೆಸ್ ಪಕ್ಷವನ್ನು ನಿರ್ನಾಮ ಮಾಡಲೇಬೇಕು ಎಂದು ಛಲ ತೊಟ್ಟಂತೆ ಕೇಂದ್ರ ತನಿಖಾ ಸಂಸ್ಥೆಗಳು ಒಬ್ಬರ ನಂತರ ಮತ್ತೊಬ್ಬರು ಎಂಬಂತೆ ಮುಗಿಬಿದ್ದಿವೆ. ಇದು, ಕಾಕತಾಳೀಯವೋ, ಉದ್ದೇಶಪೂರ್ವಕವೋ ತಿಳಿಯದು. ರಾಜ್ಯಗಳಲ್ಲಿ ಕಾಂಗ್ರೆಸ್ ಅಧಿಕಾರ ಕಳೆದುಕೊಳ್ಳುತ್ತಿದೆ. ಅಧಿಕಾರ ಉಳಿಸಿಕೊಂಡಿರುವ ಎರಡು ರಾಜ್ಯಗಳಲ್ಲಿ ಮೂಲ- ವಲಸೆ- ಹಿರಿಯ- ಕಿರಿಯ ಎಂಬ ಗಲಾಟೆಗಳು ಪಕ್ಷಕ್ಕೆ ತರವಲ್ಲ. ರಾಜಸ್ಥಾನದ ಪರಿಸ್ಥಿತಿ ಕರ್ನಾಟಕಕ್ಕಿಂತ ಭಿನ್ನವೇನಲ್ಲ. ಮಧ್ಯಪ್ರದೇಶದಲ್ಲಿ ಪಕ್ಷದಲ್ಲಿ ಆದ ಬೆಳವಣಿಗೆಗಳಿಂದ ಪಾಠ ಕಲಿತಿದ್ದರೆ, ಪಂಜಾಬ್ ಸೇರಿದಂತೆ ಇನ್ನೊಂದೆರಡು ರಾಜ್ಯಗಳಲ್ಲಿ ಕಾಂಗ್ರೆಸ್ ನೆಲೆ ಗಟ್ಟಿಯಾಗುತ್ತಿತ್ತು. ಪಕ್ಷದ ಅಸ್ತಿತ್ವವೇ ಇಲ್ಲವಾಗುತ್ತಿರುವಾಗ ಕುರ್ಚಿ ಕೇಂದ್ರಿತ ವಾಕ್ಸಮರವು ಬರಗಾಲದಲ್ಲಿ ಭೇದಿ ಹತ್ತಿಕೊಂಡಂತೆಯೇ ವಿನಾ ಪಕ್ಷಕ್ಕೆ ಯಾವ ರೀತಿಯಿಂದಲೂ ಶೋಭೆ ತರುವುದಿಲ್ಲ.

ಡಾ. ಶಾಂತರಾಜು ಎಸ್., ಮಳವಳ್ಳಿ

ಉತ್ತರಾಧಿಕಾರಿ: ಬೇರೆ ಆಯ್ಕೆ ಇರಬಾರದೇ?

ಮುಂದಿನ ಚುನಾವಣೆಯಲ್ಲಿ ಶಿಕಾರಿಪುರದಿಂದ ತಮ್ಮ ಮಗ ಬಿ.ವೈ. ವಿಜಯೇಂದ್ರ ಸ್ಪರ್ಧಿಸುತ್ತಾರೆ. ಅವರನ್ನು ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸಬೇಕು ಎಂದು ಬಿಜೆಪಿ ಮುಖಂಡ ಬಿ.ಎಸ್. ಯಡಿಯೂರಪ್ಪ ಅಲ್ಲಿನ ಮತದಾರರಲ್ಲಿ ಮನವಿ ಮಾಡಿಕೊಂಡಿದ್ದಾರೆ. ಇದನ್ನು ಗಮನಿಸಿದಾಗ, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನಿಜ ಅರ್ಥದಲ್ಲಿ ಬಯಸುವ ಯಾರಲ್ಲಾದರೂ ಹಲವಾರು ಪ್ರಶ್ನೆಗಳು ಪುಟಿದೇಳುತ್ತವೆ. ಯಡಿಯೂರಪ್ಪನವರ ನಂತರ ಅವರ ಮಗನನ್ನೇ ಅಲ್ಲಿನ ಮತದಾರರು ಏಕೆ ಆರಿಸಬೇಕು? ಅವರಿಗೆ ಬೇರೆ ಆಯ್ಕೆ ಇರಬಾರದೇ?! ಯಡಿಯೂರಪ್ಪ ಅವರನ್ನು ಲಾಗಾಯ್ತಿನಿಂದಲೂ ಬೆಂಬಲಿಸಿಕೊಂಡು ಬಂದಿರುವ ಅವರದೇ ಪಕ್ಷದ ಒಬ್ಬ ಕಾರ್ಯಕರ್ತ ಏಕೆ ಅವರ ಉತ್ತರಾಧಿಕಾರಿ ಆಗಬಾರದು?

ಅವರ ನಂತರ ಅವರ ಮಕ್ಕಳು, ಮೊಮ್ಮಕ್ಕಳಿಗೇ ಜನ ಜೈ ಎನ್ನುತ್ತಿರಬೇಕೆ? ತಮ್ಮ ನಂತರ ತಮ್ಮ ಮಕ್ಕಳನ್ನೇ ತಮ್ಮ ಉತ್ತರಾಧಿಕಾರಿಯನ್ನಾಗಿ ಬಿಂಬಿಸುವ ಪರಿಪಾಟ ನಮ್ಮ ರಾಜಕಾರಣಿಗಳಲ್ಲಿ ಹೆಚ್ಚಾಗುತ್ತಿದೆ. ಇದು, ಒಳ್ಳೆಯ ಬೆಳವಣಿಗೆಯಲ್ಲ!

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ವ್ಯರ್ಥ ಕಸರತ್ತು ಏಕೆ?

ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿಯಂಥ ಉನ್ನತ ಹುದ್ದೆಗಳಿಗೆ ಚುನಾವಣೆ ಘೋಷಣೆಯಾದಾಗ ವಿರೋಧ ಪಕ್ಷಗಳು ತಮಗೆ ಸಂಖ್ಯಾಬಲ ಇಲ್ಲದೇ ಇದ್ದ ಸಂದರ್ಭದಲ್ಲಿ ಅಭ್ಯರ್ಥಿಯನ್ನು ಕಣಕ್ಕೆ ಇಳಿಸುವುದರಿಂದ ಸಾಧಿಸುವುದು ಏನೂ ಇರುವುದಿಲ್ಲ. ಅದರ ಬದಲು, ಒಮ್ಮತದ ಆಯ್ಕೆಗೆ ಅವಕಾಶ ಮಾಡಿಕೊಡುವ ಮೂಲಕ ಈ ಹುದ್ದೆಗಳ ಘನತೆ ಹೆಚ್ಚಿಸುವುದು ಒಳಿತು.

ಮತದಾನಕ್ಕೆ ಮೊದಲೇ ಫಲಿತಾಂಶದ ಹಣೆಬರಹ ಗೊತ್ತಿರಬೇಕಾದರೆ ಕಣಕ್ಕೆ ಇಳಿಸಿ, ಮತಯಾಚನೆಯ ಕಸರತ್ತು ನಡೆಸುವುದರಲ್ಲಿ ಹೆಚ್ಚಿನ ಅರ್ಥ ಇರುವುದಿಲ್ಲ. ಪ್ರಜಾಪ್ರಭುತ್ವದ ಬೇರು ಗಟ್ಟಿಗೊಳ್ಳಲು ಇಂತಹ ಚುನಾವಣೆಗಳು ಯಾವುದೇ ರೀತಿಯಲ್ಲೂ ನೆರವಾಗುವುದಿಲ್ಲ.

ಕೆ.ಪಿ. ವಿಷ್ಣುವರ್ಧನ, ಕೊಡಗವಳ್ಳಿ ಹಟ್ಟಿ, ಹೊಳಲ್ಕೆರೆ

ಸರ್ಕಾರಕ್ಕೆ ಅಹಂ ಇರಬಾರದು

'ಪಠ್ಯಗಳಲ್ಲಿ ದೇಶಪ್ರೇಮ ಮತ್ತು ನಾಡಪ್ರೇಮ' ಲೇಖನದಲ್ಲಿ (ಸಂಗತ, ಜುಲೈ 23) ವ್ಯಕ್ತವಾಗಿರುವ ವಿಚಾರಗಳು ಪ್ರಬುದ್ಧವಾಗಿವೆ. ಮಕ್ಕಳ ಮನಸನ್ನು ಅರಿತು ಪಠ್ಯಪುಸ್ತಕಗಳನ್ನು ಪರಿಷ್ಕರಿಸುವುದು ಅಗತ್ಯ. ಏನು ಮಾಡಿದರೂ ನಡೆಯುತ್ತದೆ ಎಂಬ ಅಹಂ ಸರ್ಕಾರಕ್ಕೆ ಇರಬಾರದು.

ಮಕ್ಕಳಿಗೆ ಜ್ಞಾನ ನೀಡುವ ವಿಚಾರದಲ್ಲಿ ಸರ್ಕಾರವು ಅತ್ಯಂತ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ಅದನ್ನು ಮರೆತು ಒಂದು ಪೀಳಿಗೆಯ ಭವಿಷ್ಯದ ಜೊತೆ ಚೆಲ್ಲಾಟ ಆಡಬಾರದು.

ಬಸವರಾಜ ತಳವಾರ, ಬೆಳಗಾವಿ


ಅನುಭವ ಬಿಜೆಪಿಗೆ ದಾರಿದೀಪವಾಗಲಿ

ಬಿ.ಎಸ್.ಯಡಿಯೂರಪ್ಪ ಅವರು ಚುನಾವಣಾ ರಾಜಕಾರಣದಿಂದ ನಿವೃತ್ತಿಯಾಗುವ ಇಂಗಿತ ವ್ಯಕ್ತಪಡಿಸಿದ್ದಾರೆ. ಕಾಲಿಗೆ ಚಕ್ರ ಕಟ್ಟಿಕೊಂಡು ರಾಜ್ಯದಾದ್ಯಂತ ಓಡಾಡಿ ಬಿಜೆಪಿಯನ್ನು ಅವರು ಬೆಳೆಸಿದ್ದಾರೆ. ಹೋರಾಟ, ಸಂಘಟನೆಗೆ ಹೆಸರಾದವರು. ಹಟ, ಮುಂಗೋಪ, ಸಿಡುಕು ಸ್ವಭಾವದವರಾದರೂ ಬಡವರ ಪರ ಕಾಳಜಿ ಉಳ್ಳವರು. ಬಿಜೆಪಿ ವರಿಷ್ಠರು ಅವರನ್ನು ಕಡೆಗಣಿಸಬಾರದು. ಅವರ ಅನುಭವ, ಸಾಮರ್ಥ್ಯವನ್ನು ಮುಂದಿನ ದಿನಗಳಲ್ಲಿ ಬಳಸಿಕೊಳ್ಳಬೇಕು.

ಶ್ರೀಧರ್ ಡಿ.ರಾಮಚಂದ್ರಪ್ಪ, ತುರುವನೂರು, ಚಿತ್ರದುರ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.


ಸಂಶೋಧನೆಗೆ ನಿರ್ಲಕ್ಷ್ಯ



ನಾವೀನ್ಯ ಸೂಚ್ಯಂಕ ವರದಿಯಲ್ಲಿ ನೀತಿ ಆಯೋಗ ಕಳವಳ

ಭಾರತದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗೆ (ಆರ್ ಅಂಡ್ ಡಿ) ಅತ್ಯಂತ ಕಡಿಮೆ ಪ್ರಮಾಣದ ಹಣವನ್ನು ವಿನಿಯೋಗ ಮಾಡಲಾಗುತ್ತಿದೆ. 2005–06ರಲ್ಲಿ ದೇಶದ ಜಿಡಿಪಿಯ ಶೇ 0.8ರಷ್ಟನ್ನು ಆರ್ ಅಂಡ್ ಡಿಗೆ ವಿನಿಯೋಗಿಸಲಾಗುತ್ತಿತ್ತು. 2018ರಲ್ಲಿ ಇದು ದೇಶದ ಜಿಡಿಪಿಯ ಶೇ 0.65ರಷ್ಟಕ್ಕೆ ಕುಸಿದಿದೆ. ಅಭಿವೃದ್ಧಿ ಹೊಂದಿದ ದೇಶಗಳು ಮತ್ತು ಭಾರತವು ಸದಸ್ಯತ್ವ ಹೊಂದಿರುವ ವಿವಿಧ ವ್ಯಾಪಾರ ಒಕ್ಕೂಟದ ದೇಶಗಳು ಆರ್ ಅಂಡ್ ಡಿಗೆ ವಿನಿಯೋಗಿಸುತ್ತಿರುವ ಹಣದ ಪ್ರಮಾಣಕ್ಕೆ ಹೋಲಿಸಿದರೆ, ಭಾರತವು ವಿನಿಯೋಗಿಸುತ್ತಿರುವ ಪ್ರಮಾಣ ತೀರಾ ಕಡಿಮೆ. ಜತೆಗೆ ಈ ವಲಯದಲ್ಲಿ ಸರ್ಕಾರದ್ದೇ ಪಾರಮ್ಯ ಇದೆ. 'ಇದು ಅತ್ಯಂತ ಕಳವಳಕಾರಿ ಸಂಗತಿ' ಎಂದು ನೀತಿ ಆಯೋಗವು ತನ್ನ 'ನಾವೀನ್ಯ ಸೂಚ್ಯಂಕ' ವರದಿಯಲ್ಲಿ ಹೇಳಿದೆ. ಇವೆಲ್ಲವೂ ಆರ್ ಅಂಡ್ ಡಿ ವಲಯದ ಬೆಳವಣಿಗೆಗೆ ಕಡಿವಾಣ ಹಾಕಿವೆ. ಈ ಪರಿಸ್ಥಿತಿ ಬದಲಾಗಬೇಕು ಎಂದು ನೀತಿ ಆಯೋಗವು ಅಭಿಪ್ರಾಯಪಟ್ಟಿದೆ

ಜಿಡಿಪಿಯಲ್ಲಿ ಆರ್ ಅಂಡ್ ಡಿ ವೆಚ್ಚದ ಶೇಕಡವಾರು ಪ್ರಮಾಣ




- ಜಗತ್ತಿನ ಎಲ್ಲಾ ಆರ್ಥಿಕತೆಗಳಿಗೆ ಹೋಲಿಸಿದರೆ, ಇಸ್ರೇಲ್ ತನ್ನ ಜಿಡಿಪಿಯ ಒಟ್ಟು ಮೊತ್ತದಲ್ಲಿ ಶೇ 4.94ರಷ್ಟು ಮೊತ್ತವನ್ನು ಆರ್ ಅಂಡ್ ಡಿಗೆ ವೆಚ್ಚ ಮಾಡುತ್ತದೆ. ವಿಶ್ವದ ಪ್ರಮುಖ ಆರ್ಥಿಕತೆಗಳಿಗೆ ಹೋಲಿಸಿದರೆ, ಭಾರತವು ತನ್ನ ಜಿಡಿಪಿಯ ಒಟ್ಟು ಮೊತ್ತದಲ್ಲಿ ಅತ್ಯಂತ ಕಡಿಮೆ ಪ್ರಮಾಣದ ಮೊತ್ತವನ್ನು ಆರ್ ಅಂಡ್ ಡಿಗೆ ವಿನಿಯೋಗ ಮಾಡುತ್ತಿದೆ
- ವಿಶ್ವದ ಪ್ರಮುಖ ದೇಶಗಳ ಆರ್ ಅಂಡ್ ಡಿ ವೆಚ್ಚವು ಅವುಗಳ ಜಿಡಿಪಿಯ ಒಟ್ಟು ಮೊತ್ತದ ಶೇ 1ಕ್ಕಿಂತ ಹೆಚ್ಚೇ ಇದೆ. ಆದರೆ ಭಾರತದ ವೆಚ್ಚದ ಪ್ರಮಾಣವು ಶೇ 1ಕ್ಕಿಂತಲೂ ಬಹಳ ಕಡಿಮೆ ಇದೆ
- ಮುಕ್ತ ವ್ಯಾಪಾರ ಮತ್ತು ಆರ್ಥಿಕ ಸಹಕಾರಕ್ಕಾಗಿ ರಚಿಸಿಕೊಳ್ಳಲಾಗಿರುವ ಬ್ರಿಕ್ಸ್ ಒಕ್ಕೂಟದ ಇತರ ಎಲ್ಲಾ ದೇಶಗಳಿಂತ (ಬ್ರೆಜಿಲ್, ಚೀನಾ, ರಷ್ಯಾ ಮತ್ತು ದಕ್ಷಿಣ ಆಫ್ರಿಕಾ) ಭಾರತವು ಕಡಿಮೆ ಪ್ರಮಾಣದ ಮೊತ್ತವನ್ನು ಆರ್ ಅಂಡ್ ಡಿಗೆ ವಿನಿಯೋಗಿಸುತ್ತಿದೆ
- ಆರ್ ಅಂಡ್ ಡಿಗೆ ಹೆಚ್ಚು ಹಣ ವಿನಿಯೋಗ ಮಾಡುತ್ತಿರುವ ದೇಶಗಳ ಜಿಡಿಪಿ ಬೆಳವಣಿಗೆ ದರವು ಉತ್ತಮವಾಗಿರುತ್ತದೆ ಎಂದು ನೀತಿ ಆಯೋಗವು ಹೇಳಿದೆ

ಬ್ರಿಕ್ಸ್: ಭಾರತದಲ್ಲೇ ಅತಿ ಕಡಿಮೆ ತಲಾ ವೆಚ್ಚ

(ಆವರಣದಲ್ಲಿ ಇರುವುದು ಡಾಲರ್)

ಬ್ರಿಕ್ಸ್ ದೇಶಗಳಲ್ಲೇ ಆರ್ ಅಂಡ್ ಡಿಗಾಗಿ ಅತ್ಯಂತ ಕಡಿಮೆ ತಲಾ ವೆಚ್ಚ ಮಾಡುತ್ತಿರುವ ದೇಶ ಭಾರತ ಎನಿಸಿದೆ. ಈ ಒಕ್ಕೂಟದ ಇತರ ದೇಶಗಳು ಆರ್ ಅಂಡ್ ಡಿಗೆ ಮಾಡುತ್ತಿರುವ ತಲಾ ವೆಚ್ಚವು, ಭಾರತವು ಮಾಡುತ್ತಿರುವ ತಲಾ ವೆಚ್ಚಕ್ಕೆ ಹೋಲಿಸಿದರೆ ಹಲವು ಪಟ್ಟು ಹೆಚ್ಚು.




- ಈ ಒಕ್ಕೂಟದ ಸದಸ್ಯ ದೇಶಗಳಲ್ಲಿ ಆರ್ ಅಂಡ್ ಡಿಗಾಗಿ ಹೆಚ್ಚು ತಲಾ ವೆಚ್ಚ ಮಾಡುವ ದೇಶ ಚೀನಾವಾಗಿದ್ದರೆ, ಎರಡನೇ ಸ್ಥಾನದಲ್ಲಿ ರಷ್ಯಾ ಇದೆ
- ಬ್ರೆಜಿಲ್ ಸಹ ಭಾರತಕ್ಕಿಂತ ಹಲವು ಪಟ್ಟು ಹೆಚ್ಚು ವೆಚ್ಚ ಮಾಡುತ್ತಿದೆ
- ದಕ್ಷಿಣ ಆಫ್ರಿಕಾವು ಇದಕ್ಕಾಗಿ ಮಾಡುತ್ತಿರುವ ತಲಾ ವೆಚ್ಚವು ಭಾರತವು ಮಾಡುತ್ತಿರುವ ತಲಾವೆಚ್ಚಕ್ಕಿಂತ ಒಂದು ಪಟ್ಟು ಹೆಚ್ಚು ಇದೆ


ಸಂಶೋಧನೆಯ ಲಾಭ ಬಳಸಿಕೊಳ್ಳದ ಉದ್ಯಮ

ಕೈಗಾರಿಕೆಗಳ ಬೇಡಿಕೆಗಳಿಗೆ ಅನುಗುಣವಾಗಿ ಸಂಶೋಧನೆಗಳೂ ಆಗಬೇಕು. ಆದರೆ, ವಿಶ್ವವಿದ್ಯಾಲಯಗಳಲ್ಲಿ ಹೇಳಿಕೊಡುವ ಪಾಠಗಳಿಗೂ, ಕೈಗಾರಿಕೆಗಳ ಬೇಡಿಕೆಗಳಿಗೂ ಹೊಂದಿಕೆಯಾಗುತ್ತಿಲ್ಲ ಎಂಬುದನ್ನು ವರದಿ ಗಮನಿಸಿದೆ. ಇದನ್ನು ಪರಿಹರಿಸಬೇಕಾದರೆ, ಈ ಎರಡರ ಮಧ್ಯೆ ಸಮನ್ವಯ ಮಾದರಿಯೊಂದನ್ನು ರೂಪಿಸಬೇಕಾದ ಅಗತ್ಯವಿದೆ. ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳ ಜೊತೆ ಕೆಲಸ ಮಾಡುವುದರಿಂದ ಕೈಗಾರಿಕೆಗಳಿಗೆ ಸಂಶೋಧನೆಯ ಫಲಿತಾಂಶಗಳು ಶೀಘ್ರವಾಗಿ ಲಭ್ಯವಾಗುತ್ತವೆ. ಹಾಗೆಯೇ, ಕೈಗಾರಿಕೆಗಳು ಶೈಕ್ಷಣಿಕ ಸಂಸ್ಥೆಗಳ ಜೊತೆ ಒಡಂಬಡಿಕೆ ಮಾಡಿಕೊಳ್ಳುವುದರಿಂದ ಆರ್ ಅಂಡ್ ಡಿ ಅಥವಾ ಸಂಶೋಧನಾ ಹೊರಗುತ್ತಿಗೆಗೆ ಮಾಡುವ ಖರ್ಚನ್ನು ಉಳಿಸಬಹುದು ಎಂದು ವರದಿ ಸಲಹೆ ನೀಡಿದೆ.

ಸಂಶೋಧನೆಗೆ ಇರುವ ವಿಪುಲ ಅವಕಾಶಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ, ದೇಶದಲ್ಲಿ ಕಳೆದ ಒಂದು ದಶಕದಲ್ಲಿ ವಿಶ್ವವಿದ್ಯಾಲಯಗಳ ಸ್ಥಾಪನೆಯಲ್ಲಿ ಆಗಿರುವ ಬೆಳವಣಿಗೆ ಹಾಗೂ ಸಂಶೋಧನೆಗಳ ಹಕ್ಕುಸ್ವಾಮ್ಯ ಪಡೆಯಲು (ಪೇಟೆಂಟ್) ಸಲ್ಲಿಸಿರುವ ಅರ್ಜಿಗಳ ಸಂಖ್ಯೆಯಲ್ಲಿ ಆಗಿರುವ ಏರಿಕೆಯನ್ನು ಗಮನಿಸಬಹುದು. ಪೇಟೆಂಟ್ ಪಡೆಯುವ ಪ್ರಮಾಣ ವಾರ್ಷಿಕವಾಗಿ ಶೇ 3.63ರಷ್ಟು ಹೆಚ್ಚಳವಾಗುತ್ತಾ ಸಾಗಿದ್ದರೆ, ವಿಶ್ವವಿದ್ಯಾಲಯಗಳ ಸಂಖ್ಯೆ ಸಾವಿರವನ್ನು ದಾಟಿದೆ ಎಂಬುದರ ಮೇಲೆ ವರದಿ ಬೆಳಕು ಚೆಲ್ಲಿದೆ.



ಪೇಟೆಂಟ್‌ಗೆ ಅರ್ಜಿ ಸಲ್ಲಿಕೆ



ಖಾಸಗಿ ವಲಯಕ್ಕೆ ಅವಕಾಶ ಕಡಿಮೆ


(ಶೇಕಡವಾರು ಪ್ರಮಾಣದಲ್ಲಿ)

	ಸರ್ಕಾರ	ಖಾಸಗಿ ಉದ್ಯಮ ವಲಯ	ಉನ್ನತ ಶಿಕ್ಷಣ ಸಂಸ್ಥೆಗಳು	ಸರ್ಕಾರೇತರ ಸಂಸ್ಥೆಗಳು
ಅಮೆರಿಕ	10.3	72.6	12.9	4.2
ಬ್ರಿಟನ್	6.1	69.1	22.5	2.2
ದಕ್ಷಿಣ ಕೊರಿಯ	10	80.3	8.2	1.4
ರಷ್ಯಾ	34.4	55.6	9.7	0.3
ಜಪಾನ್	7.7	79.5	11.5	0.9
ಇಸ್ರೇಲ್	1.5	88.3	9.3	0.9
ಭಾರತ	56.1	36.8	7.1	0
ಫ್ರಾನ್ಸ್	12.5	65.4	20.5	1.6
ಕೆನಡಾ	6.9	50.9	41.7	0.5
ಬೆಲ್ಜಿಯಂ	9.5	70.5	19.4	0.6

ವಿಶ್ವದ ಅಭಿವೃದ್ಧಿ ಹೊಂದಿದ ಮತ್ತು ಪ್ರಮುಖ ದೇಶಗಳಲ್ಲಿ ಆರ್ ಅಂಡ್ ಡಿಯಲ್ಲಿ ಖಾಸಗಿ ಉದ್ಯಮ ವಲಯದ ಭಾಗವಹಿಸುವಿಕೆ ಗಣನೀಯ ಪ್ರಮಾಣದಲ್ಲಿ ಇದೆ. ರಷ್ಯಾದಲ್ಲಿ ಮಾತ್ರ ಆರ್ ಅಂಡ್ ಡಿ ವೆಚ್ಚದಲ್ಲಿ ಶೇ 34ರಷ್ಟನ್ನು ಸರ್ಕಾರ ಭರಿಸುತ್ತಿದ್ದರೆ, ಉಳಿದ ವೆಚ್ಚವನ್ನು ಖಾಸಗಿ ಉದ್ಯಮ ವಲಯ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳು ಭರಿಸುತ್ತಿವೆ. ಉಳಿದಂತೆ ಬೇರೆಲ್ಲಾ ದೇಶಗಳಲ್ಲಿ ಸರ್ಕಾರವು ಮಾಡುತ್ತಿರುವ ವೆಚ್ಚವು ಶೇ 10ರ ಆಸುಪಾಸಿನಲ್ಲಿ ಇದೆ. ಆದರೆ, ಭಾರತದಲ್ಲಿ ಆರ್ ಅಂಡ್ ಡಿಗಾಗಿ ಸರ್ಕಾರ ಮಾಡುತ್ತಿರುವ ವೆಚ್ಚದ ಪ್ರಮಾಣವು ಶೇ 56ಕ್ಕಿಂತಲೂ ಹೆಚ್ಚು. ಖಾಸಗಿ ಉದ್ಯಮ ವಲಯವು ಮಾಡುತ್ತಿರುವ ವೆಚ್ಚವು ಶೇ 36ರಷ್ಟಿದೆ. ಜತೆಗೆ ಉನ್ನತ ಶೈಕ್ಷಣಿಕ ಸಂಸ್ಥೆಗಳು ಮಾಡುತ್ತಿರುವ ವೆಚ್ಚದ ಪ್ರಮಾಣವೂ ತೀರಾ ಕಡಿಮೆ ಇದೆ.

ಆರ್ ಅಂಡ್ ಡಿಯಲ್ಲಿ ಖಾಸಗಿ ಉದ್ಯಮ ವಲಯದ ಭಾಗವಹಿಸುವಿಕೆಗೆ ಕಡಿಮೆ ಅವಕಾಶವಿರುವುದು ಅತ್ಯಂತ ಕಳವಳಕಾರಿ ಸಂಗತಿ ಎಂದು ನೀತಿ ಆಯೋಗವು ತನ್ನ ವರದಿಯಲ್ಲಿ ಹೇಳಿದೆ. ಭಾರತವು ಆರ್ ಅಂಡ್ ಡಿಗಾಗಿ ವಿನಿಯೋಗ ಮಾಡುತ್ತಿರುವ ಒಟ್ಟು ವೆಚ್ಚದಲ್ಲಿ ಶೇ 43ರಷ್ಟು ಮೊತ್ತವು ರಕ್ಷಣೆ ಮತ್ತು ಬಾಹ್ಯಾಕಾಶ ಸಂಶೋಧನೆಗೆ ಸಂಬಂಧಿಸಿದ್ದಾಗಿದೆ. ಉಳಿದ ಕ್ಷೇತ್ರಗಳಲ್ಲೂ ಸರ್ಕಾರಿ ಸಂಸ್ಥೆಗಳದ್ದೇ ಪಾರಮ್ಯವಿದೆ. ಇವುಗಳ ಮಧ್ಯೆ ಖಾಸಗಿ ಉದ್ಯಮ ಸಂಸ್ಥೆಗಳು ಪೈಪೋಟಿ ನಡೆಸಬೇಕಿದೆ. ಇದು ಉತ್ತಮವಾದ ಸ್ಥಿತಿಯಲ್ಲ ಎಂದು ನೀತಿ ಆಯೋಗವು ತನ್ನ ವರದಿಯಲ್ಲಿ ಕಳವಳ ವ್ಯಕ್ತಪಡಿಸಿದೆ.

ಬೇರೆಲ್ಲಾ ದೇಶಗಳಲ್ಲಿ ಆರ್ ಅಂಡ್ ಡಿಯಲ್ಲಿ ಸರ್ಕಾರೇತರ ಸಂಸ್ಥೆಗಳ ಭಾಗವಹಿಸುವಿಕೆ ಕಡಿಮೆ ಇದ್ದರೂ, ಅವು ಈ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿವೆ. ಆದರೆ ಭಾರತದಲ್ಲಿ ಸರ್ಕಾರೇತರ ಸಂಸ್ಥೆಗಳ ಭಾಗವಹಿಸುವಿಕೆ ಇಲ್ಲವೇ ಇಲ್ಲ





ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 181

ಬೃಹಸ್ಪತಿ ಮಾತಿಗೆ ಚಿಂತಿತನಾದ ಇಂದ್ರ

ವೀರಭದ್ರ ಮತ್ತವನ ಶಿವಗಣಗಳೊಂದಿಗೆ ಯುದ್ಧಮಾಡಲು ಇಂದ್ರ ಐರಾವತವನ್ನೇರಿದರೆ, ಅಗ್ನಿ ಆಡನ್ನು, ಯಮನು ಕೋಣವನ್ನು, ನಿರ್‌ಋತಿಯು ಪ್ರೇತವನ್ನು, ವರುಣನು ಮೊಸಳೆಯನ್ನು, ವಾಯುವು ಮೃಗಗಳನ್ನು, ಕುಬೇರನು ಪುಷ್ಪಕವಿಮಾನವನ್ನು, ಇನ್ನೂ ಕೆಲ ದೇವತೆಗಳು, ಚಾರಣರು ಗುಹ್ಯಕರು ತಮ್ಮ ತಮ್ಮ ವಾಹನವೇರಿ ಸಿದ್ಧರಾದರು. ಇದನ್ನು ನೋಡಿ ದಕ್ಷನಿಗೆ ಸಂತೋಷಗಿ, 'ಎಲೈ ದೇವತೆಗಳೇ, ನನ್ನ ಯಜ್ಞ ಹಾಳುಮಾಡಲು ಬಂದಿರುವ ಶಿವಗಣಗಳನ್ನು ಹಿಮ್ಮೆಟ್ಟಿಸಿ. ನಿಮಗೆ ಶುಭವಾಗಲಿ' ಎಂದು ಹಾರೈಸಿದನು.

ಇಂದ್ರ ಮೊದಲಾದ ದೇವತೆಗಳು ಯುದ್ಧಮಾಡಲು ಹೊರಟರು. ದೇವತೆಗಳಿಗೂ ಶಿವಗಣಗಳಿಗೂ ಮಹಾಯುದ್ಧವೇ ನಡೆಯಿತು. ಹರಿತವಾದ ಬಾಣಗಳು, ತೋಮರ ಮುಂತಾದ ಆಯುಧಗಳಿಂದ ಪರಸ್ಪರ ಹೊಡೆದಾಡಿದರು. ರಣಮಹೋತ್ಸವದಲ್ಲಿ ಶಂಖಗಳು, ಭೇರಿಗಳು, ಪಟಗಳು, ಕಹಳೆಗಳು, ಡಿಂಡಿಮ ಮುಂತಾದ ವಾದ್ಯಗಳ ಘೋಷವಾಗುತ್ತಿತ್ತು. ಆರಂಭದಲ್ಲಿ ಭೃಗುಮುನಿಯ ಮಂತ್ರಬಲದಿಂದ ಇಂದ್ರಾದಿ ದೇವತೆಗಳ ಕೈ ಮೇಲಾಯಿತು. ಯಜ್ಞದ ಅಧ್ವರ್ಯುವಾದ ಭೃಗುಮುನಿಯು ತನ್ನ ಮಂತ್ರಬಲದಿಂದ ಶಿವಗಣಗಳನ್ನು ಉಚ್ಚಾಟನೆ ಮಾಡಿ, ದೇವತೆಗಳಿಗೆ ಹವಿರ್ಭಾಗ ಲಭಿಸಿ, ಯಜ್ಞದ ಯಜಮಾನನಾದ ದಕ್ಷನಿಗೆ ಯಜ್ಞಫಲ ಸಿಗುವುದಕ್ಕಾಗಿ ಸಕಲ ಪ್ರಯತ್ನ ಮಾಡುತ್ತಿದ್ದ. ದೇವತೆಗಳ ಪ್ರಹಾರಕ್ಕೆ ಶಿವಗಣಗಳಲ್ಲಿ ಕೆಲವರು ನಾಶಹೊಂದಿದರೆ, ಕೆಲವರು ಪರಾಙ್ಮುಖರಾದರು. ಹಲವರು ಪರಾಜಯವನ್ನು ಹೊಂದಿದರು.

ಇದನ್ನು ನೋಡಿ ವೀರಭದ್ರ ಕೋಪಗೊಂಡು ಭೂತ, ಪ್ರೇತ ಮತ್ತು ಪಿಶಾಚಿಗಳೊಡನೆ ಮುನ್ನುಗ್ಗಿ ಬಂದ. ಕೆಲವು ಗಣಗಳು ವೃಷಭವನ್ನೇರಿ ಬಂದರು. ವೀರಭದ್ರನ ತ್ರಿಶೂಲದ ಪ್ರಹಾರಕ್ಕೆ ದೇವತೆಗಳು ತತ್ತರಿಸಿದರು. ದೇವತೆಗಳು, ಯಕ್ಷರು, ಸಾಧ್ಯರು, ಗುಹ್ಯಕರು, ಚಾರಣರೆಲ್ಲರ ಮೇಲೆ ಶಿವಗಣಗಳು ಶೂಲಾಯುಧಗಳಿಂದ ಹೊಡೆದು ಉರುಳಿಸಿದರು. ಇದರಿಂದ ದೇವತೆಗಳಲ್ಲಿ ಕೆಲವರು ಶಿವಗಣಗಳ ಖಡ್ಗಗಳಿಂದ ಕತ್ತರಿಸಲ್ಪಟ್ಟರೆ, ಕೆಲವರು ಮುದ್ಗರಗಳಿಂದ ಚೂರುಚೂರಾದರು. ಇನ್ನು ಕೆಲವರು ಶಸ್ತ್ರಗಳಿಂದ ಏಟುಗಳನ್ನು ತಿಂದು ಮೂರ್ಛಿತರಾದರು.

ಹೀಗೆ ಶಿವಗಣಗಳಿಂದ ಪರಾಜಿತರಾದ ದೇವತೆಗಳೆಲ್ಲರೂ ಯಾಗಶಾಲೆಯಿಂದ ಪಲಾಯನಮಾಡಿ ತಮ್ಮ ಸ್ಥಾನವಾದ ಸ್ವರ್ಗವನ್ನು ಸೇರಿದರು.

ಇಂದ್ರ ಮತ್ತಿತರ ಮಹಾವೀರರಾದ ಲೋಕಪಾಲಕರು ಮಾತ್ರ ಧೈರ್ಯದಿಂದ ಶಿವಗಣಗಳನ್ನು ಎದುರಿಸಿ ನಿಂತರು. ಇನ್ನು ವೀರಭದ್ರನ ಹೊಡೆತ ತಾಳಲು ಅಸಾಧ್ಯ ಅನ್ನಿಸಿದಾಗ ಲೋಕಪಾಲಕರೆಲ್ಲರೂ ಬೃಹಸ್ಪತಿಯ ಬಳಿಗೆ ಹೋಗಿ 'ದೇವಗುರುವಾದ ಓ ಬ್ರಹಸ್ಪತಿಯೇ, ನಮಗೆ ಜಯವು ಹೇಗೆ ಲಭಿಸುವುದೆಂಬುದನ್ನು ಹೇಳಿ ನಮ್ಮನ್ನು ರಕ್ಷಿಸು' ಎಂದು ಅಂಗಲಾಚಿದರು.

ಬೃಹಸ್ಪತಿಯು 'ಎಲೈ ಇಂದ್ರನೆ, ಸರ್ವಕರ್ಮಗಳಿಗೂ ಫಲವನ್ನು ಕೊಡುವಂತಹವನು ಈಶ್ವರನೋರ್ವನೆ. ಅವನೂ ತನ್ನನ್ನು ಸೃಷ್ಟಿಸಿದ ಪರಮೇಶ್ವರನ ಮಹಿಮೆಯನ್ನು ತಿಳಿಯಲಾರನು. ಮಂತ್ರಗಳು, ಔಷಧಿಗಳು, ಅಭಿಚಾರಕರ್ಮಗಳು, ಲೌಕಿಕ ಕರ್ಮಗಳು, ವೇದಗಳು, ಶಾಸ್ತ್ರಗಳು, ವೇದಾಂತ ಸಹ ಆ ಪರಮೇಶ್ವರನನ್ನು ಸಾಕ್ಷಾತ್ ತಿಳಿಸಲಾರವು. ಮಹೇಶ್ವರನನ್ನು ಯಾವ ವೇದಗಳು ತಿಳಿಸಲಾರವು. ಆದರೆ ಅವನನ್ನೇ ಭಕ್ತಿಯಿಂದ 'ನೀನೇ ಶರಣು' ಎಂದು ಭಜಿಸುವ ಶಿವಭಕ್ತರು ಮಾತ್ರ ಆ ಶಿವನನ್ನು ತಿಳಿಯಬಲ್ಲರು. ಇನ್ಯಾವ ರೀತಿಯಿಂದಲೂ ತಿಳಿಯಲು ಅಸಾಧ್ಯವೆಂದು ಶ್ರುತಿಯೇ ಹೇಳಿರುವುದು. ಶಾಂತಿಯಿಂದ, ಉಪಾಸನೆಯಿಂದ, ಯಾವ ವಿಕಾರವೂ ಇಲ್ಲದ ದೃಷ್ಟಿಯಿಂದ ಮತ್ತು ಶಿವನ ಅನುಗ್ರಹದಿಂದ ಮಾತ್ರ ಪರಮಾತ್ಮನನ್ನು ತಿಳಿಯಬಹುದು. ಇನ್ಯಾವ ಮಾರ್ಗದಿಂದಲೂ ಸಾಧ್ಯವಿಲ್ಲ. ಆದರೆ ಎಲೈ ಇಂದ್ರನೇ, ತಿಳಿವಳಿಕೆಯಿಲ್ಲದೆ ನೀನು ಈ ಯಜ್ಞಕ್ಕೆ ಬಂದಿರುವೆ. ತಿಳಿವಳಿಕೆಯುಳ್ಳ ರುದ್ರಗಣಗಳು ಯಜ್ಞನಾಶಕ್ಕಾಗಿ ಬಂದಿವೆ. ಯಜ್ಞನಾಶವನ್ನು ತಡೆಯಲು ಈಗ ಯಾವ ಮಾರ್ಗವೂ ಉಳಿದಿಲ್ಲ' ಎಂದನು. ಬೃಹಸ್ಪತಿ ಮಾತನ್ನು ಕೇಳಿ ದೇವತೆಗಳು ಚಿಂತೆಗೊಳಗಾದರು.

ಗುಂಡಣ್ಣ





ಬೆರಗಿನ ಬೆಳಕು

ಗುರುರಾಜ ಕರಜಗಿ

ಪಾಶ ಕತ್ತರಿಸಿದ ಕ್ಷಣ

ಧನ್ಯತಮವಾ ಘಳಿಗೆ, ಪುಣ್ಯತಮ ವಾ ಘಳಿಗೆ |
ನಿನ್ನ ಮಮತೆಯ ನೂಲ ವಿಧಿಯೆ ಪರಿದಂದು ||
ಉನ್ನತಿಯನಾತ್ಮವನು ತಡೆದಿಡುವ ಪಾಶಗಳು |
ಛಿನ್ನವಾದಂದೆ ಸೊಗ – ಮಂಕುತಿಮ್ಮ || 678 ||

ಪದ-ಅರ್ಥ: ಧನ್ಯತಮವಾಘಳಿಗೆ = ಧನ್ಯತಮ + ಆ + ಘಳಿಗೆ, ಪರಿದಂದು = ಹರಿದಂದು, ಉನ್ನತಿಯಿನಾತ್ಮವನು = ಉನ್ನತಿಯಿಂ (ಉನ್ನತಿಯಿದ) + ಆತ್ಮವನು, ತಡೆದಿಡುವ = ತಡೆದು + ಇಡುವ, ಛಿನ್ನವಾದಂತೆ = ಛಿನ್ನವಾದ(ಕತ್ತರಿಸಿದ) + ಅಂದೆ

ವಾಚ್ಯಾರ್ಥ: ನಿನ್ನ ಮಮತೆಯ ನೂಲನ್ನು ವಿಧಿ ಹರಿದ ಕ್ಷಣವೆ ಧನ್ಯತಮ ಮತ್ತು ಪುಣ್ಯತಮ. ಆ ನೂಲು ನಿನ್ನ ಆತ್ಮವನ್ನು ಉನ್ನತಿಗೆ ಹೋಗದಂತೆ ತಡೆದಿಡುವ ಪಾಶ. ಅದು ಕತ್ತರಿಸಿದ ಕ್ಷಣವೆ ಸೊಗಸು.

ವಿವರಣೆ: ಈಗಿನ ಹಾವೇರಿ ಜಿಲ್ಲೆಗೆ ಸೇರಿದ ಗ್ರಾಮ ಕರ್ಜಗಿ. ವರದಾನದಿಯ ತೀರದಲ್ಲಿರುವ ಈ ಗ್ರಾಮದಲ್ಲಿ ಪ್ರತಿಮನೆಯಲ್ಲಿ ವೇದಾಂತಿಗಳು, ಪಂಡಿತರು, ಪ್ರವಚನಾಚಾರ್ಯರಿದ್ದರು. ಕರ್ಜಗಿಯ ಕರಣಿಕರ ಮನೆಯಲ್ಲಿ ಹುಟ್ಟಿದವರು ದಾಸಪ್ಪ. ವಂಶೀಕವಾಗಿ ಬಂದ ಕರಣಿಕ ವೃತ್ತಿ, ಬೇಕಾದಷ್ಟು ಹೊಲಮನೆಗಳಿಂದಾಗಿ ದಾಸಪ್ಪನಿಗೆ ಯಾವ ಕೊರತೆಯೂ ಇರಲಿಲ್ಲ. ಅವನಿಗೆ ಯಥೋಚಿತವಾದ ವಿದ್ಯಾಭ್ಯಾಸವಾಯಿತು. ಅದು ಯಾವ ಪ್ರಾರಬ್ಧವೋ ದಾಸಪ್ಪ ಯೌವನಾವಸ್ಥೆಗೆ ಬರುವುದರಲ್ಲಿ ಸ್ವೇಚ್ಛಾಚಾರಿಯಾದ, ವಿಲಾಸಿಯಾದ. ತಂದೆ ತಾಯಿಯರು ತೀರಿದ ಮೇಲಂತೂ ಅವನನ್ನು ಹಿಡಿಯುವವರು ಯಾರೂ ಇರಲಿಲ್ಲ. ದಾಸಪ್ಪ ವೇಶ್ಯಾಲೋಲುಪನಾದ. ಅವನ ಮದುವೆಯಾದರೂ ವ್ಯವಹಾರದಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ.ಒಂದು ಬಾರಿ ಜಗನ್ನಾಥದಾಸರು, ತಮ್ಮ ಶಿಷ್ಯರಾದ ಪ್ರಾಣೇಶ ದಾಸರನ್ನು ಕರೆದುಕೊಂಡು ಕರ್ಜಗಿಗೆ ಬಂದರು. ನೇರವಾಗಿ ದಾಸಪ್ಪನ ಮನೆಗೆ ಹೋದರು. ದಾಸಪ್ಪನಿಗೆ ಅವರ ಪೂಜೆ, ಪುನಸ್ಕಾರಗಳಲ್ಲಿ ಯಾವ ಆಸಕ್ತಿಯೂ ಇರಲಿಲ್ಲ. ಆದರೂ ಹೆಂಡತಿಯ ಒತ್ತಾಯಕ್ಕೆ ಮಣಿದು ಸಂಜೆಯ ಪೂಜೆ ನಡೆಯುವಾಗ ಮುಂದೆ ಕುಳಿತ.

ಜಗನ್ನಾಥದಾಸರು ತಮ್ಮ ಪ್ರವಚನದ ಪ್ರಾರಂಭಕ್ಕೆ ಮೊದಲು ಪ್ರಾಣೇಶ ದಾಸರಿಗೆ ಒಂದು ಕೀರ್ತನೆಯನ್ನು ಹಾಡಲು ಹೇಳಿದರು. ಗುರುಗಳಿಗೆ ನಮಿಸಿ ತಮ್ಮದೇ ಕೀರ್ತನೆಯನ್ನು ತಮ್ಮ ಅದ್ಭುತ ಕಂಠದಲ್ಲಿ ಹಾಡಿದರು. ಆ ಹಾಡು ಹೀಗಿತ್ತು.

ಆದದ್ದಾಯಿತು ಇನ್ನಾದರೂ ಒಳ್ಳೇ
ಹಾದಿ ಹಿಡಿಯೋ ಪ್ರಾಣಿ
ಈ ದುರ್ನಡತೆ ಹಿಂದ್ಹೋದರೆ ಇಹಪರದಿ
ಮೋದವೆಂದಿಗೂ ಕಾಣೆ ಪ್ರಾಣಿ || ಪ ||

ಈ ಹಾಡು ಕೇಳಿದಾಕ್ಷಣ ದಾಸಪ್ಪನಿಗೆ ಏನೋ ತಳಮಳವಾದಂತಾಯಿತು. ಮರುಕ್ಷಣವೇ ಎಲ್ಲ ತಳಮಳ ಕರಗಿ ನಿರಾಳವಾದಂತಾಯಿತು. ಎದ್ದು ಹೋಗಿ ದಾಸರ ಪಾದಗಳಿಗೆರಗಿ ದಾಸತ್ವ ಕೊಡುವಂತೆ ಬೇಡಿದ. ಅಂದಿನಿಂದ ಕರ್ಜಗಿ ದಾಸಪ್ಪ ಶ್ರೀದವಿಠಲ ಎಂಬ ದಾಸರಾಗಿ ಬದಲಾಗಿ ಹೋದರು.

ಕಗ್ಗದ ಧ್ವನಿ ಇದೇ. ಯಾವ ಕ್ಷಣದಲ್ಲಿ ಮಮತೆಯ, ಮೋಹದ ಹಗ್ಗಗಳು ಹರಿದು ಹೋಗುತ್ತವೆಯೋ, ಅದೇ ಅಮೃತ ಕ್ಷಣ, ಧನ್ಯತೆಯ ಕ್ಷಣ, ಪುಣ್ಯದ ಕ್ಷಣ. ಒಂದು ಸಲ ಮಮತೆಯ ನೂಲು ಕಡಿಯಿತೋ, ಬದುಕು ಉನ್ನತಿಯತ್ತ ಸಾಗುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಜುಲೈ 25, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ದ್ವಾದಶಿ ಗಂ. 16-16, ನಕ್ಷತ್ರ: ಮೃಗಶಿರ ಗಂ. 25-06 ಯೋಗ: ಧ್ರುವ ಗಂ. 15-03, ಕರಣ: ತೈತಿಲ ಗಂ. 16-16, ಕರ್ಕಾಟಕ ಮಾಸದ 08 ನೇ ದಿನ.
ರಾಹುಕಾಲ : ಬೆಳಿಗ್ಗೆ 07:30 – 09:00
ಸೂರ್ಯೋದಯ : 06-18 ಸೂರ್ಯಾಸ್ತ : 06-57
ಮುಸ್ಲಿಂ ದಿನಾಂಕ : 25 ಜುಲ್‌ಹಿಜಾನ್
ದಿನ ವಿಶೇಷ : ಚಂದ್ರಪ್ರದೋಷ , ಅದೃಷ್ಟ ಸಂಖ್ಯೆ : 2, 8

ಮೇಷ: ಸಹಾಯ ಅಪೇಕ್ಷಿಗಳಿಗೆ ಸಹಾಯ ಹಸ್ತ ತೋರುವುದು ದೇವರು ಮೆಚ್ಚುವ ಕೆಲಸವೆಂದು ತಿಳಿದುಬರಲಿದೆ. ಮಕ್ಕಳೊಂದಿಗೆ ಸುಖ ಭೋಜನ ನಡೆಯುವುದು. ಮನೆಯವರಿಗಾಗಿ ವಸ್ತು ಖರೀದಿ ನಡೆಸುವಿರಿ.

ವೃಷಭ: ವೃತ್ತಿಯಲ್ಲಿ ಅಧಿಕಾರಿಗಳು ನಿಮ್ಮ ಕಾರ್ಯಸಾಧನೆಯನ್ನು ಗುರುತಿಸಿ ಕೆಲಸಕ್ಕೆ ಅನುಕೂಲವಾಗುವ ರೀತಿಯಲ್ಲಿ ನಿಯಮವನ್ನು ಸಡಿಲಗೊಳಿಸುವರು ಹಾಗೂ ಹೆಚ್ಚಿನ ಸೌಲಭ್ಯ ಒದಗಿಸಿ ಕೊಡುವರು. ಬಿಳಿ ಬಣ್ಣ ಶುಭ ತರಲಿದೆ.

ಮಿಥುನ: ನೀವಿಂದು ಮಾಡುವ ಎಲ್ಲಾ ಕೆಲಸಗಳೂ ಉತ್ತಮ ಉದ್ದೇಶವನ್ನೇ ಹೊಂದಿರುವುದು. ವೃತ್ತಿಪರ ಗೊತ್ತಿಲ್ಲದ ವಿಚಾರ ಕೇಳಿ ತಿಳಿದುಕೊಳ್ಳುವ ಮೂಲಕ ನಿಮ್ಮ ಕೆಲಸಗಳು ಸುಗಮವಾಗುವುದು.

ಕರ್ಕಾಟಕ: ಉನ್ನತ ವಿದ್ಯಾಭ್ಯಾಸ ಮಾಡುವ ನಿಮ್ಮ ಕನಸಿಗೆ, ಪರಿಚಿತರಿಂದ ಆರ್ಥಿಕ ಬಲ ಸಿಗಲಿದೆ. ಕೈಮಗ್ಗದ ವಸ್ತುಗಳ ವ್ಯಾಪಾರಿಗಳಿಗೆ ವಿದೇಶದಿಂದ ಹೆಚ್ಚಿನ ಪ್ರಾಮುಖ್ಯತೆ ಉಂಟಾಗುತ್ತದೆ.

ಸಿಂಹ: ಉಳಿತಾಯದ ವಿಷಯದಲ್ಲಿ ಆರಿಸಿಕೊಳ್ಳುವ ನಿರ್ಧಾರಕ್ಕೆ ಅಡೆತಡೆಗಳು ಉಂಟಾಗಿ ಹಲವು ರೀತಿಯಲ್ಲಿ ಹಣ ವ್ಯಯವಾಗುತ್ತದೆ. ದೇವರ ಮತ್ತು ಹಿರಿಯರ ಅನುಗ್ರಹ ಸಂಪಾದಿಸುವುದರಿಂದ ಸಮಸ್ಯೆಗಳಿಂದ ಮುಕ್ತಿ.

ಕನ್ಯಾ: ಅವಕಾಶವನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂದು ಯೋಚಿಸಿ ಉಪಯೋಗಿಸಿಕೊಂಡರೆ ಉತ್ತಮ. ಕಚೇರಿ ಕೆಲಸಗಳನ್ನು ಯಾವುದೇ ಅಪೇಕ್ಷೆಗಳಿಲ್ಲದೆ ಸಮರ್ಪಣಾ ಭಾವನೆಯಿಂದ ನಿರ್ವಹಿಸಿ.

ತುಲಾ: ನಿಮ್ಮ ಪ್ರಯತ್ನಗಳು ವ್ಯರ್ಥವಲ್ಲ ಎಂಬುದು ನಿಮಗೆ ಈ ದಿನ ತಿಳಿಯುವುದು. ನಿಧಾನವಾಗಿಯಾದರೂ ಅದರ ಲಾಭ ಬಂದು ಕೈ ಸೇರಿದ ಸಂತಸ ನಿಮ್ಮದಾಗುವುದು. ನಿಜವಾದ ಗೆಳೆಯ ಯಾರೆಂದು ಈ ದಿನ ಅರಿತುಕೊಳ್ಳುವಿರಿ.

ವೃಶ್ಚಿಕ: ಇಂದು ನಿಮ್ಮ ಮನಸ್ಸು ಚಂಚಲವಾಗಿರುವುದು. ಯಾರ ಮಾತಿಗೂ ಮರುಳಾಗದೆ ನಿಲುವನ್ನು ತೀರ್ಮಾನಿಸುವುದು ಉತ್ತಮ. ಸಂಸ್ಥೆಯ ಅಭಿವೃದ್ಧಿಗಾಗಿ ಕಾರ್ಮಿಕ ವರ್ಗದೊಡನೆ ಸಕಾರಾತ್ಮಕ ಮಾತುಕತೆ ನಡೆಸಿ.

ಧನು: ವೃತ್ತಿಗೆ ಸಂಬಂಧಿಸಿದಂತೆ ಕಷ್ಟಪಟ್ಟು, ಜೊತೆಯಲ್ಲಿ ಬುದ್ಧಿವಂತಿಕೆ ಬಳಸಿ ಕೆಲಸ ಮಾಡಬೇಕಾಗುತ್ತದೆ. ವಿದ್ಯಾರ್ಥಿಗಳಿಗೆ ಗುರಿ ಮುಟ್ಟುವ ವಿಚಾರದಲ್ಲಿ ಅತಿಯಾದ ಪ್ರಯತ್ನ ಅತ್ಯಗತ್ಯ. ಅನಿರೀಕ್ಷಿತ ಪ್ರಯಾಣ ತೋರಿಬರಲಿದೆ.

ಮಕರ: ಸಾಮಾನ್ಯವಾಗಿ ನೀವು ಬದಲಾವಣೆಗಳಿಗೆ ಹೊಂದುವುದಿಲ್ಲ. ಆದರೆ ಈ ಬಾರಿಯ ನಿಮ್ಮ ಆಲೋಚನೆ ಹೊಸತನ ಹೊಂದಿರುತ್ತದೆ. ಕೌಟುಂಬಿಕವಾಗಿ ಸರ್ವ ಸದಸ್ಯರ ಜೊತೆಯಲ್ಲಿ ಸಂಭ್ರಮಿಸುವ ಸಮಯವಿದು.

ಕುಂಭ: ಕೆಲಸ ಕೊಂಚ ನಿಧಾನವಾಗಿ ಸಾಗುತ್ತಿದೆ ಎನಿಸಿದರೂ ಚಿಂತೆ ಬೇಡ. ವ್ಯವಸ್ಥಿತವಾಗಿ ಮಾಹಿತಿಗಳನ್ನು ಕಲೆಹಾಕುವುದರಿಂದ ಕ್ರಿಯಾತ್ಮಕ ಯೋಚನೆಗಳು ಬರುವುದು. ಮಗನಿಗೆ ಉದ್ಯೋಗ ದೊರೆತು ಸಂತೋಷ ಆಗುವುದು.

ಮೀನ: ವಾಣಿಜ್ಯ ಸಂಸ್ಥೆಯೊಂದರಲ್ಲಿ ಕಾಂಟ್ರಾಕ್ಟ್ ಪಡೆಯುವ ಪ್ರಯತ್ನವು ಫಲಕಾರಿ ಆಗಲಿದೆ, ಆದರೆ ಉದ್ಯೋಗಕ್ಕಾಗಿ ನಿಮ್ಮ ಖಾಸಗಿ ಜೀವನವನ್ನೇ ತ್ಯಾಗ ಮಾಡಬೇಕಾಗಬಹುದು. ಶಿಕ್ಷಣ ಕ್ಷೇತ್ರದವರಿಗೆ ತಾಳ್ಮೆ ಇರಲಿ.

ಪದಬಂಧ 5029


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹಾರವನ್ನು ಹಿಡಿದಿರುವ ಬ್ರಾಹ್ಮಣ!(3)
4.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ(4)
6.ನೂರು ವರ್ಷಗಳ ಕಾಲ ಬದುಕುವವನು(4)
8.ತಿರುಗಿಸಿ ನೋಡಿದರೂ ಇದು ಹೊಸತು(3)
11.ಬಣ್ಣದ ದಾರಗಳಿಂದ ಬಟ್ಟೆಮೇಲೆ ಮಾಡಿದ ಹೆಣಿಗೆ(3)
13.ಹಸುವಿನ ಬಳಿಯಿರುವ ಎಳೆಮಗು(4)
17.ಇದು ಕೊಬ್ಬಿದ ಆನೆ(4)
18.ಲೀಲಾಜಾಲವಾಗಿ ಹಾಕಿದ ಹರಾಜು(3)

ಮೇಲಿಂದ ಕೆಳಕ್ಕೆ

1.ಹಾರಿ ಬಂದು ಉಪಸ್ಥಿತಿಯಾಗಿರುವಿಕೆ!(3)
2.ಮಾವನ ಆದಾಯ!(4)
3.ಕಡಿಮೆ ಆಯುಸ್ಸುಳ್ಳವನು(3)
5.ಪರವಶನಾಗಿರುವಾಗ ಆಧೀನತೆ(2)
7.ಕಾರಿನಲ್ಲಿ ಕುಳಿತು ಆಡಿದ ಬೇಟೆ(3)
9.ನಡುವೆಯೇ ಆರಂಭವಾಗಿರುವ ಕಂಪನ(3)
10.ವಿವಾದವಿಲ್ಲದೇ ನಡೆದಿರುವ ಮದುವೆ(3)
12.ಎಳ್ಳು ನೀರು ಬಿಡುವಿಕೆ(4)
14.ಮಪ್ತಿಯಲ್ಲಿದ್ದಾಗ ಅವರಿಸಿದ ಗಾಢನಿದ್ರೆ(3)
15.ಸುಗಮವಾಗಿ ಕಿತ್ತು ತಂದಿರುವ ಹೂ(2)
16.ಧಾನ್ಯಗಳನ್ನು ಶೇಖರಿಸುವ ನೆಲಮಾಳಿಗೆ(3)



5028 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪರಿಚ್ಛೇದ3.ಪರಾಕ್ರಮ5.ರಮಣ6.ತಿಲಕ 8.ಲಕ್ಷಣ 9.ಸೆಲೆ10.ಲಜ್ಜೆ11.ಬಡಾಯಿ12.ಕೆಲಸ14.ಪಾಲನೆ16.ರಿಯಾಯಿತಿ 17.ಪರಭಾರೆ

ಮೇಲಿಂದ ಕೆಳಕ್ಕೆ: 1.ಪದ್ಧತಿ2.ದರ3.ಪಣ4.ಮರಣ7.ಕಡಲೆಕಾಯಿ8.ಲವಲವಿಕೆ 11.ಬಸುರಿ13.ಸಕ್ಕರೆ14.ಪಾತಿ15.ನೆಪ

ಸುಡೊಕು 5415

		1			7		3	
			2	3				
5		2		1		9		7
2		5					7	
				5	3	8		9
	9		8				5	
4		3			2			
	5			4		7	9	2
7		9	6		5		1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5414 ಸುಡೊಕು

8	9	5	6	7	2	4	1	3
7	3	1	9	5	4	6	8	2
6	2	4	3	1	8	7	5	9
5	8	3	7	6	9	1	2	4
1	7	6	2	4	5	3	9	8
2	4	9	8	3	1	5	6	7
9	5	7	1	8	3	2	4	6
4	6	2	5	9	7	8	3	1
3	1	8	4	2	6	9	7	5

82ಕ್ಕೆ ಕುಸಿಯಲಿದೆ ರೂಪಾಯಿ

ವ್ಯಾಪಾರ ಕೊರತೆ ಹೆಚ್ಚಳ: ಆರ್ಥಿಕ ತಜ್ಞರ ಅಭಿಪ್ರಾಯ



ನವದೆಹಲಿ (ಪಿಟಿಐ): ಭಾರತದ ರೂಪಾಯಿಯು ಅಲ್ಪಾವಧಿಯಲ್ಲಿ ಅಮೆರಿಕದ ಡಾಲರ್ ಎದುರು ₹ 82ಕ್ಕೆ ಕುಸಿತ ಕಾಣುವ ಸಾಧ್ಯತೆ ಇದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ದೇಶದಲ್ಲಿ ವ್ಯಾಪಾರ ಕೊರತೆ ಅಂತರ ಹೆಚ್ಚಾಗುತ್ತಿದೆ. ಇನ್ನೊಂದೆಡೆ, ಹಣದುಬ್ಬರ ನಿಯಂತ್ರಿಸಲು ಅಮೆರಿಕದ ಫೆಡರಲ್ ರಿಸರ್ವ್ ಹೆಚ್ಚಿನ ಪ್ರಮಾಣದಲ್ಲಿ ಬಡ್ಡಿದರ ಏರಿಕೆ ಮಾಡುವ ನಿರೀಕ್ಷೆ ಇದೆ. ಈ ಕಾರಣಗಳಿಂದಾಗಿ ರೂಪಾಯಿ ಮೌಲ್ಯವು ₹ 82ಕ್ಕೆ ಕುಸಿಯಲಿದೆ ಎಂದು ತಿಳಿಸಿದ್ದಾರೆ.

ಫೆಡರಲ್ ರಿಸರ್ವ್ ಇದೇ 26 ಮತ್ತು 27ರಂದು ಸಭೆ ಸೇರಲಿದ್ದು, ಬಡ್ಡಿದರವನ್ನು ಶೇ 0.50 ರಿಂದ ಶೇ 0.75ರವರೆಗೆ ಹೆಚ್ಚಿಸಲಿದೆ ಎನ್ನುವುದು ಮಾರುಕಟ್ಟೆ ತಜ್ಞರ ಅಭಿಪ್ರಾಯ. ಇದರಿಂದಾಗಿ ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಂದ ಬಂಡವಾಳ ಹಿಂತೆಗೆತ ಆಗಲಿದೆ.

ಡಾಲರ್ ಹೊರಹರಿವು ಮತ್ತು ಕಚ್ಚಾ ತೈಲ ದರವು ನಿರೀಕ್ಷೆಗಿಂತ ಹೆಚ್ಚಿನ ಏರಿಕೆ ಕಂಡಿರುವುದರಿಂದ ರೂಪಾಯಿ ಮೌಲ್ಯವು ಇನ್ನಷ್ಟು ಇಳಿಕೆ ಆಗಲಿದೆ. ಕಳೆದ ವಾರ ರೂಪಾಯಿ ಮೌಲ್ಯವು ಸಾರ್ವಕಾಲಿಕ ಕನಿಷ್ಠ ಮಟ್ಟವಾದ ₹ 80.06ಕ್ಕೆ ಕುಸಿದಿತ್ತು.

‘ಪ್ರಸ್ತುತ ರಾಜಕೀಯ ಸ್ಥಿತಿಯಲ್ಲಿ ಡಾಲರ್ ಎದುರು ರೂಪಾಯಿಯು ₹ 81ಕ್ಕೂ ಹೆಚ್ಚಿನ ಇಳಿಕೆ ಕಾಣಲಿದೆ. ವರ್ಷಾಂತ್ಯದ ವೇಳೆಗೆ ₹ 79ರ ಆಸುಪಾಸಿನಲ್ಲಿ ಇರಲಿದೆ’ ಎಂದು ಇಂಡಿಯಾ ರೇಟಿಂಗ್ಸ್ ಆ್ಯಂಡ್ ರಿಸರ್ಚ್‌ನ ಮುಖ್ಯ ಅರ್ಥಶಾಸ್ತ್ರಜ್ಞ ಸುನಿಲ್ ಕುಮಾರ್ ಸಿನ್ಹಾ ಹೇಳಿದ್ದಾರೆ.

ವಿದೇಶಿ ಬಂಡವಾಳ ಒಳಹರಿವಿನಲ್ಲಿ ಇಳಿಕೆ ಕಂಡಿರುವುದು ಹಾಗೂ ಅಮೆರಿಕದ ಫೆಡರಲ್ ರಿಸರ್ವ್ ಈ ವರ್ಷ ಬಡ್ಡಿದರದಲ್ಲಿ ಮಾಡಲಿರುವ ಏರಿಕೆಯನ್ನೂ ಒಳಗೊಂಡು ಇನ್ನೂ ಹಲವು ಅಂಶಗಳಿಂದಾಗಿ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ರೂಪಾಯಿಯು ₹82ಕ್ಕೆ ಕುಸಿತ ಕಾಣಲಿದೆ ಎಂದು ನೊಮುರಾ ಸಂಸ್ಥೆ ಅಂದಾಜಿಸಿದೆ.

ಅಲ್ಪಾವಧಿಯಲ್ಲಿ ರೂಪಾಯಿಯು ಒತ್ತಡದಲ್ಲಿಯೇ ಇರಲಿದೆ. ರೂಪಾಯಿ–ಡಾಲರ್ ವಿನಿಮಯ ದರವು ಅಸ್ಥಿರವಾಗಿಯೇ ಇರಲಿದೆ ಎಂದು ಕ್ರಿಸಿಲ್ ಸಂಸ್ಥೆ ಹೇಳಿದೆ. ‘ಕಚ್ಚಾ ತೈಲ ದರ ಇಳಿಕೆ ಆಗುವ ನಿರೀಕ್ಷೆ ಇದ್ದು, ಫೆಡರಲ್ ರಿಸರ್ವ್ ತ್ವರಿತವಾಗಿ ಬಡ್ಡಿದರ ಏರಿಕೆ ಮಾಡುವುದನ್ನು ನಿಲ್ಲಿಸುವುದರಿಂದ ಪ್ರಸಕ್ತ ಹಣಕಾಸು ವರ್ಷದ ಅಂತ್ಯಕ್ಕೆ ರೂಪಾಯಿ ಮೇಲಿನ ಒತ್ತಡ ಕಡಿಮೆ ಆಗಬಹುದು’ ಎಂದು ಕ್ರಿಸಿಲ್‌ನ ಮುಖ್ಯ ಆರ್ಥಿಕ ತಜ್ಞೆ ದೀಪ್ತಿ ದೇಶಪಾಂಡೆ ಹೇಳಿದ್ದಾರೆ.

ಮುಖ್ಯಾಂಶಗಳು

- ತಗ್ಗಿದ ವಿದೇಶಿ ಬಂಡವಾಳ ಒಳಹರಿವು
- ಅಮೆರಿಕದ ಫೆಡರಲ್ ರಿಸರ್ವ್‌ನಿಂದ ಬಡ್ಡಿದರ ಹೆಚ್ಚಳ ನಿರೀಕ್ಷೆ
- ಜಾಗತಿಕ ಮಟ್ಟದಲ್ಲಿ ಹಣದುಬ್ಬರ ದರ ಏರಿಕೆ

ಇನ್ಫೊಸಿಸ್ ಲಾಭ ಶೇ 3.2 ಹೆಚ್ಚಳ



ನವದೆಹಲಿ (ಪಿಟಿಐ): ಐ.ಟಿ. ಸೇವೆಗಳನ್ನು ನೀಡುವ ದೇಶದ ಎರಡನೇ ಅತಿದೊಡ್ಡ ಕಂಪನಿ ಇನ್ಫೊಸಿಸ್, ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ₹ 5,360 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹ 5,195 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 3.2ರಷ್ಟು ಅಲ್ಪ ಏರಿಕೆ ಕಂಡಿದೆ.

ವೆಚ್ಚ ಹೆಚ್ಚಾಗುತ್ತಿರುವುದರಿಂದ ಕಾರ್ಯಾಚರಣಾ ಗಳಿಕೆಯು ಕುಸಿತ ಕಂಡಿದೆ. ಇದು ನಿವ್ವಳ ಲಾಭದ ಮೇಲೆ ಪರಿಣಾಮ ಬೀರಿತು ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಜನವರಿ–ಮಾರ್ಚ್ ತ್ರೈಮಾಸಿಕಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 5.7ರಷ್ಟು ಇಳಿಕೆ ಕಂಡುಬಂದಿದೆ. ಜೂನ್ ತ್ರೈಮಾಸಿಕದಲ್ಲಿ ಕಂಪನಿಯ ವರಮಾನ ಶೇ 23.6ರಷ್ಟು ಬೆಳವಣಿಗೆ ಕಂಡು ₹ 34,470 ಕೋಟಿಗೆ ತಲುಪಿದೆ. ಕಾರ್ಯಾಚರಣಾ ಲಾಭವು ಶೇ 23.7 ರಿಂದ ಶೇ 20.1ಕ್ಕೆ ಇಳಿಕೆ ಆಗಿದೆ. ಇದೇ ವೇಳೆ ಕಾರ್ಯಾಚರಣಾ ವೆಚ್ಚವು ಶೇ 14.4ಕ್ಕೆ ಏರಿಕೆ ಆಗಿದೆ. 2022–23ನೇ ಹಣಕಾಸು ವರ್ಷಕ್ಕೆ ವರಮಾನ ಸಂಗ್ರಹವು ಶೇ 14 ರಿಂದ 16ರಷ್ಟು ಆಗುವ ಅಂದಾಜು ಮಾಡಲಾಗಿದೆ. ಈ ಮೊದಲು ಶೇ 13 ರಿಂದ 15ರಷ್ಟು ಆಗುವ ಅಂದಾಜು ಮಾಡಲಾಗಿತ್ತು.

‘ಅನಿಶ್ಚಿತ ಆರ್ಥಿಕ ಸ್ಥಿತಿಯ ನಡುವೆಯೂ ಮೊದಲ ತ್ರೈಮಾಸಿಕದ ಫಲಿತಾಂಶವು ಒಟ್ಟಾರೆಯಾಗಿ ಉತ್ತಮವಾಗಿದ್ದು, ಕಂಪನಿಯು ಚೇತರಿಕೆ ಕಂಡುಕೊಳ್ಳುವ ಸಾಮರ್ಥ್ಯ ಹೊಂದಿದೆ ಎನ್ನುವುದಕ್ಕೆ ಪುರಾವೆ ಆಗಿದೆ’ ಎಂದು ಕಂಪನಿಯ ಸಿಇಒ ಸಲೀಲ್ ಪಾರೇಖ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಣಕಾಸು: ಉಚಿತ ಸಲಹೆ, ಸಮಸ್ಯೆ ಖಚಿತ



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ವಾರದ ಹಿಂದೆ ಕಾಲೇಜು ದಿನಗಳ ಸ್ನೇಹಿತ ಸಿಕ್ಕಿದ್ದ. ಟೀ ಕುಡಿಯುತ್ತಾ ವಿದ್ಯಾರ್ಥಿ ಜೀವನದ ದಿನಗಳನ್ನು ಮೆಲುಕು ಹಾಕುತ್ತಿದ್ದೆವು. ಮಾತು ಮುಂದುವರಿದಾಗ ಅವನು ಕ್ರಿಪ್ಟೊ ಕರೆನ್ಸಿಯೊಂದರಲ್ಲಿ ₹ 1 ಲಕ್ಷ ನಷ್ಟ ಮಾಡಿಕೊಂಡಿರುವ ಬಗ್ಗೆ ತಿಳಿಸಿದ. ಕ್ರಿಪ್ಟೊ ಬಗ್ಗೆ ತಿಳಿದು ಹೂಡಿಕೆ ಮಾಡಿದೆಯಾ ಎಂದು ಪ್ರಶ್ನೆ ಹಾಕಿದೆ. ಯುಟ್ಯೂಬ್ ಚಾನಲ್‌ವೊಂದರಲ್ಲಿ ಕ್ರಿಪ್ಟೊ ಹೂಡಿಕೆಯಿಂದ ಭಾರೀ ಹಣ ಗಳಿಸಲು ಸಾಧ್ಯವಿದೆ ಎಂದು ಹೇಳಿದರು. ಇದಲ್ಲದೆ ಕ್ರಿಪ್ಟೊ, ಭವಿಷ್ಯದ ಸೂಪರ್ ಕರೆನ್ಸಿ ಆಗುತ್ತದೆ ಎಂಬ ಬಗ್ಗೆ ವಿವಿಧ ವೆಬ್‌ಸೈಟ್‌ಗಳಲ್ಲಿ ಲೇಖನಗಳನ್ನೂ ಓದಿದೆ. ಹೀಗಿರುವಾಗ ನಾನೇಕೆ ರಿಸ್ಕ್ ತೆಗೆದುಕೊಳ್ಳಬಾರದು ಅಂತ ₹ 1 ಲಕ್ಷ ಹೂಡಿಕೆ ಮಾಡಿದೆ. ಆದ್ರೆ ಲಾಭದ ವಿಚಾರ ಹಾಗಿರಲಿ ಈಗ ಅಸಲಿನ ಮೊತ್ತವೂ ಖೋತಾ ಆಗಿದೆ ಎಂದು ಅಲವತ್ತುಕೊಂಡ. ಇದು ಅವನೊಬ್ಬನ ಕಥೆಯಲ್ಲ. ಹೂಡಿಕೆ ಮಾಡುವಾಗ ಪುಕ್ಕಟೆ ಸಲಹೆ ಪಡೆದು ಮುನ್ನಡೆದವರೆಲ್ಲರೂ ಇದೇ ಮಾದರಿಯಲ್ಲಿ ಆರ್ಥಿಕ ನಷ್ಟ ಅನುಭವಿಸುತ್ತಾರೆ.

ವಹಿವಾಟು ಸ್ಥಗಿತಗೊಳಿಸಿವೆ ಹಲವು ಕ್ರಿಪ್ಟೊಗಳು: ಆರ್ಥಿಕ ಸಂಕಷ್ಟದ ಕಾರಣ ನೀಡಿ ಸಿಂಗಾಪುರ ಮೂಲದ ಕ್ರಿಪ್ಟೊ ಎಕ್ಸ್‌ಚೇಂಜ್ ವಾಲ್ಡ್ ವಹಿವಾಟನ್ನು ಸ್ಥಗಿತಗೊಳಿಸಿದೆ. ಥಾಯ್ಲೆಂಡ್, ಇಂಡೊನೇಷ್ಯಾ ಮತ್ತು ಆಸ್ಟ್ರೇಲಿಯಾದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ಜಿಪ್ ಮೆಕ್ಸ್ ಕಂಪನಿ ಕೂಡ ವಹಿವಾಟು ನಿಲ್ಲಿಸಿದೆ. ಇದಲ್ಲದೆ ಅಮೆರಿಕದ ಪೇಮೆಂಟ್ಸ್ ಡಾಟ್ ನೆಟ್ ಕೂಡ ಬಿಕ್ಕಟ್ಟಿನಲ್ಲಿದ್ದು ವ್ಯವಹಾರ ಸ್ಥಗಿತಕ್ಕೆ ಮುಂದಾಗಿದೆ. ಆಳ ಅಗಲ ತಿಳಿಯದೆ ಬೆವರು ಸುರಿಸಿ ಸಂಪಾದಿಸಿದ ದುಡ್ಡನ್ನು ಕ್ರಿಪ್ಟೊ ಕರೆಸಿಗಳ ಮೇಲೆ ಹಾಕಿ ರಾತ್ರೋರಾತ್ರಿ ಶ್ರೀಮಂತರಾಗುವ ಕನಸು ಕಾಣುತ್ತಿದ್ದವರು ಈಗ ಹೂಡಿಕೆಯ ಮೂಲ ಬಂಡವಾಳವನ್ನೇ ಕಳೆದುಕೊಂಡು ತಮಗೆ ತಾವೇ ಹಿಡಿಶಾಪ ಹಾಕಿಕೊಳ್ಳುತ್ತಿದ್ದಾರೆ. ಕ್ರಿಪ್ಟೊ ಬಗ್ಗೆ ಅರೆ ಬರೆ ಮಾಹಿತಿ ನೀಡುವ ಯುಟ್ಯೂಬ್, ಇನ್‌ಸ್ಟಾಗ್ರಾಂ ವಿಡಿಯೊಗಳು, ಉಚಿತ ಹಣಕಾಸು ಸಲಹೆ, ವೆಬ್‌ಸೈಟ್‌ನಲ್ಲಿ ಕಂಡುಬರುವ ಪ್ರಾಯೋಜಿತ ಲೇಖನಗಳು ಹೀಗೆ ಪಕ್ವವಲ್ಲದ ಮೂಲಗಳಿಂದ ಮಾಹಿತಿ ಪಡೆದು ಹಣಕಾಸು ತೀರ್ಮಾನಗಳನ್ನು ತೆಗೆದುಕೊಂಡರೆ ಏನಾಗುತ್ತದೆ ಎನ್ನುವುದಕ್ಕೆ ಮೇಲಿನ ಬೆಳವಣಿಗೆಗಳು ತಾಜಾ ಉದಾಹರಣೆ.

ಇದು ಸೋಶಿಯಲ್ ಮೀಡಿಯಾ ಇನ್‌ಫ್ಲುಯೆನ್ಸರ್‌ಗಳ ಜಮಾನ: ಕನ್ನಡದ ಕೆಲ ಹೆಸರಾಂತ ಚಿತ್ರನಟರು, ಬಾಲಿವುಡ್ ಖ್ಯಾತ ನಾಮರು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸೆಲೆಬ್ರೆಟಿ ಸ್ಟೇಟಸ್ ಇರುವ ಹಲವು ಮಂದಿ ಕ್ರಿಪ್ಟೊ ಕರೆನ್ಸಿಗಳ ಬಗ್ಗೆ ಸಕಾರಾತ್ಮಕವಾಗಿ ಮಾತನಾಡಿದ್ದನ್ನು ಕೇಳಿರಬಹುದು. ಕ್ರಿಪ್ಟೊ ನಿಮ್ಮ ಭವಿಷ್ಯದ ಎಲ್ಲ ಹಣಕಾಸಿನ ಅಗತ್ಯಗಳನ್ನು ಪೂರೈಸುವ ಕಾಮಧೇನು ಎನ್ನುವ ಮಟ್ಟಿಗೆ ಅವರೆಲ್ಲರೂ ಕ್ರಿಪ್ಟೊ ಜಾಹಿರಾತುಗಳನ್ನು ತಮ್ಮ ಇನ್‌ಸ್ಟಾಗ್ರಾಂ, ಫೇಸ್‌ಬುಕ್ ಮತ್ತು ಯುಟ್ಯೂಬ್ ಪ್ಲಾಟ್‌ಫಾರಂಗಳಲ್ಲಿ ಪಸರಿಸಿದರು. ಜನಸಾಮಾನ್ಯರು ಕೂಡ ಆಲೋಚನೆ ಮಾಡದೆ ಅಷ್ಟೇ ವೇಗವಾಗಿ ಕ್ರಿಪ್ಟೊ ಹೂಡಿಕೆಗಳಿಗೆ ಮುಂದಾಗಿ ಕೈ ಸುಟ್ಟುಕೊಂಡರು.



ಇನ್‌ಫ್ಲುಯೆನ್ಸರ್‌ಗಳು ಹೇಗೆ ಹಣ ಗಳಿಸುತ್ತಾರೆ ಗೊತ್ತಾ:? ಉದಾಹರಣೆಗೆ ವ್ಯಕ್ತಿಯೊಬ್ಬ ಹಣಕಾಸು ಸಲಹೆ ಕ್ಷೇತ್ರದಲ್ಲಿ ಒಳ್ಳೆಯ ಹೆಸರು ಮಾಡಿದ್ದು ಆತನ ಯುಟ್ಯೂಬ್ ಚಾನಲ್‌ಗೆ ಸುಮಾರು 20 ಲಕ್ಷ ಮಂದಿ ಚಂದಾದಾರರನ್ನು ಗಳಿದ್ದಾರೆ ಎಂದುಕೊಳ್ಳಿ. ಈತನೊಂದಿಗೆ ಕ್ರಿಪ್ಟೊ ಕರೆನ್ಸಿ ಕಂಪನಿಯೊಂದು ಮಾತುಕತೆ ನಡೆಸಿ ಜಾಹಿರಾತು ಒಪ್ಪಂದ ಮಾಡಿಕೊಳ್ಳುತ್ತದೆ. ಕ್ರಿಪ್ಟೊ ಕರೆನ್ಸಿ ಒಳ್ಳೆಯ ಹೂಡಿಕೆ ಎಂದು ವಿಡಿಯೊ ಮಾಡಿ ಅದನ್ನು ಚಾನಲ್‌ನಲ್ಲಿ ಅಪ್ಲೋಡ್ ಮಾಡಿದರೆ ಪ್ರತಿ ವಿಡಿಯೊಗೆ ₹ 1 ರಿಂದ ₹ 2 ಲಕ್ಷ ರೂಪಾಯಿವರೆಗೆ ಕಮಿಷನ್ ಕೊಡುವುದಾಗಿ ಹೇಳುತ್ತದೆ. ಇದನ್ನು ಆಧರಿಸಿ ಸೋಶಿಯಲ್ ಮೀಡಿಯಾ ಇನ್‌ಫ್ಲುಯೆನ್ಸರ್ ಕ್ರಿಪ್ಟೊ ಕರೆನ್ಸಿಗಳ ಬಗ್ಗೆ ಸಕಾರಾತ್ಮಕ ವಿಡಿಯೊ ಮಾಡುತ್ತಾರೆ.

ಕ್ರಿಪ್ಟೊ ಕರೆನ್ಸಿ ಕಂಪನಿಯೊಂದರಿಂದ ಜಾಹಿರಾತಿಗಾಗಿ ಹಣ ಪಡೆದು ಚಂದಾದಾರರಿಗೆ ಬೇಕಾದ ನಿಸ್ಪಕ್ಷಪಾತ ಮಾಹಿತಿಯನ್ನು ಯುಟ್ಯೂಬರ್ ಹೇಗೆ ತಾನೇ ಒದಗಿಸಲು ಸಾಧ್ಯ ಅಲ್ವಾ? ಹಾಗೆಂದ ಮಾತ್ರಕ್ಕೆ ಎಲ್ಲಾ ಯುಟ್ಯೂಬರ್‌ಗಳು ಸುಳ್ಳು ಹೇಳುತ್ತಾರೆ ಎಂದಲ್ಲ. ಕೆಲ ಯುಟ್ಯೂಬರ್‌ಗಳು ಇದು ಪ್ರಾಯೋಜಿತ ವಿಡಿಯೊ ಎಂದು ನೇರವಾಗಿ ಹೇಳುತ್ತಾರೆ. ಜೊತೆಗೆ ಹೂಡಿಕೆ ಮಾಡುವಾಗ ನೀವು ಎಚ್ಚರಿಕೆವಹಿಸಿ ಎನ್ನುವ ಡಿಸ್‌ಕ್ಲೇಮರ್ (ಎಚ್ಚರಿಕೆ) ಅನ್ನು ನೀಡುತ್ತಾರೆ. ಆದರೆ ಇನ್ನು ಕೆಲವರು ಇದ್ಯಾವುದನ್ನೂ ನೀಡದೆ ಅಮಾಯಕ ಹೂಡಿಕೆದಾರರನ್ನು ದಿಕ್ಕುತಪ್ಪಿಸುತ್ತಾರೆ.

ಇನ್‌ಫ್ಲುಯೆನ್ಸರ್‌ಗಳ ಹಿನ್ನೆಲೆ ಮತ್ತು ಪರಿಣತಿ ಗಮನಿಸಿ: ಯುಟ್ಯೂಬ್, ಇನ್‌ಸ್ಟಾಗ್ರಾಂ, ಫೇಸ್‌ಬುಕ್ ಸೇರಿ ವಿವಿಧ ಸಾಮಾಜಿಕ ಮಾಧ್ಯಮಗಳಲ್ಲಿ ಕಂಡುಬರುವ ಇನ್‌ಫ್ಲುಯೆನ್ಸರ್‌ಗಳ ಹಿನ್ನೆಲೆ ಮತ್ತು ಪರಿಣತಿ ಗಮನಿಸುವುದು ಬಹಳ ಮುಖ್ಯ. ಕೆಲವು ಇನ್‌ಫ್ಲುಯೆನ್ಸರ್‌ಗಳು ವೃತ್ತಿಯಲ್ಲಿ ಚಾರ್ಟರ್ಡ್ ಅಕೌಂಟೆಟ್‌ಗಳಾಗಿರುತ್ತಾರೆ, ಮತ್ತೆ ಕೆಲವರು ರಾಷ್ಟ್ರೀಯ ಷೇರುಮಾರುಕಟ್ಟೆ ಸಂಸ್ಥೆ (NISM) ನಡೆಸುವ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಹಣಕಾಸು ಪರಿಣತರಾಗಿರುತ್ತಾರೆ, ಮ್ಯೂಚುಯಲ್ ಫಂಡ್ ಹೌಸ್‌ಗಳಲ್ಲಿ ಕೆಲವರು ಫಂಡ್ ಮ್ಯಾನೇಜರ್‌ಗಳಾಗಿಯೂ ಕೆಲಸ ಮಾಡುತ್ತಿರುತ್ತಾರೆ. ಹೀಗೆ ಒಂದು ಸೂಕ್ತ ಹಿನ್ನೆಲೆ ಇರುವವರಿಗೆ ಹಣಕಾಸು ಸಲಹೆ ನೀಡುವ ಸಾಮರ್ಥ್ಯವಿರುತ್ತದೆ.

ಷೇರು ಮಾರುಕಟ್ಟೆ ಹೂಡಿಕೆಯಲ್ಲೂ ಇದಾಗುತ್ತೆ: ಇನ್‌ಫ್ಲುಯೆನ್ಸರ್‌ಗಳ ಸ್ಟಾಕ್ ಟಿಪ್ಸ್ ನಂಬಿ ಷೇರು ಹೂಡಿಕೆ ಮಾಡಿ ಅನೇಕ ಜನಸಾಮಾನ್ಯರು ಕೈ ಸುಟ್ಟುಕೊಂಡಿದ್ದಾರೆ. ಷೇರು ಮಾರುಕಟ್ಟೆಯಲ್ಲಿ ನೇರವಾಗಿ ಹೂಡಿಕೆ ಮಾಡುವಾಗ ಅಥವಾ ಟ್ರೇಡಿಂಗ್ ಮಾಡುವಾಗ ಅದರ ಬಗ್ಗೆ ಒಂದಿಷ್ಟು ಜ್ಞಾನ ಹೊಂದಿರಬೇಕು. ಅದಿಲ್ಲದಿದ್ದರೆ ಇನ್‌ಫ್ಲುಯೆನ್ಸರ್‌ಗಳ ಸ್ಟಾಕ್ ಟಿಪ್ಸ್ ನಂಬಿ ಅಂದಾಜಿಗೆ ಹೂಡಿಕೆ ನಿರ್ಧಾರ ಮಾಡಬಾರದು.

ಮೋಸದ ಮಾರಾಟದ ಬಗ್ಗೆ ಎಚ್ಚರಿಕೆ: ಕೆಲ ವಿಮಾ ಏಜೆಂಟ್‌ಗಳು, ಬ್ಯಾಂಕ್ ಎಕ್ಸಿಕ್ಯೂಟಿವ್‌ಗಳು ತಮ್ಮ ಲಾಭಕ್ಕೆ ಅನುಕೂಲವಾಗುವಂತಹ ಕೆಲ ಹಣಕಾಸಿನ ಉತ್ಪನ್ನಗಳನ್ನು ನಿಮಗೆ ಮಾರಾಟ ಮಾಡಲು ಮುಂದಾಗುತ್ತಾರೆ. ಈ ವಿಮೆ ತೆಗೆದುಕೊಂಡರೆ ಅಷ್ಟು ಲಾಭವಾಗುತ್ತೆ, ಈ ಫಂಡ್‌ನಲ್ಲಿ ಸಿಕ್ಕಾಪಟ್ಟೆ ಲಾಭಾಂಶ ಇದೆ ಎಂದೆಲ್ಲಾ ಬಣ್ಣ ಬಣ್ಣದ ಮಾತುಗಳನ್ನಾಡಿ ನಿಮಗೆ ವಾಸ್ತವದಲ್ಲಿ ಅನುಕೂಲ ಮಾಡಿಕೊಡದ ಉತ್ಪನ್ನಗಳ ಮಾರಾಟಕ್ಕೆ ಮುಂದಾಗುತ್ತಾರೆ. ಈ ಬಗ್ಗೆ ನೀವೇ ಎಚ್ಚರಿಕೆವಹಿಸಬೇಕು.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಅನಿಶ್ಚಿತತೆ ನಡುವೆ ಭಾರೀ ಜಿಗಿತ

ಜುಲೈ 22 ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಉತ್ತಮ ಗಳಿಕೆ ಕಂಡಿವೆ. 56,072 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 4.29 ರಷ್ಟು ಗಳಿಸಿಕೊಂಡಿದೆ. 16,719 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 4.17 ರಷ್ಟು ಜಿಗಿದಿದೆ. ತ್ರೈಮಾಸಿಕ ಫಲಿತಾಂಶಗಳಲ್ಲಿ ಕಂಪನಿಗಳ ಉತ್ತಮ ಸಾಧನೆ, ಉತ್ತಮ ಮುಂಗಾರು, ಜಾಗತಿಕ ಮಾರುಕಟ್ಟೆಗಳಲ್ಲಿ ಹೆಚ್ಚಿದ ಸಕಾರಾತ್ಮಕತೆ, ಕಚ್ಚಾ ತೈಲ ಬೆಲೆಯಲ್ಲಿ ಇಳಿಕೆ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಖರೀದಿ ಭರಾಟೆ ಸೇರಿ ಹಲವು ಅಂಶಗಳು ಷೇರುಪೇಟೆ ಜಿಗಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 7.7, ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 6.3, ಬ್ಯಾಂಕ್ ವಲಯ ಶೇ 6 , ಲೋಹ ಸೂಚ್ಯಂಕ ಶೇ 5.4 ರಷ್ಟು ಜಿಗಿದಿವೆ. ಮಿಡ್ ಕ್ಯಾಪ್ ,ಸ್ಮಾಲ್ ಕ್ಯಾಪ್ ಮತ್ತು ಲಾರ್ಜ್ ಕ್ಯಾಪ್ ಸೂಚ್ಯಂಕಗಳು ಶೇ 3.5 ರಿಂದ ಶೇ 4 ರಷ್ಟು ಹೆಚ್ಚಳ ದಾಖಲಿಸಿವೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಅಲ್ಟ್ರಾ ಟೆಕ್ ಸಿಮೆಂಟ್ ಶೇ 5.35, ಗ್ರಾಸಿಮ್ ಶೇ 3.87, ಯುಪಿಎಲ್ ಶೇ 2.84, ಎಚ್‌ಡಿಎಫ್‌ಸಿ ಶೇ 2.39, ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 2.33, ಐಷರ್ ಮೋಟರ್ಸ್ ಶೇ 2.16, ಆಕ್ಸಿಸ್ ಬ್ಯಾಂಕ್ ಶೇ 2.12, ಐಸಿಐಸಿಐ ಶೇ 1.79 ರಷ್ಟು ಜಿಗಿದಿವೆ. ಇನ್ಫೊಸಿಸ್ ಶೇ 1.74, ಟಾಟಾ ಕನ್ಸ್ಯೂಮರ್ ಶೇ 1.74, ಎನ್‌ಟಿಪಿಸಿ ಶೇ 1.26 ಮತ್ತು ಪವರ್ ಗ್ರಿಡ್ ಶೇ 1.08 ರಷ್ಟು ಇಳಿಕೆ ದಾಖಲಿಸಿವೆ.

ಮುನ್ನೋಟ: ಬಜಾಜ್ ಫೈನಾನ್ಸ್, ಬಜಾಜ್ ಫಿನ್‌ಸರ್ವ್, ವಿ ಗಾರ್ಡ್, ಟಾಟಾ ಮೋಟರ್ಸ್, ಮಾರುತಿ ಸುಜುಕಿ, ಟಾಟಾ ಸ್ಟೀಲ್, ಎಕ್ಸಿಸ್ ಬ್ಯಾಂಕ್, ಕೆನರಾ ಬ್ಯಾಂಕ್, ಬಜಾಜ್ ಆಟೋ, ಏಶಿಯನ್ ಪೇಂಟ್ಸ್, ಟಾಟಾ ಪವರ್ ಸೇರಿದಂತೆ ಪ್ರಮುಖ ಕಂಪನಿಗಳು ಈ ವಾರ ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಜಾಗತಿಕ ವಿದ್ಯಮಾನಗಳು ಸೇರಿದಂತೆ ದೇಶಿಯ ಮಾರುಕಟ್ಟೆಯಲ್ಲಾಗುವ ಬದಲಾವಣೆಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ರಿಟೇಲ್ ಸಾಲ ನೀಡಿಕೆ ವೃದ್ಧಿ; ವಸೂಲಾಗದ ಸಾಲದ ಪ್ರಮಾಣ ಇಳಿಕೆ

ಉತ್ತಮ ಗಳಿಕೆ ಕಂಡ ಬ್ಯಾಂಕಿಂಗ್ ಷೇರುಗಳು


ನವದೆಹಲಿ (ಪಿಟಿಐ): ಬಡ್ಡಿದರ ಹೆಚ್ಚಳ, ರಿಟೇಲ್ ಸಾಲ ನೀಡಿಕೆಯಲ್ಲಿ ವೃದ್ಧಿ ಹಾಗೂ ವಸೂಲಾಗದ ಸಾಲದ (ಎನ್‌ಪಿಎ) ಪ್ರಮಾಣ ಇಳಿಕೆ ಆಗಿರುವುದರಿಂದ ಹಲವು ಬ್ಯಾಂಕ್‌ಗಳ ಷೇರುಗಳು ಈ ವರ್ಷ ಉತ್ತಮ ಗಳಿಕೆ ಕಂಡುಕೊಳ್ಳುತ್ತಿವೆ. ಸದ್ಯದ ಮಟ್ಟಿಗೆ ಯಾವುದೇ ಅಡೆತಡೆಗಳು ಇಲ್ಲದೇ ಇರುವುದರಿಂದ ಇದೇ ಸ್ಥಿತಿಯು ಮುಂದುವರಿಯುವ ನಿರೀಕ್ಷೆ ಇದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಷೇರು ವಿನಿಮಯ ಕೇಂದ್ರದಲ್ಲಿ ಇರುವ ಮಾಹಿತಿಯ ಪ್ರಕಾರ, 2022ರ ಆರಂಭದಿಂದ ಈವರೆಗೆ ಬಿಎಸ್‌ಇ ಸೆನ್ಸೆಕ್ಸ್ ಶೇ 4ರಷ್ಟು ಇಳಿಕೆ ಕಂಡಿದೆ. ಇದಕ್ಕೆ ಹೋಲಿಸಿದರೆ, ಬ್ಯಾಂಕಿಂಗ್ ಸೂಚ್ಯಂಕ ಶೇ 5ರಷ್ಟು ಏರಿಕೆ ಆಗಿವೆ. ಕೆಲವು ಬ್ಯಾಂಕ್‌ಗಳ ಷೇರುಗಳ ಮೌಲ್ಯ ಶೇ 30 ರಿಂದ ಶೇ 40ರವರೆಗೆ ಹೆಚ್ಚಾಗಿದೆ.

‘ಐಸಿಐಸಿಐ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ ಮತ್ತು ಎಸ್‌ಬಿಐ ನಿರೀಕ್ಷಿತ ಮಟ್ಟದಲ್ಲಿಯೇ ಗಳಿಕೆ ಕಂಡುಕೊಂಡಿವೆ. ಆದರೆ, ವಿಲೀನದ ನಿರ್ಧಾರದಿಂದಾಗಿ ಎಚ್‌ಡಿಎಫ್‌ಸಿ ಬ್ಯಾಂಕ್ ಷೇರು ಮೌಲ್ಯ ಇಳಿಕೆ ಆಗಿದೆ’ ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಬ್ಯಾಂಕಿಂಗ್ ವಿಶ್ಲೇಷಕ ಅಜಿತ್ ಕಬಿ ಹೇಳಿದ್ದಾರೆ.

‘ಬ್ಯಾಂಕಿಂಗ್ ವಲಯದಲ್ಲಿ ಒಂದು ಕಡೆ ಫೆಡರಲ್ ಬ್ಯಾಂಕ್ ಉತ್ತಮ ಗಳಿಕೆ ಕಂಡಿದ್ದರೆ, ಇನ್ನೊಂದೆಡೆ ಆರ್‌ಬಿಎಲ್ ಬ್ಯಾಂಕ್ ಹೂಡಿಕೆದಾರರನ್ನು ಸೆಳೆಯುವಲ್ಲಿ ಹೆಣಗಾಡುತ್ತಿದೆ. ಐಡಿಎಫ್‌ಸಿ ಫರ್ಸ್ಟ್ ಬ್ಯಾಂಕ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಸ್ಥಿತಿಯೂ ಹೀಗೆಯೇ ಇದೆ. ಬಿಎಸ್‌ಇನಲ್ಲಿ ಎಚ್‌ಡಿಎಫ್‌ಸಿ ಬ್ಯಾಂಕ್ ಈ ವರ್ಷದಲ್ಲಿ ಈವರೆಗೆ ಶೇ 6ರವರೆಗೆ ಇಳಿಕೆ ಕಂಡಿದ್ದರೆ, ಆರ್‌ಬಿಎಲ್ ಬ್ಯಾಂಕ್ ಶೇ 28ರಷ್ಟು ಮತ್ತು ಐಡಿಎಫ್‌ಸಿ ಫರ್ಸ್ಟ್ ಬ್ಯಾಂಕ್ ಶೇ 26ರಷ್ಟು ಕುಸಿತ ಕಂಡಿವೆ’ ಎಂದು ಮಾರ್ಕೆಟ್ಸ್‌ಮೊಜೊ ಕಂಪನಿಯ ಮುಖ್ಯ ಹೂಡಿಕೆ ಅಧಿಕಾರಿ ಸುನಿಲ್ ದಮನಿಯಾ ಹೇಳಿದ್ದಾರೆ.





ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹425
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹425

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹277-560

ದ್ವಿತಳಿ (ಬಿ.ವಿ) ₹211-745

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ



ಕಾರ್ಗಿಲ್ ವಿಜಯ್ ದಿವಸ್ ಸ್ಮರಣಾರ್ಥ ಜಮ್ಮುವಿನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾಗವಹಿಸಿದರು – ಪಿಟಿಐ ಚಿತ್ರ

ಪಿಒಕೆ ಭಾರತದ ಅವಿಭಾಜ್ಯ ಅಂಗ: ಸಚಿವ ರಾಜನಾಥ್ ಸಿಂಗ್

ಪ್ರಜಾವಾಣಿ ವಾರ್ತೆ

ಶ್ರೀನಗರ: ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು 1994ರ ಸಂಸತ್ತಿನ ನಿರ್ಣಯವನ್ನು ಉಲ್ಲೇಖಿಸುತ್ತಾ, ಪಾಕ್ ಆಕ್ರಮಿತ ಕಾಶ್ಮೀರವು ಭಾರತದ ಭಾಗ. ಮತ್ತು ಇದು ಹೀಗೆಯೇ ಮುಂದುವರಿಯಲಿದೆ ಎಂದು ಹೇಳಿದರು.

ಒಂದು ದಿನದ ಭೇಟಿಗಾಗಿ ಜಮ್ಮುವಿಗೆ ಬಂದಿರುವ ರಾಜನಾಥ್ ಸಿಂಗ್, ಜಮ್ಮುವಿನಲ್ಲಿ ಹತ್ಯೆಯಾದ ಭದ್ರತಾ ಸಿಬ್ಬಂದಿ ಹಾಗೂ ಪೊಲೀಸ್ ಅಧಿಕಾರಿಯ ಕುಟುಂಬದವರನ್ನು ಭೇಟಿಯಾದ ಬಳಿಕ, ಕಾರ್ಗಿಲ್ ವಿಜಯ್ ದಿವಸ್ ಸ್ಮರಣಾರ್ಥದ ಸಭೆಯೊಂದರಲ್ಲಿ ಭಾಗವಹಿಸಿ, ‘ಪಿಒಕೆಯನ್ನು ಪ್ರಸ್ತುತ ಪಾಕಿಸ್ತಾನ ವಶಪಡಿಸಿಕೊಂಡಿದೆ’ ಎಂದರು.

‘ಅಲ್ಲಿನ ಜನರು ಭಾರತದ ಅಭಿವೃದ್ಧಿಗೆ ಸಾಕಷ್ಟು ಸಹಕಾರ ನೀಡಿದ್ದಾರೆ. ಪಿಒಕೆಯ ನಿರಾಶ್ರಿತರಿಗೆ ಸಂಪೂರ್ಣ ನ್ಯಾಯ ದೊರಕಬೇಕು. ಅದಕ್ಕಾಗಿ ಅವರು ಈಗ ಭಾರತದತ್ತ ನೋಡುತ್ತಿದ್ದಾರೆ’ ಎಂದರು. ‘ನಾನು ಪಾಕಿಸ್ತಾನಕ್ಕೆ ಬುದ್ಧಿ ನೀಡುವಂತೆ ದೇವರಲ್ಲಿ ಪ್ರಾರ್ಥಿಸುತ್ತೇನೆ. ನೆರೆಯ ರಾಷ್ಟ್ರಕ್ಕೆ ನಮ್ಮ ಸಾಮರ್ಥ್ಯದ ಬಗ್ಗೆ ಈಗಾಗಲೇ ಗೊತ್ತಾಗಿದೆ. ಫೆಬ್ರವರಿ 1994ರ ಸಂಸತ್ತಿನ ನಿರ್ಣಯವು, ಆಕ್ರಮಣದ ಮೂಲಕ ವಶಪಡಿಸಿಕೊಳ್ಳಲಾದ ಜಮ್ಮು ಮತ್ತು ಕಾಶ್ಮೀರದ ಪ್ರದೇಶಗಳನ್ನು ಪಾಕಿಸ್ತಾನವು ತೆರವು ಮಾಡಬೇಕು ಎಂದು ಒತ್ತಾಯಿಸಿತು. ಹಾಗೆಯೇ ಭಾರತದ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುವ ಪಾಕಿಸ್ತಾನದ ಎಲ್ಲಾ ಪ್ರಯತ್ನಗಳನ್ನು ದೃಢವಾಗಿ ಎದುರಿಸಲಾಯಿತು’ ಎಂದು ರಾಜನಾಥ್ ಹೇಳಿದರು.

‘ಯಾವುದೇ ಯುದ್ಧದಲ್ಲಿ ಭಾರತ ಜಯಶಾಲಿಯಾಗಲಿದೆ’: ‘ನಮ್ಮ ಮೇಲೆ ದುಷ್ಟ ನೋಟ ಬೀರುವ ಯಾವುದೇ ವಿದೇಶಿ ಶಕ್ತಿಗಳಿಗೆ ತಕ್ಕ ಉತ್ತರ ನೀಡಲು ಭಾರತ ಸಜ್ಜಾಗಿದೆ. ಯಾವುದೇ ಯುದ್ಧದಲ್ಲಿ ಭಾರತವು ಜಯಶಾಲಿಯಾಗಲಿದೆ’ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ವಿಶ್ವಾಸ ವ್ಯಕ್ತಪಡಿಸಿದರು.

ಫಿಲಿಪ್ಪೀನ್ಸ್‌ನ ವಿವಿ ಕ್ಯಾಂಪಸ್‌ನಲ್ಲಿ ಗುಂಡಿನ ದಾಳಿ: ಮೂವರ ಸಾವು

ಮನಿಲಾ (ಎಪಿ): ಫಿಲಿಪ್ಪೀನ್ ರಾಜಧಾನಿಯ ಹೊರವಲಯದ ಕ್ವೆಝಾನ್ ನಗರದಲ್ಲಿರುವ ಅಟೆನಿಯೊ ದೆ ಮನಿಲಾ ವಿಶ್ವವಿದ್ಯಾಲಯ ಕ್ಯಾಂಪಸ್‌ನಲ್ಲಿ ಭಾನುವಾರ ಬಂದೂಕುಧಾರಿ ವ್ಯಕ್ತಿ ನಡೆಸಿದ ಗುಂಡಿನ ದಾಳಿಯಲ್ಲಿ ಫಿಲಿಪ್ಪೀನ್ ನಗರದ ಮಾಜಿ ಮೇಯರ್ ಸೇರಿ ಕನಿಷ್ಠ ಮೂವರು ಮೃತಪಟ್ಟು, ಒಬ್ಬರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಾಳಿ ಬೆನ್ನಲ್ಲೇ ಎರಡು ಪಿಸ್ತೂಲ್‌ಗಳನ್ನು ಹೊಂದಿದ್ದ ದಾಳಿಕೋರನನ್ನು ವಶಕ್ಕೆ ಪಡೆಯಲಾಗಿದೆ. ವಿಶ್ವವಿದ್ಯಾಲಯದಲ್ಲಿ ಲಾಕ್‌ಡೌನ್ ಜಾರಿ ಮಾಡಲಾಗಿದೆ. ಘಟಿಕೋತ್ಸವ ಕಾರ್ಯಕ್ರಮವನ್ನು ರದ್ದು ಮಾಡಲಾಗಿದೆ. ಘಟನೆ ಬಗ್ಗೆ ತನಿಖೆ ಪ್ರಗತಿಯಲ್ಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಭಾರಿ ಭದ್ರತೆ ಮತ್ತು ಬಂದೂಕು ನಿಷೇಧ ಜಾರಿಯಲ್ಲಿದ್ದರೂ ಈ ಗುಂಡಿನ ದಾಳಿ ನಡೆದಿರುವುದು ಅಚ್ಚರಿ ಮೂಡಿಸಿದೆ. ಇದೇ ನಗರದಲ್ಲಿ ನೂತನ ಅಧ್ಯಕ್ಷ ಫರ್ಡಿನಂಡ್ ಮಾರ್ಕೊಸ್ ಜೂನಿಯರ್ ಅವರು ಸೋಮವಾರ ತಮ್ಮ ಚೊಚ್ಚಲ ಸಾರ್ವಜನಿಕ ಭಾಷಣ ಮಾಡುವ ಕಾರ್ಯಕ್ರಮವಿತ್ತು.

ವಿಮಾನಯಾನ ಸಂಸ್ಥೆಗಳ ವಿಶೇಷ ಲೆಕ್ಕಪರಿಶೋಧನೆ ಆರಂಭಿಸಿದ ಡಿಜಿಸಿಎ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಿಂದಿನ 45 ದಿನಗಳಲ್ಲಿ ಹಲವು ವಿಮಾನಗಳಲ್ಲಿ ತಾಂತ್ರಿಕ ದೋಷ ಕಂಡುಬಂದಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ವಿಮಾನಯಾನ ಸಂಸ್ಥೆಗಳ ವಿಶೇಷ ಲೆಕ್ಕಪರಿಶೋಧನೆ ಆರಂಭಿಸಿದೆ.

‘ಹೋದ ತಿಂಗಳು ಡಿಜಿಸಿಎ, ಹಲವೆಡೆ ಸ್ಥಳ ಪರಿಶೀಲನೆ ನಡೆಸಿತ್ತು. ಪರಿಣತರಲ್ಲದ ಎಂಜಿನಿಯರ್‌ಗಳು ವಿಮಾನಗಳಲ್ಲಿನ ದೋಷಗಳನ್ನು ಪತ್ತೆಹಚ್ಚದೆಯೇ ಅವುಗಳ ಹಾರಾಟಕ್ಕೆ ಅನುಮತಿ ನೀಡಿರುವುದು ಈ ವೇಳೆ ಗಮನಕ್ಕೆ ಬಂದಿತ್ತು’ ಎಂದು ಅಧಿಕಾರಿಯೊಬ್ಬರು ಭಾನುವಾರ ಹೇಳಿದ್ದಾರೆ.

‘ವಿಮಾನಗಳ ನಿಲುಗಡೆ ಸ್ಥಳ ಹಾಗೂ ಅವುಗಳಿಗೆ ಬಿಡಿಭಾಗ ಪೂರೈಸುವ ಮಳಿಗೆಗಳನ್ನು ಗುರಿಯಾಗಿಟ್ಟುಕೊಂಡು ಲೆಕ್ಕಪರಿಶೋಧನೆ ನಡೆಸಲಾಗುತ್ತದೆ. ಈ ಕಾರ್ಯ ಸುಮಾರು ಎರಡು ತಿಂಗಳು ನಡೆಯಲಿದೆ’ ಎಂದು ಡಿಜಿಸಿಎ ಆದೇಶದಲ್ಲಿ ತಿಳಿಸಲಾಗಿದೆ.

‘ವಿಮಾನಯಾನ ಸಂಸ್ಥೆಗಳು ಹೊಂದಿರುವ ತಜ್ಞ ಮಾನವ ಸಂಪನ್ಮೂಲ, ಸಿಬ್ಬಂದಿಯ ಕೆಲಸದ ಅವಧಿ, ವಿಮಾನಗಳ ನಿರ್ವಹಣೆ ಸಂಬಂಧ ಸಂಸ್ಥೆಗಳ ಬಳಿ ಸದ್ಯ ಲಭ್ಯವಿರುವ ದತ್ತಾಂಶ, ಸಿಬ್ಬಂದಿ ಬಳಸುತ್ತಿರುವ ಉಪಕರಣಗಳ ಗುಣಮಟ್ಟ ಹೀಗೆ ವಿವಿಧ ಅಂಶಗಳನ್ನು ಗಮನದಲ್ಲಿಟ್ಟುಕೊಂಡೂ ಲೆಕ್ಕ ಪರಿಶೋಧನೆ ಮಾಡಲಾಗುತ್ತದೆ. ಇದು ಜುಲೈ 19ರಂದೇ ಆರಂಭವಾಗಿದೆ’ ಎಂದೂ ಹೇಳಲಾಗಿದೆ.

ಸಂಕ್ಷಿಪ್ತ ಸುದ್ದಿ

ಶ್ರೀಲಂಕಾ: ಅಧ್ಯಕ್ಷರ ಕಚೇರಿ ಇಂದಿನಿಂದ ಪುನರಾರಂಭ

ಕೊಲಂಬೊ (ಎಎಫ್‌ಪಿ): ಶ್ರೀಲಂಕಾದಲ್ಲಿ ಪ್ರತಿಭಟನಾಕಾರರು ಮುತ್ತಿಗೆ ಹಾಕಿದ್ದ ಅಧ್ಯಕ್ಷರ ಕಚೇರಿಯನ್ನು ಶುಕ್ರವಾರ ಪ್ರತಿಭಟನಾಕಾರರಿಂದ ತೆರವುಗೊಳಿಸಲಾಗಿದ್ದು, ಕಚೇರಿ ಸೋಮವಾರದಿಂದ ಪುನಃ ತೆರೆಯಲಿದೆ. ಮೇ 9ರಿಂದ ಹೇರಲಾಗಿದ್ದ ಸಚಿವಾಲಯದ ಮುತ್ತಿಗೆಯನ್ನು ಈಗ ಹಿಂಪಡೆಯಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಅಧ್ಯಕ್ಷರ ಸಚಿವಾಲಯಕ್ಕೆ ಆಗಿರುವ ಹಾನಿಯನ್ನು ಪರಿಶೀಲಿಸಲು ಮತ್ತು ಪುರಾವೆಗಳನ್ನು ಸಂಗ್ರಹಿಸಲು ವಿಧಿವಿಜ್ಞಾನ ತಜ್ಞರನ್ನು ಕರೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಂತರಿಕ್ಷ ನಿಲ್ದಾಣಕ್ಕೆ ‘ಲ್ಯಾಬ್ ಮಾಡ್ಯೂಲ್’ ಕಳುಹಿಸಿದ ಚೀನಾ

ಬೀಜಿಂಗ್ (ಪಿಟಿಐ): ಚೀನಾವು ನಿರ್ಮಾಣ ಹಂತದಲ್ಲಿರುವ ತನ್ನ ಅಂತರಿಕ್ಷ ನಿಲ್ದಾಣಕ್ಕೆ ಭಾನುವಾರ ಮೊದಲ ‘ಲ್ಯಾಬ್ ಮಾಡ್ಯೂಲ್’ (ಪ್ರಯೋಗಾಲಯವಿರುವ ಕ್ಯಾಬಿನ್) ಕಳುಹಿಸಿದೆ.

ವೆಂಟಿಯಾನ್ ಹೆಸರಿನ ಲ್ಯಾಬ್ ಮಾಡ್ಯೂಲ್ ಹೊತ್ತ ‘ಲಾಂಗ್ ಮಾರ್ಚ್–5ಬಿ ವೈ3’ ರಾಕೆಟ್ ಅನ್ನು ದಕ್ಷಿಣ ಚೀನಾದ ಹೈನಾನ್ ದ್ವೀಪದಲ್ಲಿರುವ ವೆನ್‌ಚಾಂಗ್ ಬಾಹ್ಯಾಕಾಶ ಉಡಾವಣಾ ಕೇಂದ್ರದಿಂದ ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು ಎಂದು ಚೀನಾ ಮ್ಯಾನ್ಡ್ ಸ್ಪೇಸ್ ಏಜೆನ್ಸಿ (ಸಿಎಂಎಸ್‌ಎ) ಹೇಳಿದೆ. ಚೀನಾವು ‘ತಿಯಾಂಗೊಂಗ್’ ಹೆಸರಿನ ಅಂತರಿಕ್ಷ ನಿಲ್ದಾಣವನ್ನು ಸ್ಥಾಪಿಸಲು ಮುಂದಾಗಿದ್ದು, ಇದು ಈ ವರ್ಷವೇ ಪೂರ್ಣಗೊಳ್ಳುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ. ಕರ್ನಲ್ ಚೆನ್ ಡಾಂಗ್, ಲಿಯು ಯಾಂಗ್ ಮತ್ತು ಕಾಯ್ ಕ್ಸುಝೆ ಅವರು ಈ ನಿಲ್ದಾಣದ ನಿರ್ಮಾಣ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ.

2021ರಲ್ಲಿ ಟಿಯಾನ್ಹೆ ಮಾಡ್ಯೂಲ್ ಅನ್ನು ಬಾಹ್ಯಾಕಾಶ ನಿಲ್ದಾಣಕ್ಕೆ ಕಳುಹಿಸಲಾಗಿತ್ತು. ಕೆಲವೇ ಗಂಟೆಗಳಲ್ಲಿ ವೆಂಟಿಯಾನ್ ಮಾಡ್ಯೂಲ್ ಟಿಯಾನ್ಹೆ ಮಾಡ್ಯೂಲ್ ಜೊತೆ ಸಂಧಿಸಲಿದೆ ಎಂದೂ ಸಿಎಂಎಸ್‌ಎ ತಿಳಿಸಿದೆ.

ಕ್ಯಾಲಿಫೋರ್ನಿಯಾ: ಭೀಕರ ಕಾಳ್ಗಿಚ್ಚು, ತುರ್ತು ಪರಿಸ್ಥಿತಿ

ಕ್ಯಾಲಿಫೋರ್ನಿಯಾ (ಎಪಿ): ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಭೀಕರ ಕಾಳ್ಗಿಚ್ಚು ಸಂಭವಿಸಿದ್ದು, ಮೆರಿಪೊಸಾ ಕೌಂಟಿ ಪ್ರದೇಶದಲ್ಲಿ ಗವರ್ನರ್ ತುರ್ತು ಪರಿಸ್ಥಿತಿ ಘೋಷಿಸಿದ್ದಾರೆ.

ಯೊಸೆಮಿಟ್ ರಾಷ್ಟ್ರೀಯ ಉದ್ಯಾನವನದ ಬಳಿ ಬೆಂಕಿ ವೇಗವಾಗಿ ಆವರಿಸುತ್ತಿದೆ ಎಂದು ವರದಿಯಾಗಿದೆ.

ಪ್ರಸಕ್ತ ಸಾಲಿನಲ್ಲಿ ಕ್ಯಾಲಿಫೋರ್ನಿಯಾದಲ್ಲಿ ಎದುರಾಗಿರುವ ಅತ್ಯಂತ ಭೀಕರ ಕಾಳ್ಗಿಚ್ಚು ಇದಾಗಿದೆ.

ಅರಣ್ಯ ಸಮೀಪದಲ್ಲಿ ವಾಸಿಸುತ್ತಿದ್ದ ಸಾವಿರಾರು ಮಂದಿಯನ್ನು ಸ್ಥಳಾಂತರ ಮಾಡಲಾಗಿದ್ದು, 2,000ಕ್ಕೂ ಹೆಚ್ಚು ಮನೆಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. 6,000ಕ್ಕೂ ಹೆಚ್ಚು ನಾಗರಿಕರಿಗೆ ಸ್ಥಳಾಂತರ ಮಾಡುವ ಆದೇಶ ಹೊರಡಿಸಲಾಗಿದೆ ಎಂದು ಸಿಯೆರಾ ರಾಷ್ಟ್ರೀಯ ಅರಣ್ಯದ ವಕ್ತಾರ ಡ್ಯಾನಿಯಲ್ ಪ್ಯಾಟರ್ಸನ್ ತಿಳಿಸಿದ್ದಾರೆ.

400ಕ್ಕೂ ಹೆಚ್ಚು ಅಗ್ನಿಶಾಮಕದಳ, ಹೆಲಿಕಾಪ್ಟರ್, ವಿಮಾನಗಳ ಮೂಲಕ ಬೆಂಕಿ ನಂದಿಸುವ ಕಾರ್ಯಾಚರಣೆ ಜಾರಿಯಲ್ಲಿದೆ.

ಉಕ್ರೇನ್ ಯುದ್ಧನೌಕೆ ಕ್ಷಿಪಣಿ ಧ್ವಂಸ


ಮಾಸ್ಕೊ (ರಾಯಿಟರ್ಸ್/ಎಪಿ): ಉಕ್ರೇನಿನ ಒಡೆಸಾ ಬಂದರು ಮೇಲೆ ಕ್ಷಿಪಣಿ ದಾಳಿ ನಡೆಸಿರುವ ರಷ್ಯಾ ಪಡೆ, ಉಕ್ರೇನ್ ಯುದ್ಧನೌಕೆ ಮತ್ತು ಅಮೆರಿಕ ಪೂರೈಸಿದ ಹಡಗು ನಿಗ್ರಹಿಸುವ ಹಾರ್ಪೂನ್ ಕ್ಷಿಪಣಿಗಳನ್ನು ಭಾನುವಾರ ಧ್ವಂಸಗೊಳಿಸಿದೆ.

ರಷ್ಯಾದ ದೀರ್ಘ ಶ್ರೇಣಿಯ ನಿಖರ–ನಿರ್ದಿಷ್ಟ ನೌಕಾ ಕ್ಷಿಪಣಿಗಳು, ಒಡೆಸಾ ಬಂದರಿನಲ್ಲಿ ಲಂಗರು ಹಾಕಿದ್ದ ಉಕ್ರೇನ್ ಯುದ್ಧನೌಕೆ ಮತ್ತು ಹಾರ್ಪೂನ್ ಕ್ಷಿಪಣಿಗಳ ಗೋದಾಮು ನಾಶಪಡಿಸಿವೆ ಎಂದು ರಕ್ಷಣಾ ಸಚಿವಾಲಯ ವಕ್ತಾರ ಐಗೋರ್ ಕೊನಶೆಂಕೊವ್ ನೀಡಿರುವ ಮಾಹಿತಿ ಉಲ್ಲೇಖಿಸಿ ರಷ್ಯಾದ ಸುದ್ದಿಸಂಸ್ಥೆ ವರದಿ ಮಾಡಿದೆ.

ನೀರಜ್ ಬೆಳ್ಳಿ ಬೆಡಗು

ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಭಾರತಕ್ಕೆ 19 ವರ್ಷಗಳ ನಂತರ ಒಲಿದ ಪದಕ

• ಜಾವೆಲಿನ್ ಥ್ರೋನಲ್ಲಿ ಮಿಂಚಿದ ಭಾರತದ ಕಣ್ಮಣಿ



ಹೆಸರು	ನೀರಜ್ ಚೋಪ್ರಾ
ವಯಸ್ಸು	24
ವೈಯಕ್ತಿಕ ಶ್ರೇಷ್ಠ	89.94 ಮೀಟರ್ಸ್ (2022, ಸ್ಟಾಕ್‌ಹೋಮ್, ಡೈಮಂಡ್ ಲೀಗ್)
ವಿಶ್ವ ರ‍್ಯಾಂಕಿಂಗ್	2
ಕೋಚ್	ಕ್ಲಾಸ್ ಬಾರ್ಟೋನೀಜ್

ಯೂಜಿನ್, ಅಮೆರಿಕ (ಪಿಟಿಐ): ಕ್ರೀಡಾಪ್ರೇಮಿಗಳ ಕಣ್ಮಣಿ ನೀರಜ್ ಚೋಪ್ರಾ ಭಾನುವಾರ ಬೆಳ್ಳಂಬೆಳಿಗ್ಗೆ ಭಾರತೀಯರಿಗೆ ಬೆಳ್ಳಿ ಪದಕದ ಕಾಣಿಕೆ ನೀಡುವುದರೊಂದಿಗೆ 'ಶುಭ ಮುಂಜಾನೆ'ಯ ಸಂದೇಶ ನೀಡಿದರು.

ಅಮೆರಿಕದ ಯೂಜಿನ್‌ನಲ್ಲಿ ನಡೆಯುತ್ತಿರುವ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಪುರುಷರ ಜಾವೆಲಿನ್ ಥ್ರೋನಲ್ಲಿ 88.13 ಮೀಟರ್ಸ್ ದೂರ ಎಸೆತದ ಸಾಧನೆ ಮಾಡಿದ ನೀರಜ್ ಬೆಳ್ಳಿ ಗೆದ್ದರು. ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಭಾರತಕ್ಕೆ ಒಲಿದ ಎರಡನೇ ಮತ್ತು ಪುರುಷರ ವಿಭಾಗದಲ್ಲಿ ಸಂದ ಮೊದಲ ಪದಕ ಇದಾಗಿದೆ.


2003ರಲ್ಲಿ ಪ್ಯಾರಿಸ್‌ನಲ್ಲಿ ನಡೆದಿದ್ದ ವಿಶ್ವ ಅಥ್ಲೆಟಿಕ್ಸ್‌ನ ಮಹಿಳೆಯರ ಲಾಂಗ್‌ಜಂಪ್‌ನಲ್ಲಿ ಅಂಜು ಬಾಬಿ ಜಾರ್ಜ್ ಕಂಚಿನ ಪದಕ ಗಳಿಸಿದ್ದರು. ಅದರ ನಂತರ ಮತ್ತೊಂದು ಪದಕ ಭಾರತದ ಮಡಿಲು ಸೇರಲು 19 ವರ್ಷಗಳು ಬೇಕಾದವು. ಇಡೀ ಭಾರತದ ಕ್ರೀಡಾಭಿಮಾನಿಗಳ ನಿರೀಕ್ಷೆಯ ಭಾರ ಹೊತ್ತು ಕಣಕ್ಕಿಳಿದಿದ್ದ ನೀರಜ್ ನಿರಾಶೆಗೊಳಿಸಲಿಲ್ಲ. ಒಲಿಂಪಿಕ್ಸ್ ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ದೇಶಕ್ಕೆ ಪ್ರಥಮ ಚಿನ್ನದ ಕಾಣಿಕೆ ನೀಡಿದ್ದ ಹರಿಯಾಣ ಹುಡುಗ ವಿಶ್ವ ಅಂಗಳದಲ್ಲಿ ಬೆಳ್ಳಿ ಬೆಡಗು ಮೂಡಿಸಿದರು. ಇಲ್ಲಿಯೂ ಅವರು ಚಿನ್ನ ಗೆಲ್ಲುವ ನಿರೀಕ್ಷೆಯೇ ಹೆಚ್ಚಿತ್ತು. ಟೋಕಿಯೊ ಒಲಿಂಪಿಕ್ಸ್‌ನಲ್ಲಿ (87.58 ಮೀ) ಜಾವೆಲಿನ್ ಎಸೆದಿದ್ದ ದೂರಕ್ಕಿಂತಲೂ ಇಲ್ಲಿ ಸ್ವಲ್ಪ ಹೆಚ್ಚು ದೂರ ಎಸೆದರು. ಆದರೆ, ಗ್ರೆನಾಡದ ಆ್ಯಂಡರ್ಸನ್ ಪೀಟರ್ಸ್ (90.54 ಮೀ) ನೀರಜ್‌ಗಿಂತ ಸುಮಾರು ಒಂದು ಮೀಟರ್‌ನಷ್ಟು ಹೆಚ್ಚು ಅಂತರವನ್ನು ಸಾಧಿಸಿದರು. ಅದರೊಂದಿಗೆ ಚಿನ್ನದ ಪದಕ ಗೆದ್ದರು. ಜೆಕ್ ಗಣರಾಜ್ಯದ ಯಾಕೋಬ್ ವಾದಲೆಹ್ (88.09 ಮೀ) ಕಂಚು ಗಳಿಸಿದರು. ನೀರಜ್‌ಗೆ ಫೈನಲ್ ಸುತ್ತಿನಲ್ಲಿ ಕಠಿಣ ಪೈಪೋಟಿ ಇತ್ತು. ಅವರಿಗೆ ಒಲಿಂಪಿಕ್ಸ್‌ನಲ್ಲಿ ನಿಕಟ ಸ್ಪರ್ಧೆಯೊಡ್ಡಿದ್ದ ಜರ್ಮನಿಯ ಜೂಲಿಯನ್ ವೆಬರ್ ಮತ್ತು ಪಾಕಿಸ್ತಾನದ ಅರ್ಷದ್ ನದೀಂ ಇಲ್ಲಿ ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನ ಪಡೆದರು. ನೀರಜ್ ಈಚೆಗೆ ಪಾವೊ ನರ್ಮಿ ಗೇಮ್ಸ್‌ನಲ್ಲಿ 89.30 ಮೀ ಮತ್ತು ಡೈಮಂಡ್ ಲೀಗ್‌ನಲ್ಲಿ 89.94 ಮೀ ಸಾಧನೆ ಮಾಡಿದ್ದರು. ಅದರಿಂದಾಗಿ ಇಲ್ಲಿ 90 ಮೀಟರ್ಸ್ ಗೆರೆಯನ್ನು ಮೀರಿಸುವ ನಿರೀಕ್ಷೆ ಇತ್ತು. ಆದರೆ, ತೊಡೆಯ ಸ್ನಾಯುವಿನ ಗಾಯ ಅವರನ್ನು ಕಾಡಿತು.

'ಇಲ್ಲಿಯ ಪರಿಸ್ಥಿತಿಯು ಸವಾಲಿನದ್ದಾಗಿತ್ತು. ಎದುರಿನಿಂದ ಗಾಳಿ ಬೀಸುತ್ತಿತ್ತು. ಅಲ್ಲದೇ ಉಳಿದ ಪ್ರತಿಸ್ಪರ್ಧಿಗಳೂ ಉತ್ತಮ ಸಾಮರ್ಥ್ಯವುಳ್ಳವರಾಗಿದ್ದರು. ಆದರೆ ಇಲ್ಲಿ ಉತ್ತಮ ಸಾಧನೆ ಮಾಡುವ ಆತ್ಮವಿಶ್ವಾಸ ನನಗಿತ್ತು. ಮೊದಲ ಮೂರು ಥ್ರೋನಲ್ಲಿ ದೊಡ್ಡ ಅಂತರ ಸಾಧನೆಗೆ ಪ್ರಯತ್ನಿಸುತ್ತಲೇ ಇದ್ದೆ. ಆದರೆ ಆಗಲಿಲ್ಲ. ನಂತರದ ಹಂತದಲ್ಲಿ ಉತ್ತಮ ಥ್ರೋ ಮಾಡಿದೆ' ಎಂದು ನೀರಜ್ ಸಂತಸ ವ್ಯಕ್ತಪಡಿಸಿದ್ದಾರೆ.

ತಮ್ಮ ಗಾಯದ ಬಗ್ಗೆಯೂ ಹೇಳಿದ ಅವರು, 'ನಾಲ್ಕನೇ ಥ್ರೋ ಇನ್ನಷ್ಟು ದೂರ ಸಾಗುವ ನಿರೀಕ್ಷೆ ನನಗಿತ್ತು. ಆದರೆ ನನ್ನ ತೊಡೆಯ ಸ್ನಾಯುವಿನಲ್ಲಿ ನೋವು ಕಾಡಿತು. ಆದ್ದರಿಂದ ನನ್ನ ಶ್ರೇಷ್ಠ ದಾಖಲೆಯನ್ನೂ ಸರಿಗಟ್ಟಲಾಗಲಿಲ್ಲ' ಎಂದರು.

'ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ 19 ವರ್ಷದ ನಂತರ ಪದಕ ಗೆದ್ದುಕೊಟ್ಟಿರುವುದಕ್ಕೆ ಹೆಮ್ಮೆಯಾಗುತ್ತಿದೆ. ಒಲಿಂಪಿಕ್ಸ್‌ಗಿಂತಲೂ ವಿಶ್ವ ಚಾಂಪಿಯನ್‌ಷಿಪ್ ಕಠಿಣ. ಇಲ್ಲಿಯ ದಾಖಲೆಗಳು ಒಲಿಂಪಿಕ್ ಕೂಟಕ್ಕಿಂತಲೂ ಹೆಚ್ಚಿನದ್ದಾಗಿರುತ್ತವೆ' ಎಂದು 24 ವರ್ಷದ ನೀರಜ್ ಹೇಳಿದರು.

ಇದೇ ತಿಂಗಳು ಬರ್ಮಿಂಗ್‌ಹ್ಯಾಮ್‌ನಲ್ಲಿ ಆರಂಭವಾಗಲಿರುವ ಕಾಮನ್‌ವೆಲ್ತ್ ಕೂಟದಲ್ಲಿಯೂ ಚೋಪ್ರಾ ಕಣಕ್ಕಿಳಿಯಲಿದ್ದಾರೆ. ಅಲ್ಲಿಯೂ ಅವರಿಗೆ ಕಠಿಣ ಸವಾಲು ಕಾದಿದೆ. 2018ರ ಗೋಲ್ಡ್‌ಕೋಸ್ಟ್ ಕೂಟದಲ್ಲಿ ಚಿನ್ನ ಜಯಿಸಿದ್ದರು.



ನೀರಜ್ ಅವರು ವಿಜಯಪತಾಕೆಗಳ ಮೂಲಕ ದೇಶ ಹೆಮ್ಮೆಪಡುವಂತೆ ಮಾಡುತ್ತಿದ್ದಾರೆ. ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್ ಜಾವೆಲಿನ್ ಥ್ರೊನಲ್ಲಿ ಬೆಳ್ಳಿ ಪದಕ ಗೆದ್ದು ಐತಿಹಾಸಿಕ ಸಾಧನೆ ಮಾಡಿರುವ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು. ನೀವು ನಿಜವಾದ ಚಾಂಪಿಯನ್

ರಾಮನಾಥ ಕೋವಿಂದ್, ರಾಷ್ಟ್ರಪತಿ



ನಮ್ಮ ಶ್ರೇಷ್ಠ ಅಥ್ಲೀಟ್ ಅದ್ಭುತ ಸಾಧನೆ ಇದು. ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಐತಿಹಾಸಿಕ ಬೆಳ್ಳಿ ಜಯಿಸಿದ ನೀರಜ್ ಅವರಿಗೆ ಅಭಿನಂದನೆಗಳು. ದೇಶದ ಕ್ರೀಡೆಗೆ ಇದೊಂದು ವಿಶೇಷ ಕ್ಷಣ. ನೀರಜ್ ಅವರ ಮುಂಬರುವ ಸ್ಪರ್ಧೆಗಳಿಗೆ ಶುಭ ಹಾರೈಕೆಗಳು.

ನರೇಂದ್ರ ಮೋದಿ, ಪ್ರಧಾನಮಂತ್ರಿ

ಫೈನಲ್‌ನ ಆರು ಪ್ರಯತ್ನಗಳಲ್ಲಿ ನೀರಜ್

ಮೊದಲ	ಫೌಲ್
ಎರಡನೇ	82.39 ಮೀ.
ಮೂರನೇ	86.37 ಮೀ.
ನಾಲ್ಕನೇ	88.13 ಮೀ.
ಐದನೇ ಮತ್ತು ಆರನೇ	ಫೌಲ್

ಪದಕಗಳ ಸಾಧನೆ

ಕ್ರೀಡಾಕೂಟ	ಸ್ಥಳ	ಇಸವಿ	ಪದಕ
ವಿಶ್ವ ಅಥ್ಲೆಟಿಕ್ಸ್	ಯೂಜೀನ್	2022	ಬೆಳ್ಳಿ
ಒಲಿಂಪಿಕ್ಸ್	ಟೋಕಿಯೊ	2021	ಚಿನ್ನ
ಕಾಮನ್‌ವೆಲ್ತ್	ಗೋಲ್ಡ್‌ಕೋಸ್ಟ್	2018	ಚಿನ್ನ
ಏಷ್ಯನ್ ಗೇಮ್ಸ್	ಜಕಾರ್ತ	2018	ಚಿನ್ನ
ಏಷ್ಯನ್ ಚಾಂಪಿಯನ್‌ಷಿಪ್	ಭುವನೇಶ್ವರ	2017	ಚಿನ್ನ
ದಕ್ಷಿಣ ಏಷ್ಯಾ ಗೇಮ್ಸ್	ಗುವಾಹಟಿ	2016	ಚಿನ್ನ
ವಿಶ್ವ ಜೂ.ಚಾಂಪಿಯನ್‌ಷಿಪ್	ಬಿಡ್‌ಗೋಷ್	2016	ಚಿನ್ನ
ಏಷ್ಯನ್ ಜೂ.ಚಾಂಪಿಯನ್‌ಷಿಪ್	ಹೊ ಚಿ ಮಿನ್ ಸಿಟಿ	2016	ಬೆಳ್ಳಿ



ನೀರಜ್ ಚೋಪ್ರಾ ಅವರ ತವರೂರು ಪಾಣಿಪತ್ ಸಮೀಪದ ಗ್ರಾಮದಲ್ಲಿ ಕುಟುಂಬದ ಸದಸ್ಯರು ಮತ್ತು ಗ್ರಾಮಸ್ಥರು ಸಂತಸದಿಂದ ನರ್ತಿಸಿದರು. –ಟ್ವಿಟರ್ ಚಿತ್ರ

ಈ ಬಾರಿಯ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಫೈನಲ್ ತಲುಪಿದವರು (ಭಾರತ)

ಅಥ್ಲೀಟ್	ಕ್ರೀಡೆ	ಸಾಧನೆ
ಮುರಳಿ ಶ್ರೀಶಂಕರ್	ಲಾಂಗ್‌ಜಂಪ್	7ನೇ ಸ್ಥಾನ
ಅವಿನಾಶ್ ಸಬ್ಳೆ	3000 ಮೀ. ಸ್ಟೀಪಲ್‌ಚೇಸ್	11ನೇ ಸ್ಥಾನ
ಅನುರಾಣಿ	ಜಾವೆಲಿನ್ ಥ್ರೊ	7ನೇ ಸ್ಥಾನ
ಎಲ್ದೋಸ್ ಪಾಲ್	ಟ್ರಿಪಲ್ ಜಂಪ್	9ನೇ ಸ್ಥಾನ
ನೀರಜ್ ಚೋಪ್ರಾ	ಜಾವೆಲಿನ್ ಥ್ರೊ	ಬೆಳ್ಳಿ
ರೋಹಿತ್ ಯಾದವ್	ಜಾವೆಲಿನ್ ಥ್ರೊ	10ನೇ ಸ್ಥಾನ
ಅನಾಸ್, ಅಜ್ಮಲ್, ಪಾಂಡಿ, ರಾಜೇಶ್	ಪುರುಷರ 4x100 ಮೀ. ರಿಲೇ	*

* 4x100 ಮೀ. ರಿಲೇ ಫೈನಲ್ ಸೋಮವಾರ ಬೆಳಿಗ್ಗೆ 8.05ಕ್ಕೆ ನಡೆಯಲಿದೆ.



ನೀರಜ್ ಚೋಪ್ರಾ (ಬೆಳ್ಳಿ), ಆ್ಯಂಡರ್ಸನ್ ಪೀಟರ್ಸ್ (ಚಿನ್ನ) ಮತ್ತು ಯಾಕುಬ್ ವಾದಲೆಹ (ಕಂಚು) –ಎಪಿ/ಪಿಟಿಐ

ಇದೇ ಪರಿಸ್ಥಿತಿ ಎದುರಿಸಿದ್ದೆ: ಅಂಜು



ಅಂಜು ಬಾಬಿ ಜಾರ್ಜ್

'ಪ್ಯಾರಿಸ್‌ನಲ್ಲಿ 2013ರಲ್ಲಿ ನಾನು ಎದುರಿಸಿದ ಸ್ಥಿತಿಯನ್ನೇ ನೀರಜ್ ಯೂಜೀನ್‌ನಲ್ಲಿ ಎದುರಿಸಿದ್ದರು. ಮೂರು ಸುತ್ತುಗಳ ಬಳಿಕ ಅವರು ನಾಲ್ಕನೇ ಸ್ಥಾನದಲ್ಲಿದ್ದರು. ನಾನು ಕೂಡ ಮೂರು ಪ್ರಯತ್ನಗಳ ಬಳಿಕ ನಾಲ್ಕನೇ ಸ್ಥಾನದಲ್ಲಿದ್ದೆ. ಪದಕ ಗೆಲ್ಲಲೇಬೇಕೆಂಬ ದೃಢನಿರ್ಧಾರದಿಂದಾಗಿ ನನಗೆ ಯಶಸ್ಸು ಲಭಿಸಿತು. ನೀರಜ್ ಅವರಿಗೂ ಹೀಗೆ ಆಗಿರಬಹುದು' ಎಂದು ವಿಶ್ವ ಅಥ್ಲೆಟಿಕ್ಸ್ ಕಂಚು ವಿಜೇತೆ ಲಾಂಗ್ ಜಂಪ್ ಪಟು ಅಂಜು ಬಾಬಿ ಜಾರ್ಜ್ ಹೇಳಿದ್ದಾರೆ.

ದಿಗ್ಗಜ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್, ಬ್ಯಾಡ್ಮಿಂಟನ್ ಆಟಗಾರ್ತಿ ಸೈನಾ ನೆಹ್ವಾಲ್, ರಾಜಸ್ಥಾನ, ಉತ್ತರ ಪ್ರದೇಶ, ಪಂಜಾಬ್ ಮುಖ್ಯಮಂತ್ರಿಗಳು ನೀರಜ್‌ಗೆ ಅಭಿನಂದನೆ ತಿಳಿಸಿದ್ದಾರೆ.

ಕ್ರಿಕೆಟ್: ಭಾರತಕ್ಕೆ ಸವಾಲಿನ ಗುರಿ ನೀಡಿದ ವಿಂಡೀಸ್

ಶಾಯ್ ಹೋಪ್ ಶತಕದಾಟ



ಶತಕ ಗಳಿಸಿದ ಶಾಯ್ ಹೋಪ್ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಪೋರ್ಟ್ ಆಫ್ ಸ್ಪೇನ್ (ಪಿಟಿಐ): ಆರಂಭಿಕ ಬ್ಯಾಟರ್ ಶಾಯ್ ಹೋಪ್ ತಮ್ಮ ವೃತ್ತಿಜೀವನದ ನೂರನೇ ಏಕದಿನ ಪಂದ್ಯದ ಸಂಭ್ರಮವನ್ನು ಶತಕದ ಮೂಲಕ ಆಚರಿಸಿಕೊಂಡರು.

ಹೋಪ್ (115 ರನ್, 135 ಎ., 4X8, 6X3) ಮತ್ತು ನಾಯಕ ನಿಕೊಲಸ್ ಪೂರನ್ (74 ರನ್, 77 ಎ., 4X1, 6X6) ಅವರ ಸೊಗಸಾದ ಆಟದ ನೆರವಿನಿಂದ ವೆಸ್ಟ್ ಇಂಡೀಸ್ ತಂಡ ಎರಡನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಭಾರತ ತಂಡಕ್ಕೆ ಸವಾಲಿನ ಗುರಿ ನೀಡಿದೆ.

ಕ್ವೀನ್ಸ್ ಪಾರ್ಕ್ ಓವಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಆತಿಥೇಯ ತಂಡ 50 ಓವರ್‌ಗಳಲ್ಲಿ 6 ವಿಕೆಟ್‌ಗೆ 311 ರನ್ ಪೇರಿಸಿತು.

ಗುರಿ ಬೆನ್ನಟ್ಟಿರುವ ಶಿಖರ್ ಧವನ್ ನೇತೃತ್ವದ ಭಾರತ, 10 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 42ರನ್ ಗಳಿಸಿತ್ತು.

ಟಾಸ್ ಗೆದ್ದ ವೆಸ್ಟ್ ಇಂಡೀಸ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಹೋಪ್ ಮತ್ತು ಕೈಲ್ ಮೇಯರ್ಸ್ (39;23ಎ, 4X6, 6X1) ಮೊದಲ ವಿಕೆಟ್ ಜೊತೆಯಾಟದಲ್ಲಿ 65 ರನ್ ಗಳಿಸಿ ಭದ್ರ ಬುನಾದಿ ಹಾಕಿಕೊಟ್ಟರು.

ಒಂಬತ್ತು ಓವರ್‌ಗಳವರೆಗೂ ಭಾರತದ ಬೌಲರ್‌ಗಳನ್ನು ಕಾಡಿದ ಈ ಜೊತೆಯಾಟವನ್ನು ದೀಪಕ್ ಹೂಡಾ ಮುರಿದರು. ತಮ್ಮದೇ ಎಸೆತದಲ್ಲಿ ಕೈಲ್ ಮೇಯರ್ಸ್ ಕ್ಯಾಚ್ ಪಡೆದ ಹೂಡಾ ಸಂಭ್ರಮಿಸಿದರು.

ಕ್ರೀಸ್‌ಗೆ ಬಂದ ಬ್ರೂಕ್ಸ್ ಕೂಡ ಆತ್ಮವಿಶ್ವಾಸಭರಿತ ಆಟವಾಡಿದರು. ಇನ್ನೊಂದೆಡೆ ಇದ್ದ ಶಾಯ್ ಹೋಪ್‌ಗೆ ಉತ್ತಮ ಜೊತೆ ನೀಡಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 62 ರನ್‌ಗಳು ಸೇರಿದವು. 22ನೇ ಓವರ್‌ನಲ್ಲಿ ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ಈ ಜೊತೆಯಾಟವನ್ನು ಮುರಿದರು. ಬ್ರೂಕ್ಸ್ ಹೊಡೆದ ಚೆಂಡನ್ನು ಶಿಖರ್ ಕ್ಯಾಚ್ ಪಡೆದರು. ನಂತರದ ಓವರ್‌ನಲ್ಲಿ ಚಾಹಲ್ ಎಸೆತವನ್ನು ಆಡಿದ ಬ್ರೆಂಡನ್ ಕಿಂಗ್ ಅವರು ಧವನ್‌ಗೆ ಕ್ಯಾಚಿತ್ತು ಸೊನ್ನೆ ಸುತ್ತಿದರು.

ಇದರ ನಂತರ ಬೌಲರ್‌ಗಳಿಗೆ ನಿಜವಾದ ಸವಾಲು ಎದುರಾಯಿತು. ಹೋಪ್ ಜೊತೆಗೂಡಿದ ನಾಯಕ ನಿಕೊಲಸ್ ಪೂರನ್ ತಂಡದ ಮೊತ್ತ ಹೆಚ್ಚಲು ಕಾರಣರಾದರು. ಈ ಜೋಡಿ ನಾಲ್ಕನೇ ವಿಕೆಟ್‌ಗೆ 117 ರನ್ ಕಲೆಹಾಕಿತು.

ಶಾರ್ದೂಲ್ ಠಾಕೂರ್ (54ಕ್ಕೆ 3) ಯಶಸ್ವಿ ಬೌಲರ್ ಎನಿಸಿಕೊಂಡರು. ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ಆವೇಶ್ ಖಾನ್ ಆರು ಓವರ್‌ಗಳಲ್ಲಿ 54 ರನ್ ಕೊಟ್ಟು ದುಬಾರಿಯಾದರು.

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 50 ಓವರ್‌ಗಳಲ್ಲಿ 6 ವಿಕೆಟ್‌ಗೆ 311 (ಶಾಯ್ ಹೋಪ್ 115, ಕೈಲ್ ಮೇಯರ್ಸ್ 39, ಶಾಮ್ರಾ ಬ್ರೂಕ್ಸ್ 35, ನಿಕೊಲಸ್ ಪೂರನ್ 74, ಶಾರ್ದೂಲ್ ಠಾಕೂರ್ 54ಕ್ಕೆ 3, ದೀಪಕ್ ಹೂಡಾ 42ಕ್ಕೆ1, ಅಕ್ಷರ್ ಪಟೇಲ್ 40ಕ್ಕೆ1, ಚಾಹಲ್ 69ಕ್ಕೆ1) ವಿವರ ಅಪೂರ್ಣ

ಬಿಎಫ್‌ಸಿಗೆ ನಾಮ್‌ಗ್ಯಾಲ್ ಭುಟಿಯಾ ನೇತೃತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಗ್ಲೆಂಡ್‌ನಲ್ಲಿ ಮುಂದಿನ ತಿಂಗಳು ನಡೆಯಲಿರುವ ನೆಕ್ಸ್ಟ್‌ಜೆನ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಪಾಲ್ಗೊಳ್ಳುವ ಬೆಂಗಳೂರು ಎಫ್‌ಸಿ ತಂಡವನ್ನು ಡಿಫೆಂಡರ್ ನಾಮ್‌ಗ್ಯಾಲ್ ಭುಟಿಯಾ ಮುನ್ನಡೆಸಲಿದ್ದಾರೆ.

20 ಸದಸ್ಯರ ಬಿಎಫ್‌ಸಿ ತಂಡವನ್ನು ಭಾನುವಾರ ಪ್ರಕಟಿಸಲಾಗಿದ್ದು, ಇತ್ತೀಚೆಗಷ್ಟೇ ಒಪ್ಪಂದ ಮಾಡಿಕೊಂಡಿರುವ ಆಟಗಾರರಾದ ಫೆಲಿಕ್ಸನ್ ಫೆರ್ನಾಂಡಿಸ್, ಕ್ಲಾರೆನ್ಸ್ ಫೆರ್ನಾಂಡಿಸ್ ಮತ್ತು ಅಂಕಿತ್ ಪದ್ಮನಾಭನ್ ಅವರು ಸ್ಥಾನ ಪಡೆದುಕೊಂಡಿದ್ದಾರೆ.

ಬಿಎಫ್‌ಸಿ ಮತ್ತು ಕೇರಳ ಬ್ಲಾಸ್ಟರ್ಸ್ ತಂಡಗಳು ನೆಕ್ಸ್ಟ್ ಜೆನ್ ಕಪ್ ಟೂರ್ನಿಯಲ್ಲಿ ಭಾರತವನ್ನು ಪ್ರತಿನಿಧಿಸುತ್ತಿವೆ. ರಿಲಯನ್ಸ್ ಫೌಂಡೇಷನ್ ಡೆವಲಪ್‌ಮೆಂಟ್ ಲೀಗ್‌ನಲ್ಲಿ ಕ್ರಮವಾಗಿ ಮೊದಲ ಎರಡು ಸ್ಥಾನಗಳನ್ನು ಪಡೆಯುವ ಮೂಲಕ ಈ ತಂಡಗಳು ಅರ್ಹತೆ ಗಳಿಸಿದ್ದವು.

ತಂಡ ಹೀಗಿದೆ: ಗೋಲ್‌ಕೀಪರ್ಸ್: ದೀಪೇಶ್ ಚೌಹಾಣ್, ಶರೋನ್ ಪದತ್ತಿಲ್.

ಡಿಫೆಂಡರ್ಸ್: ಫೆಲಿಕ್ಸನ್ ಫೆರ್ನಾಂಡಿಸ್, ಕ್ಲಾರೆನ್ಸ್ ಫೆರ್ನಾಂಡಿಸ್, ರಾಬಿನ್ ಯಾದವ್, ನಾಮ್‌ಗ್ಯಾಲ್ ಭುಟಿಯಾ, ರಾಜನ್‌ಬೀರ್ ಸಿಂಗ್, ತೊಮ್ಮಿಂಗಾಂಬ ಮೀಟೆ

ಮಿಡ್‌ಫೀಲ್ಡರ್ಸ್: ಕಮಲೇಶ್ ಪಳನಿಸ್ವಾಮಿ, ಬೆಕೆ ಓರಮ್, ಸಿಂಫಿಲ್ ನಂಬ್ರತ್, ದಮೈತ್‌ಪಾಂಗ್ ಲಿಂಗ್ಡೊ, ಲಾಲ್‌ಮಿಂಗ್‌ಚುವಾಂಗ್ ಫನಾಯ್, ಲಾಲ್‌ಮೆತುವಾಂಗ ಫನಾಯ್/

ಸ್ಟ್ರೈಕರ್ಸ್: ಲಾಲ್‌ಪೆಕ್ಲುವ, ಮೊನೀರುಲ್ ಮೊಲ್ಲಾ, ಅಂಕಿತ್ ಪದ್ಮನಾಭನ್, ಥಾಯ್ ಸಿಂಗ್, ಶಿವಶಕ್ತಿ ನಾರಾಯಣನ್, ಆಕಾಶ್‌ದೀಪ್ ಸಿಂಗ್

ಟಿಟಿ: ವೈಯಕ್ತಿಕ ಚಿನ್ನದ ಮೇಲೆ ಸತ್ಯನ್ ಕಣ್ಣು

ಬೆಂಗಳೂರು: ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಈ ಬಾರಿ ವೈಯಕ್ತಿಕ ವಿಭಾಗದಲ್ಲಿ ಚಿನ್ನದ ಪದಕ ಜಯಿಸುವ ವಿಶ್ವಾಸವಿದೆ ಎಂದು ಭಾರತದ ಟೇಬಲ್ ಟೆನಿಸ್ ಆಟಗಾರ ಜಿ. ಸತ್ಯನ್ ಹೇಳಿದ್ದಾರೆ.

'ಭಾರತ ತಂಡದಲ್ಲಿ ಈ ಸಲ ಅನುಭವಿ ಮತ್ತು ಯುವ ಆಟಗಾರರು ಇದ್ದಾರೆ. ನಾನು 2018ರಲ್ಲಿ ಮೊದಲ ಬಾರಿ ಕಾಮನ್‌ವೆಲ್ತ್ ಕೂಟದಲ್ಲಿ ಆಡಿದ್ದೆ. ಆಗ ನಮ್ಮ ತಂಡವು ಪದಕ ಜಯಿಸಿತ್ತು. ಕಳೆದ ನಾಲ್ಕು ವರ್ಷಗಳಲ್ಲಿ ಉತ್ತಮ ತರಬೇತಿ ಮತ್ತು ಜಾಗತಿಕ ಮಟ್ಟದ ಕ್ರೀಡಾಕೂಟಗಳಲ್ಲಿ ಆಡಿದ ಅನುಭವ ನನ್ನ ಆತ್ಮವಿಶ್ವಾಸವನ್ನು ವೃದ್ಧಿಸಿದೆ. ಕೌಶಲಗಳನ್ನೂ ಸುಧಾರಿಸಿಕೊಂಡಿದ್ದೇನೆ. ಆದ್ದರಿಂದ ವೈಯಕ್ತಿಕ ವಿಭಾಗದಲ್ಲಿಯೂ ಗೆಲ್ಲುವ ಭರವಸೆ ಮೂಡಿದೆ' ಎಂದು ಸತ್ಯನ್ ಸೋನಿ ಸ್ಪೋರ್ಟ್ಸ್ ಆಯೋಜಿಸಿದ್ದ ಮಾಧ್ಯಮ ಸಂವಾದದಲ್ಲಿ ಹೇಳಿದರು.

'ಫಿಟ್‌ನೆಸ್ ನಿರ್ವಹಣೆಯಲ್ಲಿಯೂ ಭಾರತದ ಟಿಟಿ ಆಟಗಾರರು ಬಹಳಷ್ಟು ಸುಧಾರಣೆ ಮಾಡಿಕೊಂಡಿದ್ದಾರೆ. ಚೀನಾ, ಜಪಾನ್ ಆಟಗಾರರನ್ನೂ ಸಮರ್ಥವಾಗಿ ಎದುರಿಸಬಲ್ಲ ವಿಶ್ವಾಸ ಮೂಡಿದೆ. ನನ್ನ ಆಟದಲ್ಲಿ ವೇಗಕ್ಕೆ ಮಹತ್ವ ಕೊಡುತ್ತಿದ್ದೇನೆ' ಎಂದರು.

ಕ್ರಿಕೆಟ್‌ನ ಎಲ್ಲ ಮಾದರಿಗೆ ನಿವೃತ್ತಿ ಪ್ರಕಟಿಸಿದ ಆಟಗಾರ್ತಿ

ಕರುಣಾ ಜೈನ್ ವಿದಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಮಹಿಳಾ ಕ್ರಿಕೆಟ್ ತಂಡದ ವಿಕೆಟ್‌ಕೀಪರ್ ಆಗಿದ್ದ ಕರುಣಾ ಜೈನ್ ಅವರು ಕ್ರಿಕೆಟ್‌ನ ಎಲ್ಲ ಮಾದರಿಗಳಿಗೆ ಭಾನುವಾರ ನಿವೃತ್ತಿ ಪ್ರಕಟಿಸಿದ್ದಾರೆ.

ಬೆಂಗಳೂರಿನ ಕರುಣಾ ತಮ್ಮ ವೃತ್ತಿ ಜೀವನದಲ್ಲಿ ರಾಷ್ಟ್ರೀಯ ತಂಡವನ್ನು ಮಾತ್ರವಲ್ಲದೆ ಕರ್ನಾಟಕ, ಪುದುಚೇರಿ ಮತ್ತು ದಕ್ಷಿಣ ವಲಯ ತಂಡಗಳ ಪರ ಆಡಿದ್ದರು.



ಕರುಣಾ ಜೈನ್

‘ಸಂತಸ ಮತ್ತು ಸಂತೃಪ್ತ ಭಾವದೊಂದಿಗೆ, ಕ್ರಿಕೆಟ್‌ನ ಎಲ್ಲ ಮಾದರಿಗಳಿಗೆ ನಿವೃತ್ತಿ ಪ್ರಕಟಿಸುತ್ತಿದ್ದೇನೆ. ಮುಂದಿನ ದಿನಗಳಲ್ಲಿ ಕ್ರಿಕೆಟ್‌ನ ಬೆಳವಣಿಗೆಗೆ ಏನಾದರೂ ಕೊಡುಗೆ ನೀಡುವುದನ್ನು ಎದುರುನೋಡುತ್ತಿದ್ದೇನೆ’ ಎಂದು 36 ವರ್ಷದ ಕರುಣಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

2004 ರಲ್ಲಿ ವೆಸ್ಟ್ ಇಂಡೀಸ್ ಎದುರಿನ ಏಕದಿನ ಪಂದ್ಯದೊಂದಿಗೆ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಅವರು 44 ಪಂದ್ಯಗಳಿಂದ 987 ರನ್ ಕಲೆಹಾಕಿದ್ದಾರೆ. ಒಂದು ಶತಕ (103), ಐದು ಅರ್ಧಶತಕಗಳನ್ನು ಗಳಿಸಿದ್ದಾರೆ. ಚೊಚ್ಚಲ ಪಂದ್ಯದಲ್ಲಿ 64 ರನ್ ಗಳಿಸಿ ಮಿಂಚಿದ್ದರು.


ಐದು ಟೆಸ್ಟ್‌ಗಳನ್ನು ಆಡಿದ್ದು, 195 ರನ್ ಗಳಿಸಿದ್ದಾರೆ. 9 ಟಿ20 ಪಂದ್ಯಗಳಲ್ಲೂ ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸಿದ್ದಾರೆ. 2014ರ ಬಳಿಕ ಅವರು ಯಾವುದೇ ಅಂತರರಾಷ್ಟ್ರೀಯ ಪಂದ್ಯ ಆಡಿಲ್ಲ.

ಏಕದಿನ ಕ್ರಿಕೆಟ್‌ನಲ್ಲಿ ಕ್ಯಾಚ್ ಮತ್ತು ಸ್ಟಂಪಿಂಗ್ ಮೂಲಕ 58 ಬ್ಯಾಟರ್‌ಗಳು ಔಟ್ ಆಗಲು ಕಾರಣರಾಗಿದ್ದರೆ, ಟಿ20ಯಲ್ಲಿ 12 ಮಂದಿಯನ್ನು ಔಟ್ ಮಾಡಲು ನೆರವಾಗಿದ್ದರು.

ಎಂಎಂಎಸ್‌ಸಿ ಡ್ರ್ಯಾಗ್ ರೇಸಿಂಗ್: ಹೇಮಂತ್ ಮುದ್ದಪ್ಪ ಮಿಂಚು

ಚೆನ್ನೈ (ಪಿಟಿಐ): ಮಂತ್ರ ರೇಸಿಂಗ್ ತಂಡದ, ಬೆಂಗಳೂರಿನ ಹೇಮಂತ್ ಮುದ್ದಪ್ಪ ಎಂಎಂಎಸ್‌ಸಿ ಎಫ್‌ಎಂಎಸ್‌ಸಿಐ ಇಂಡಿಯನ್ ನ್ಯಾಷನಲ್ ಡ್ರ್ಯಾಗ್ ರೇಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದರು.

ಭಾನುವಾರ ಇಲ್ಲಿಯ ಮದ್ರಾಸ್ ಇಂಟರ್‌ನ್ಯಾಷನಲ್ ಸರ್ಕೀಟ್‌ನಲ್ಲಿ ಆರಂಭವಾದ ರೇಸ್‌ನ ಮೂರು ವಿಭಾಗಗಳಲ್ಲಿ ಅವರು ಜಯ ಸಾಧಿಸಿದರು. ಒಂಬತ್ತು ಬಾರಿ ರಾಷ್ಟ್ರೀಯ ಚಾಂಪಿಯನ್ ಆಗಿರುವ ಹೇಮಂತ್, 4 ಸ್ಟ್ರೋಕ್ ಸೂಪರ್ ಸ್ಪೋರ್ಟ್ 1051 ಸಿಸಿ–1650 ಸಿಸಿ (ಸುಜುಕಿ ಹಯಾಬುಸಾ), 4 ಸ್ಟ್ರೋಕ್ ಸೂಪರ್ ಸ್ಪೋರ್ಟ್ 551–850 ಸಿಸಿ (ಕವಾಸಕಿ ಜೆಡ್‌ಎಕ್ಸ್6ಆರ್)



ಹೇಮಂತ್ ಮುದ್ದಪ್ಪ

ಮತ್ತು 851– 1050cc ವಿಭಾಗಗಳಲ್ಲಿ ಅಗ್ರಸ್ಥಾನ ಗಳಿಸಿದರು.

ಹೇಮಂತ್ ಅವರಿಗೆ ಕ್ಲೀನ್‌ಸ್ವೀಪ್ ಮಾಡುವ ಅವಕಾಶ ಇತ್ತು. ಆದರೆ ತಾಂತ್ರಿಕ ಸಮಸ್ಯೆಗಳ ಕಾರಣ, ಅನ್‌ರಿಸ್ಟ್ರಿಕ್ಟೆಡ್ ಓಪನ್ ವಿಭಾಗದಲ್ಲಿ ಅವರಿಗೆ ಏಳನೇ ಸ್ಥಾನ ಲಭಿಸಿತು.

ಟೆನಿಸ್: ಮುಖ್ಯ ಸುತ್ತಿಗೆ ರಜಿನಿ

16 ವರ್ಷದೊಳಗಿನವರ ಎಐಟಿಎ ಸೂಪರ್ ಸಿರೀಸ್ ಟೂರ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಆಟವಾಡಿದ ರೂರಿಕ್ ರಜಿನಿ ಹಾಗೂ ಪಾಲ್ ಚರಣ್ ತೇಜ್ ಅವರು ಕರ್ನಾಟಕ ಎಐಟಿಎ ಸೂಪರ್ ಸಿರೀಸ್ 16 ವರ್ಷದೊಳಗಿನವರ ಟೆನಿಸ್ ಟೂರ್ನಿಯ ಮುಖ್ಯ ಸುತ್ತಿಗೆ ಪ್ರವೇಶಿಸಿದರು.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಅಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ, ಬಾಲಕರ ವಿಭಾಗದ ಅಂತಿಮ ಅರ್ಹತಾ ಸುತ್ತಿನಲ್ಲಿ ಭಾನುವಾರ ಕರ್ನಾಟಕದ ರೂರಿಕ್ 6-2, 6-3ರಿಂದ ತಮಿಳುನಾಡಿನ ಶ್ರೇಯಸ್ ನರೇಂದ್ರನ್ ಅವರನ್ನು ಸೋಲಿಸಿದರು. ಮತ್ತೊಂದು ಪಂದ್ಯದಲ್ಲಿ ಪಾಲ್ ಚರಣ್ ತೇಜ್ 6-1, 6-4ರಿಂದ ಚಂದನ್ ಸಾಯಿರಾಮ್ ಪೊಕ್ಕುಲಾ ಅವರನ್ನು ಮಣಿಸಿದರು.

ಬಾಲಕರ ವಿಭಾಗದ ಅರ್ಹತಾ ಸುತ್ತಿನ ಇನ್ನುಳಿದ ಅಂತಿಮ ಪಂದ್ಯಗಳಲ್ಲಿ ಅಭ್ರದೀಪ್ ಭಟ್ಟಾಚಾರ್ಯ 6-3, 6-0ರಿಂದ ಅರ್ಜುನ್ ಸೂರಿ ಎದುರು, ಕೌಶಿಕ್ ಅರುಣ್ ಕುಮಾರ 6-0, 6-1 ಕೌಶಿಕ್ ರಾಜೇಶ್ ವಿರುದ್ಧ, ಅಥರ್ವ ಮಿಶ್ರಾ 6-3, 6-1ರಿಂದ ಅದ್ವೈತ್ ಅಗರವಾಲ್ ವಿರುದ್ಧ, ವಿಷ್ಣು ಮೋಹನ್ 6-0, 6-0ರಿಂದ ಅಭಯ್ ಭಾರದ್ವಾಜ್ ಎದುರು, ಅನುರಾಗ್ ಶೌರ್ಯ 6-0, 6-1ರಿಂದ ಅನಂತ್ ಕೃಷ್ಣನ್ ವಿರುದ್ಧ, ಬಾಲಗಣೇಶ್ ಪಟೇಲ್ 6-1, 6-2ರಿಂದ ತೇಜಸ್ ಆರ್. ಎದುರು ಜಯ ಸಾಧಿಸಿದರು,

ಬಾಲಕಿಯರ ವಿಭಾಗದ ಅರ್ಹತಾ ಸುತ್ತಿನ ಅಂತಿಮ ಹಣಾಹಣಿಗಳಲ್ಲಿ ದಿಶಾ ಖಂಡೋಜಿ 6-0, 6-1ರಿಂದ ಮೇಘನಾ ಪೊಕ್ಕುಲುರಿ ಎದುರು, ಶ್ರೇಯಾಂಶಿ ಘಿವಾರಿ 6-1, 6-0ರಿಂದ ಮನಸ್ವಿನಿ ಕೆ.ಪಿ. ಎದುರು, ಮನ್ವಿತಾ ರಾಜೇಂದ್ರ 7-6 (2), 6-4ರಿಂದ ತನು ವಿಶ್ವಾಸ್ ವಿರುದ್ಧ, ಚಿಂಗಟಗೆರೆ ನವೀನ 6-2, 6-2ರಿಂದ ಎಲಿನ್ ಹರ್ಷಿಣಿ ಜಾನ್ಸನ್ ವಿರುದ್ಧ, ಅಹಿದಾ ಸಿಂಗ್ 6-0, 6-1ರಿಂದ ಕವಿಯಾ ಸರವಣನ್ ಎದುರು, ಇಂದೂಷಾ ನಿಮಕಾಯಲ 6-1, 6-2ರಿಂದ ರಿಯಾ ಗಂಗಮಾ ಪುಡಿಯೊಕ್ಕಡ ಎದುರು, ಅನ್ವೇಷಾ ಧರ 6-3, 6-0ರಿಂದ ಗದ್ದಂ ಗೀತಿಕಾ ವಿರುದ್ಧ ಜಯಿಸಿದರು. ಪೂಜಾ ನಾಗರಾಜ್‌ಗೆ ವಾಕ್ ಓವರ್ ಲಭಿಸಿತು.

ಕ್ರಿಕೆಟ್: ಮತ್ತೆ ಮಿಂಚಿದ ಚಾಂಡಿಮಲ್



ದಿನೇಶ್ ಚಾಂಡಿಮಲ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಗಾಲ್ (ಪಿಟಿಐ): ಪ್ರದರ್ಶನದಲ್ಲಿ ಸ್ಥಿರತೆ ಕಾಪಾಡಿಕೊಂಡಿರುವ ದಿನೇಶ್ ಚಾಂಡಿಮಲ್ (80 ರನ್, 137ಎ) ಅವರ ಜವಾಬ್ದಾರಿಯುತ ಆಟದ ನೆರವಿನಿಂದ ಶ್ರೀಲಂಕಾ ತಂಡ, ಪಾಕಿಸ್ತಾನ ವಿರುದ್ಧದ ಎರಡನೇ ಟೆಸ್ಟ್‌ನಲ್ಲಿ ಉತ್ತಮ ಮೊತ್ತ ಪೇರಿಸಿದೆ.

ಗಾಲ್ ಕ್ರೀಡಾಂಗಣದಲ್ಲಿ ಭಾನುವಾರ ಆರಂಭವಾದ ಪಂದ್ಯದ ದಿನದಾಟದ ಅಂತ್ಯಕ್ಕೆ ಆತಿಥೇಯ ತಂಡ ಮೊದಲ ಇನಿಂಗ್ಸ್‌ನಲ್ಲಿ 6 ವಿಕೆಟ್‌ಗೆ 315 ರನ್ ಗಳಿಸಿದೆ.


ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಲಂಕಾ ತಂಡಕ್ಕೆ ಒಶಾದ ಫೆರ್ನಾಂಡೊ (50) ಮತ್ತು ದಿಮುತ್ ಕರುಣರತ್ನೆ (40) ಮೊದಲ ವಿಕೆಟ್‌ಗೆ 92 ರನ್ ಸೇರಿಸಿ ಉತ್ತಮ ಆರಂಭ ನೀಡಿದರು.

ಮಧ್ಯಮ ಕ್ರಮಾಂಕದಲ್ಲಿ ಚಾಂಡಿಮಲ್, ಏಂಜೆಲೊ ಮ್ಯಾಥ್ಯೂಸ್ (42) ಹಾಗೂ ಧನಂಜಯ ಡಿಸಿಲ್ವಾ ಪಾಕ್ ಬೌಲಿಂಗ್ ದಾಳಿಯನ್ನು ಸಮರ್ಥವಾಗಿ ಎದುರಿಸಿ ನಿಂತರು. ಚಾಂಡಿಮಲ್ ಮೊದಲ ಟೆಸ್ಟ್‌ನ ಎರಡೂ ಇನಿಂಗ್ಸ್‌ಗಳಲ್ಲಿ ಅರ್ಧಶತಕ ಗಳಿಸಿದ್ದರು.

ನಿರೋಶನ್ ಡಿಕ್ವೆಲಾ ಅಜೇಯ 42 ರನ್‌ಗಳೊಂದಿಗೆ ಎರಡನೇ ದಿನಕ್ಕೆ ಬ್ಯಾಟಿಂಗ್ ಕಾಯ್ದಿರಿಸಿಕೊಂಡಿದ್ದಾರೆ.

ಮ್ಯಾಥ್ಯೂಸ್‌ಗೆ 100ನೇ ಟೆಸ್ಟ್: ಲಂಕಾ ತಂಡದ ಆಲ್‌ರೌಂಡರ್ ಏಂಜೆಲೊ ಮ್ಯಾಥ್ಯೂಸ್ ಅವರಿಗೆ ಇದು 100ನೇ ಟೆಸ್ಟ್ ಆಗಿದೆ. ಪಂದ್ಯದ ಆರಂಭಕ್ಕೆ ಮುನ್ನ ಶ್ರೀಲಂಕಾ ಕ್ರಿಕೆಟ್ ಸಂಸ್ಥೆ ವತಿಯಿಂದ ಅವರನ್ನು ಸನ್ಮಾನಿಸಲಾಯಿತು. ಮ್ಯಾಥ್ಯೂಸ್ 2009 ರಲ್ಲಿ ಇದೇ ತಾಣದಲ್ಲಿ ಪಾಕ್ ವಿರುದ್ಧವೇ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್ ಶ್ರೀಲಂಕಾ 6ಕ್ಕೆ 315 (86 ಓವರ್) ಒಶಾದ ಫೆರ್ನಾಂಡೊ 50, ದಿಮುತ್ ಕರುಣರತ್ನೆ 40, ಏಂಜೆಲೊ ಮ್ಯಾಥ್ಯೂಸ್ 42, ದಿನೇಶ್ ಚಾಂಡಿಮಲ್ 80, ಧನಂಜಯ ಡಿಸಿಲ್ವಾ 33, ನಿರೋಶನ್ ಡಿಕ್ವೆಲಾ ಬ್ಯಾಟಿಂಗ್ 42, ಮೊಹಮ್ಮದ್ ನವಾಜ್ 71ಕ್ಕೆ 2



ಮ್ಯಾಕ್ಸ್ ವರ್ಸ್ಟ್ಯಾಪನ್ ಸಂಭ್ರಮ– ಎಎಫ್‌ಪಿ ಚಿತ್ರ

ವರ್ಸ್ಟ್ಯಾಪನ್‌ಗೆ ಫ್ರೆಂಚ್ ಗ್ರ್ಯಾನ್‌ಪ್ರಿ ಕಿರೀಟ

ಲೆ ಕ್ಯಾಸಲೆಟ್, ಫ್ರಾನ್ಸ್ (ಎಎಫ್‌ಪಿ/ಪಿಟಿಐ): ವಿಶ್ವ ಚಾಂಪಿಯನ್ ಮ್ಯಾಕ್ಸ್ ವರ್ಸ್ಟ್ಯಾಪನ್ ಅವರು ಫ್ರೆಂಚ್ ಗ್ರ್ಯಾನ್ ಪ್ರಿ ಫಾರ್ಮುಲಾ ಒನ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ಭಾನುವಾರ ಸುಡುಬಿಸಿಲಿನಲ್ಲಿ ನಡೆದ ರೇಸ್‌ನಲ್ಲಿ ರೆಡ್‌ಬುಲ್ ತಂಡದ ಚಾಲಕ, ನೆದರ್ಲೆಂಡ್ಸ್‌ನ ವರ್ಸ್ಟ್ಯಾಪನ್ ಅವರು ಲೂಯಿಸ್ ಹ್ಯಾಮಿಲ್ಟನ್ (ಮರ್ಸಿಡಿಸ್ ತಂಡ) ಅವರನ್ನು ಹಿಂದಿಕ್ಕಿದರು. ಇದು ವರ್ಸ್ಟ್ಯಾಪನ್ ಅವರಿಗೆ 300ನೇ ರೇಸ್ ಆಗಿತ್ತು.

ಅದ್ಭುತ ಚಾಲನಾ ಕೌಶಲ ಮೆರೆದ ವರ್ಸ್ಟ್ಯಾಪನ್ ಅವರು 10.587 ಸೆಕೆಂಡುಗಳಿಂದ ಹ್ಯಾಮಿಲ್ಟನ್ ಅವರನ್ನು ಹಿಂದಿಕ್ಕಿದರು. ಮರ್ಸಿಡಿಸ್ ತಂಡದ ಇನ್ನೊಬ್ಬ ಚಾಲಕ ಜಾರ್ಜ್ ರಸೆಲ್ ಮೂರನೇ ಸ್ಥಾನ ಗಳಿಸಿದರು.

ಲೆಕ್ಲೆರ್ಕ್ ಕಾರು ಅಪಘಾತ: ಪೋಲ್ ಪೊಸಿಷನ್ ಪಡೆದಿದ್ದ ಮೊನಾಕೊ ದೇಶದ, ಫೆರಾರಿ ಚಾಲಕ ಚಾರ್ಲ್ಸ್ ಲೆಕ್ಲೆರ್ಕ್ ಕಾರು ಅಪಘಾತಕ್ಕೀಡಾಯಿತು. ಗಾಯಗೊಂಡ ಅವರು ರೇಸ್‌ನಿಂದ ಹಿಂದೆ ಸರಿದರು.

ದಾರುವಾಲಾಗೆ ಎರಡನೇ ಸ್ಥಾನ: ಭಾರತದ ಜೆಹಾನ್ ದಾರುವಾಲಾ ಅವರು ಇಲ್ಲಿಯೇ ನಡೆದ ಫಾರ್ಮುಲಾ 2 ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ಸ್ಥಾನ ಗಳಿಸಿದರು.

10ನೆಯವರಾಗಿ ಸ್ಪರ್ಧೆ ಆರಂಭಿಸಿದ ಜೆಹಾನ್, ಬಳಿಕ ಏಳು ಸ್ಪರ್ಧಿಗಳನ್ನು ಹಿಂದಿಕ್ಕುವಲ್ಲಿ ಯಶಸ್ವಿಯಾದರು. ಈ ಋತುವಿನಲ್ಲಿ ಐದನೇ ಬಾರಿ ‘ರನ್ನರ್ ಅಪ್’ ಆದ ಸಾಧನೆ ಮಾಡಿದರು.

ಬೋಪಣ್ಣ ಜೋಡಿ ರನ್ನರ್ಸ್‌ಅಪ್

ಹ್ಯಾಂಬರ್ಗ್ (ಪಿಟಿಐ): ರೋಹನ್ ಬೋಪಣ್ಣ ಮತ್ತು ನೆದರ್ಲೆಂಡ್ಸ್‌ನ ಮ್ಯಾಟ್‌ವೆ ಮಿಡಲ್‌ಕೂಪ್ ಜೋಡಿಯು ಹ್ಯಾಂಬರ್ಗ್ ಓಪನ್ ಟೆನಿಸ್ ಟೂರ್ನಿಯಲ್ಲಿ ರನ್ನರ್ಸ್ ಅಪ್ ಆಗಿದೆ.

ಭಾನುವಾರ ಇಲ್ಲಿ ನಡೆದ ಟೂರ್ನಿಯ ಫೈನಲ್ ಪಂದ್ಯದಲ್ಲಿ ಕರ್ನಾಟಕದ ಬೋಪಣ್ಣ– ಮಿಡಲ್‌ಕೂಪ್ 2–6, 4–6ರಿಂದ ಬ್ರಿಟಿಷ್ ಮತ್ತು ಫಿನ್‌ಲೆಂಡ್‌ನ ಜೋಡಿ ಲಾಯ್ಡ್ ಗ್ಲಾಸ್‌ಪೂಲ್ ಮತ್ತು ಹ್ಯಾರಿ ಹೆಲಿವಾರ ಎದುರು ಮಣಿಯಿತು.



ಬೋಪಣ್ಣ

ಈ ವರ್ಷದ ಫ್ರೆಂಚ್ ಓಪನ್ ಟೂರ್ನಿಯಲ್ಲಿ ಸೆಮಿಫೈನಲ್ ತಲುಪಿದ್ದ ಭಾರತ– ನೆದರ್ಲೆಂಡ್ಸ್ ಆಟಗಾರರು, ಒಂದು ತಾಸಿಗಿಂತ ಹೆಚ್ಚು ಕಾಲ ನಡೆದ ಪಂದ್ಯದಲ್ಲಿ ಎದುರಾಳಿಗೆ ಸೋತರು.

ಡಬಲ್ಸ್ ವಿಭಾಗದಲ್ಲಿ 21ನೇ ರ‍್ಯಾಂಕಿಂಗ್‌ನಲ್ಲಿರುವ ಬೋಪಣ್ಣ ಅವರಿಗೆ ಇದು ಟೂರ್ ಮಟ್ಟದಲ್ಲಿ ನಾಲ್ಕನೇ ಫೈನಲ್ ಆಗಿತ್ತು. ಇದಕ್ಕೂ ಮೊದಲು ಅಡಿಲೇಡ್ ಇಂಟರ್‌ನ್ಯಾಷನಲ್ ಮತ್ತು ಮಹಾರಾಷ್ಟ್ರ ಓಪನ್ ಎಟಿಪಿ ಟೂರ್ನಿಗಳಲ್ಲಿ ಪ್ರಶಸ್ತಿ ಜಯಿಸಿದ್ದರು.